..ಪನ್ಯಾಸ
..ಂಥಮಾಲೆ

೧೫೦

ಶೇಕ್ಸಪಿಯರರ ನಾಟಕಗಳಲ್ಲಿ ಸಾಮಾಜಿಕ ಪ್ರಜ್ಞೆ

ವ್ಹಿ. ಕೆ. ನವಲಗುಂದ,
ಎಂ. ಎ., ಎಲ್. ಬಿ.

..ರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಅಕ್ಟೋಬರ, ೧೯೭೨

Narasimha Murthy B.A.

ಉಪನ್ಯಾಸ ಗ್ರಂಥಮಾಲೆ

೧೫೦

ಶೇಕ್ಸಪಿಯರನ ನಾಟಕಗಳಲ್ಲಿ ಸಾಮಾಜಿಕ ಪ್ರಜ್ಞೆ

ವ್ಹಿ. ಕೆ. ನವಲಗುಂದ, ಎಂ. ಎ., ಎಲ್. ಟಿ.

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಅಕ್ಟೋಬರ, ೧೯೭೨

ಪ್ರಕಾಶಕರು :
ಎಸ್. ಎಸ್. ಒಡೆಯರ, ಎಂ. ಎ., ಎಲ್ಎಲ್. ಬಿ.
ರಜಿಸ್ಟ್ರಾರ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ : ಅಕ್ಟೋಬರ, ೧೯೭೨
೫,೦೦೦ ಪ್ರತಿಗಳು

ಬೆಲೆ : ೨೫ ಪೈಸೆ

ಮುದ್ರಕರು :
ಶ್ರೀಮತಿ ಎಸ್. ಎಮ್. ಹಿರೇಮಠ.
ಮಾಡರ್ನ ಪ್ರೆಸ್, ಶುಕ್ರವಾರ ಪೇಟ,
ಕಾಮನಕಟ್ಟಿ, ಧಾರವಾಡ – ೧

ಮುನ್ನುಡಿ

ನಮ್ಮ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ವಿಭಾಗವು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿ ತಿಂಗಳು ಏರ್ಪಡಿಸುತ್ತಿರುವ ಉಪನ್ಯಾಸ ಶಿಬಿರಗಳು ದಿನೇ ದಿನೇ ಜನಪ್ರಿಯವಾಗುತ್ತ ಸಾಗಿರುವುದು ನಿಜವಾಗಿಯೂ ಸಂತೋಷದ ಸಂಗತಿ. ಈ ಜ್ಞಾನಪ್ರಸಾರದ ಕಾರ್ಯದಲ್ಲಿ ಭಾಗ ವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕವೊದಗುವದಲ್ಲದೆ ಎಂಥ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭವಾದ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೧೪೯ ಪುಸ್ತಕಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ಮೂರು-ನಾಲ್ಕು ಮುದ್ರಣಗಳನ್ನೂ ಕಂಡಿರುವದು ಈ ಮಾಲೆಯ ಉಪಯುಕ್ತತೆಯನ್ನೂ ಜನ ಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯ ಧನಸಹಾಯ ಆಯೋಗದವರು ಉಪನ್ಯಾಸ ಶಿಬಿರಗಳಿಗೂ, ಈ ಪುಸ್ತಿಕೆಗಳ ಪ್ರಕಟನೆಗೂ ನೆರವು ನೀಡುತ್ತಿದ್ದು ಅವರಿಗೆ ವಿಶ್ವವಿದ್ಯಾಲಯವು ತನ್ನ ಕೃತಜ್ಞತೆಗಳನ್ನು ಸೂಚಿಸುತ್ತದೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖವಾದ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
೨-೧೦-೧೯೭೨

ಎ. ಎಸ್. ಅಡಕೆ
ಕುಲಪತಿಗಳು

ಅರಿಕೆ

ಕರ್ನಾಟಕ ವಿಶ್ವವಿದ್ಯಾಲಯದ ೧೫೩ನೆಯ ಉಪನ್ಯಾಸ ಶಿಬಿರವು ಧಾರವಾಡ ಜಿಲ್ಲೆಯ ಅಬ್ಬಿಗೇರಿಯಲ್ಲಿ ೧೯೭೨ ರ ಮೇ ತಿಂಗಳ ೨೮ ಮತ್ತು ೨೯ ರಂದು ಸಾಂಗವಾಯಿತು. ಅಬ್ಬಿಗೇರಿ ಹಳ್ಳಿಯಾದರೂ ಕೂಡ ಸಾಕಷ್ಟು ಸುಶಿಕ್ಷಿತರಿರುವ ಸ್ಥಳ. ಮಗ್ಗುಲದ ನರೇಗಲ್ಲದಲ್ಲೇ ಶ್ರೀ ಅನ್ನದಾನೇಶ್ವರ ಮಹಾವಿದ್ಯಾಲಯ ಹಾಗೂ ಪ್ರೌಢಶಾಲೆಗಳು ವಿದ್ಯಾಪ್ರಸಾರದ ಕೇಂದ್ರಗಳಾಗಿವೆ. ಇಂಥ ಸುಶಿಕ್ಷಿತ ಪರಿಸರದಲ್ಲಿ ನನ್ನ ಭಾಷಣವನ್ನು ಏರ್ಪಡಿಸಿತ್ತು. ಪ್ರಶಾಂತ, ಪ್ರಸನ್ನ ವಾತಾವರಣದಲ್ಲಿ ನಡೆದ ಈ ಶಿಬಿರ ನನಗೂ ನನ್ನ ಇತರ ಸ್ನೇಹಿತರಿಗೂ ಸವಿಯಾದ ನೆನಪಾಗಿ ಉಳಿಯಬಲ್ಲದು.

ನಾನು "ಶೇಕ್ಸಪಿಯರನ ನಾಟಕಗಳಲ್ಲಿ ಸಾಮಾಜಿಕ ಪ್ರಜ್ಞೆ" ಎಂಬ ವಿಷಯವಾಗಿ ಉಪನ್ಯಾಸ ಮಾಡಿದೆ. ಆ ಉಪನ್ಯಾಸವನ್ನು ಆಧರಿಸಿ ಪುಸ್ತಿಕೆ ರೂಪುಗೊಂಡಿದೆ.

ಶೇಕ್ಸಪಿಯರನ ವಿಷಯವಾಗಿ ಆಂಗ್ಲ ಭಾಷೆಯಲ್ಲಿ ಅನೇಕ ಗ್ರಂಥಗಳನ್ನು ಅನೇಕ ವಿದ್ವಾಂಸರು ಬರೆದಿದ್ದಾರೆ. ಬರೆಯುತ್ತಲೂ ಇದ್ದಾರೆ. ಅವನ ವಿಷಯವಾಗಿ ಮಾತನಾಡುವದಾಗಲಿ, ಬರೆಯುವದಾಗಲಿ ಎಂದರೆ ಮಹಾಸಾಗರವನ್ನೇ ನಾವು ಅಳೆದು ಬಗೆದಂತೆ, ಅಥವಾ ಎತ್ತರದ ಹಿಮಾಲಯದ ಮೇಲೆ ನಿಂತು ಈ ಪ್ರಪಂಚವನ್ನೇ ವಿಹಂಗಮ ದೃಷ್ಟಿಯಿಂದ ನೋಡಿದಂತೆ. ಆ ಮಹಾಕವಿ, ನಾಟಕಕಾರನ ಜೀವನದ ದೃಷ್ಟಿಯ ವಿಷಯವಾಗಿ ಈ ಪುಸ್ತಿಕೆಯಲ್ಲಿ ಸಾರಾಂಶ ರೂಪದಲ್ಲಿ ಸಂಕ್ಷೇಪವಾಗಿ ಹೇಳಲಾಗಿದೆ. “ ಶೇಕ್ಸಪಿಯರನ ನಾಟಕಗಳಲ್ಲಿ ಸಾಮಾಜಿಕ ಪ್ರಜ್ಞೆ” ಈ ವಿಷಯವಾಗಿ ನಾವು ಬರೆದಷ್ಟೂ ಕಡಿಮೆಯೆ. ಈ ವಿಷಯವಾಗಿ ಆದಷ್ಟು ವಿಮರ್ಶಾ ಪೂರ್ವಕವಾಗಿ ಎಷ್ಟು ಹೇಳಬೇಕೋ ಅಷ್ಟನ್ನು ಹೇಳಲು ಪ್ರಯತ್ನಿಸಲಾಗಿದೆ. ಈ ಚಿಕ್ಕ ಹಸ್ತ ಪ್ರತಿಯನ್ನು ನೋಡಿ ಸೂಕ್ತ ಸಲಹೆಗಳನ್ನು ನೀಡಿದ ಡಾ|| ಶಂಕರ ಮೊಕಾಶಿ ಪುಣೇಕರ ಅವರಿಗೆ ನಾನು ಕೃತಜ್ಞನಾಗಿದ್ದೇನೆ. ಗ್ರಂಥವು ಶೇಕ್ಸಪಿಯರನ ಪ್ರೇಮಿಗಳಿಗೂ, ಅಭ್ಯಾಸಿಗಳಿಗೂ, ವಿದ್ಯಾರ್ಥಿ ಗಳಿಗೂ ಉಪಯೋಗವಾಗುತ್ತದೆಂದು ನಂಬಿದ್ದೇನೆ. ವ್ಯಾಸಂಗ ವಿಸ್ತರಣದ ಪ್ರಸ್ತುತ ಶಿಬಿರವನ್ನು ಯೋಜಿಸಿದ ಶ್ರೀ ಚೆನ್ನವೀರ ಕಣವಿ (ನಿರ್ದೇಶಕರು), ಶಿಬಿರದಲ್ಲಿ ನಮ್ಮೊಂದಿಗೆ ಇದ್ದು ಕೊಂಡು ಯೋಜನೆಯನ್ನು ಕಾರ್ಯಕ್ಷಮಗೊಳಿಸಿದ ಶ್ರೀ ಗುಡ್ಡಿನ (ಸಹಾಯಕರು ನಿರ್ದೇಶಕರು), ವ್ಯವಸ್ಥೆಯನ್ನು

ಅಚ್ಚುಕಟ್ಟಾಗಿ ನೆರವೇರಿಸಿದ ಅಬ್ಬಿಗೇರಿಯ ತರುಣ ಸಂಘದವರು, ಈ ಪುಸ್ತಿಕೆಯನ್ನು ಅಂದವಾಗಿ ಮುದ್ರಿಸಿದ ಧಾರವಾಡದ ಮಾಡರ್ನ ಪ್ರೆಸ್‌ದವರು ಇವರೆಲ್ಲರಿಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

"ಸಾಯಿಸದನ"
ಎಕ್ಸಟೆನ್‌ಶನ್
ರಾಮದುರ್ಗ
೧೯-೯-೧೯೭೨

ವ್ಹಿ. ಕೆ. ನವಲಗುಂದ

ಪರಿವಿಡಿ

೧. ಸಾಹಿತ್ಯ-ಸಂಸ್ಕೃತಿ-ಸಮಾಜ

ಸಾಹಿತ್ಯವು ವಾಸ್ತವ ಜೀವನದ ಕೇವಲ ಅಪ್ಪಟವಾದ ಪ್ರತಿ ಅಥವಾ ನಕಲು ಆಗಲಾರದು. ಆದರೆ ಅದು ಸಾಹಿತಿಯ ದೃಷ್ಟಿ ವೈಶಾಲ್ಯದಿಂದ ಮೂಡಿಬಂದ ಜೀವನದ ಯಥಾರ್ಥದರ್ಶನ ಚಿತ್ರ. ಪ್ರತಿಯೊಬ್ಬ ಸಾಹಿತಿಗೂ ಜೀವನದ ವಿಚಾರವಾಗಿ ತನ್ನದೇ ಆದ ದೃಷ್ಟಿಕೋನವಿರುತ್ತದೆ. ಯಾವದೇ ಇಬ್ಬರು ಸಾಹಿತಿಗಳ ಮನೋಧರ್ಮಗಳು ಒಂದೇ ಆಗಿರಲು ಸಾಧ್ಯವಿಲ್ಲ. ಆದ್ದರಿಂದ ನಾವು ಯಾವದೇ ಒಂದು ಗ್ರಂಥವನ್ನು ಓದಲು ಹಿಂದೆ ಅಡಗಿದ ಗ್ರಂಥಕರ್ತನ ಕರ್ತೃತ್ವ ಶಕ್ತಿಯೆಡೆಗೆ ನಮ್ಮ ಲಕ್ಷ ಕೇಂದ್ರೀಕೃತವಾಗುತ್ತದೆ. ಸಾಹಿತ್ಯವು ಜೀವನವನ್ನು ಪ್ರತಿನಿಧೀಕರಣ ಮಾಡುವದಷ್ಟೇ ಅಲ್ಲದೇ ಅದು ಸಾಹಿತಿಯ

ಕಲಾಪ್ರೌಢಿಮೆಯನ್ನು ಬಿತ್ತರಿಸುತ್ತದೆ. ಸಾಹಿತ್ಯವೆಂದರೆ ಕೇವಲ ಆತ್ಮಚರಿತ್ರೆ, ಅಥವಾ ಭಾವಗೀತೆಗಳಲ್ಲ. ಚಿತ್ರ ಗೋಚರತ್ವ ಪ್ರಧಾನವಾದ ನಾಟಕ, ಕಾದಂಬರಿಗಳೂ ಕೂಡ ಅದರಲ್ಲಿ ಕೂಡಿಕೊಂಡಿವೆ. ಸಾಹಿತಿಯು ತನ್ನ ವ್ಯಕ್ತಿತ್ವವನ್ನು ಕಲೆಯ ಮುಖಾಂತರ ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ ಅಭಿವ್ಯಕ್ತಪಡಿಸುತ್ತಾನೆ. ಈ ವ್ಯಕ್ತಿತ್ವವೇ ಕಲೆಯ ಪ್ರತಿಯೊಂದು ವಿಭಾಗದ ಒರೆಗಲ್ಲು. ಈ ವ್ಯಕ್ತಿತ್ವವೇ ಕಲೆಯ ಅಸ್ಪಷ್ಟ ಲಕ್ಷಣವನ್ನು ರೂಪುಗೊಳಿಸುತ್ತದೆ.

ಸಾಹಿತ್ಯದ ಸ್ಥೂಲವಾದ ಅವಲೋಕನವು ನಮ್ಮನ್ನು ಸಾಹಿತಿಯ ಜೀವನ, ಅವನ ವಿಚಾರಸರಣಿ, ಅನುಭವ ಮನಸ್ಸಿನ ಮೇಲೆ ಪ್ರಭಾವ ಬೀರಿದ, ಹಾಗೂ ಅವನ ವ್ಯಕ್ತಿತ್ವವನ್ನು ರೂಪಿಸಿದ ಅವನ ಕಾಲದ ಪರಿಸರಗಳ ಅವಲೋಕನದೆಡೆಗೆ ಕರೆದೊಯ್ಯುತ್ತದೆ. ವಿಮರ್ಶಾತ್ಮಕವಾದ ವಿವೇಚನೆಯನ್ನು ನಾವು ಮಾಡಿದಾಗಲೇ ಥ್ಯಾಕರೆಯು ಏಕೆ ವಿಮರ್ಶಕನೂ,ಸತ್ಯನಿಷ್ಠುರನೂ ಆದನೆಂಬುದೂ, ಇದರ ಪ್ರತಿರೋಧವಾಗಿ ಡಿಕನ್ಸನು ಏಕೆ ತಟಸ್ಥನಾದನೆಂದೂ ಗೊತ್ತಾಗುತ್ತದೆ. ಸಾಹಿತಿಯು ಕೇವಲ ತಾನೊಬ್ಬನೇ ನಡುಗಡ್ಡೆಯಂತೆ ಜೀವಿಸಲಾರ. ತಾನು ಜೀವಿಸಿರುವ ಪರಿಸರದಿಂದ ಸ್ಫೂರ್ತಿ ಪಡೆದು, ಜೀವಕಳೆ ತುಂಬಿಕೊಂಡಿರುವ ವ್ಯಕ್ತಿ,ಯಾದ ಸಾಹಿತಿಯು ಯಾವ ಪರಿಸರದಲ್ಲಿ ಜೀವಿಸಿರುವನೋ ಆ ಪರಿಸರದ ವಿಶಿಷ್ಟಗುಣ-ಲಕ್ಷಣಗಳ ಅವಲೋಕನನಮಗೆ ಅವಶ್ಯ. ಆದ್ದರಿಂದ

ಸಾಹಿತ್ಯವು ಸಾಹಿತಿಯ ಜೀವನದ ಅಭಿವ್ಯಕ್ತಿಯಷ್ಟೇ ಅಲ್ಲದೇ ಅದು ಅವನ ಕಾಲದ ಜೀವನದ ಪ್ರತಿಬಿಂಬ. ವಿಶಾಲವಾದ ಯಥಾದರ್ಶನತ್ವದಲ್ಲಿ ಸಾಹಿತ್ಯವು ಒಂದು ದೇಶದ ವೈಶಿಷ್ಟ್ಯ, ಬುದ್ಧಿಮತ್ತೆಗಳ ಆಯಾಕಾಲದ ಪ್ರಗಮನಶೀಲ, ಆದೇಶ ಹಾಗೂ ಪ್ರವಚನ. ಈ ವಿಷಯವನ್ನು ನಾವಿಲ್ಲಿ ವಿವರವಾಗಿ ಚರ್ಚಿಸ ಬೇಕಾಗಿದೆ. ಪ್ರತಿ ದೇಶದ ಇತಿಹಾಸವನ್ನು ನಾವು ವಿವಿಧ ಯುಗಗಳಲ್ಲಿ ವಿಂಗಡಿಸುತ್ತೇವೆ. ಈ ಒಂದೊಂದು ವಿಭಾಗವೂ ತನ್ನದೇ ಆದ ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಿಕ ಧ್ಯೇಯಗಳನ್ನು ಗುಣ-ಲಕ್ಷಣಗಳನ್ನು ಹೊಂದಿರುತ್ತದೆ. ಇಂಗ್ಲೀಷ ಸಾಹಿತ್ಯದಲ್ಲಿ ನಾವು ವಿವಿಧ ಪಂಥಗಳ, ಯುಗಗಳ ಹೆಸರುಗಳನ್ನು ಕೇಳುತ್ತಿದ್ದೇವೆ. ಉದಾಹರಣಾರ್ಥವಾಗಿ ಮಧ್ಯ ಕಾಲೀನ ಸಾಹಿತ್ಯಕಯುಗ, ಎಲಿಜಬೆಥ್ ಸಾಹಿತ್ಯಿಕಯುಗ ಅಗಸ್ಟನ್ ಸಂಪ್ರದಾಯ ಸಾಹಿತ್ಯಿಕಯುಗ, ವ್ಹಿಕ್ಟೋರಿಯನ್ ಸಾಹಿತ್ಯಿಕಯುಗ ನವ್ಯಕಾವ್ಯ ಪಂಥದಯುಗ, ಇವೇ ಮೊದಲಾದ ಯುಗಗಳು ಪ್ರಸಿದ್ಧವಾಗಿವೆ. ಮಧ್ಯಯುಗದ ಜನರಲ್ಲಿ ಅಜ್ಞಾನ ಹಾಗೂ ಮೂಢ ನಂಬಿಕೆಗಳು ಬಲವಾಗಿ ಬೇರೂರಿದ್ದವು. ಜಮೀನದಾರಿ ಪದ್ಧತಿ ಹಾಗೂ ಧಾರ್ಮಿಕ ಅಂಧಶ್ರದ್ಧೆಗಳು ಇಂಗ್ಲೀಷ ಜನರಲ್ಲಿ ಹಾಸುಹೊಕ್ಕಾಗಿದ್ದವು. ಚಾಸರ ಹಾಗೂ ಲ್ಯಾಂಗಲ್ಯಾಂಡ ಅವರ ಕೃತಿಗಳಲ್ಲಿ ಮಧ್ಯಕಾಲೀನಯುಗದ ಸಂಸ್ಕೃತಿಯ ಪ್ರತಿಬಿಂಬವನ್ನು ಕಾಣಬಹುದು. ರಿನೈಸಾನ್ಸ್ ಹಾಗೂ ಎಲಿಜಬೆಥ್ ಕಾಲದ ಇಂಗ್ಲಂಡದಲ್ಲಿ ಸಂಸ್ಕೃತಿ, ವಿದ್ಯೆಗಳ ಪುನರುತ್ಥಾನವನ್ನು

ನಾವು ಕಾಣಬಹುದು. ಹೊಸ ಸಂಶೋಧನೆಗಳು ಜೀವನದ ಪ್ರತಿಯೊಂದು ವಿಭಾಗದಲ್ಲಿ ಕಾಣಿಸಿಕೊಂಡವು. ಆ ಕಾಲದ ಜನರಲ್ಲಿ ಉತ್ಸಾಹ ಭಾವೋದ್ವೇಗ ಆಕಾಂಕ್ಷೆಗಳು ಒಮ್ಮಡಿ-ಗೊಂಡು ಸಾಹಿತ್ಯಕೃತಿ, ಸಂಶೋಧನೆಗಳ ಮುಖಾಂತರ ಪ್ರವಹಿಸಿದವು.

ಹಡಸನ್‌ನು ಹೇಳುವಂತೆ ಪ್ರತಿಯೊಂದು ಯುಗದಲ್ಲೂ ನಾವು ಸಮಯದ ಚೈತನ್ಯವನ್ನು ಕಾಣುತ್ತೇವೆ, ಅಥವಾ ಅನುಭವಿಸುತ್ತೇವೆ. ಈ ಸಮಯದ ಚೈತನ್ಯವು ಪ್ರತಿ ಯುಗದ ಜನರ ವಿಚಾರಧಾರೆ, ಸಂಸ್ಕೃತಿ, ಸಾಹಿತ್ಯ ಭಾವ ಗಳ ಮೇಲೆ ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷವಾಗಿ ಪರಿಣಾಮ ವನ್ನುಂಟು ಮಾಡುತ್ತದೆ. ಆದ್ದರಿಂದ ಸಾಹಿತ್ಯವು ಸಮಯದ ಚೈತನ್ಯ (Time Spirit) ವನ್ನು ಪ್ರತಿಬಿಂಬಿಸುತ್ತದೆ. ಯಾವ ಸಾಹಿತಿಯಾಗಲಿ ಈ ಸಮಯದ ಚೈತನ್ಯದ ಪ್ರಭಾವ-ದಿಂದ ಸಂಪೂರ್ಣವಾಗಿ ಸ್ವತಂತ್ರನಾಗಲಾರ. ಅವನು ಒಂದು ದೇಶದ ನಾಗರಿಕನು ಹೇಗೆ ಆಗಿದ್ದಾನೋ ಅದೇ ರೀತಿ ತನ್ನ ಕಾಲದ ಪರಿಸರದ ಒಂದು ಭಾಗವೂ ಅವನು ಆಗಿದ್ದಾನೆ. ಪರಿಸರದ ಒಂದು ಜೀವನದ ಭಾಗವಾಗಿರುವದರಿಂದಲೇ ಅತನು ಸಾಹಿತ್ಯಕೃತಿಯ ನಿರ್ಮಾಪಕನಾಗುತ್ತಾನೆ. ಕೇವಲ ತನ್ನ ಸಮಕಾಲೀನ ಯುಗದ ಚೈತನ್ಯವನ್ನು ಮಾತ್ರ ಸಾಹಿತಿಯು ತನ್ನ ಸಾಹಿತ್ಯದಲ್ಲಿ ವ್ಯಕ್ತಪಡಿಸಿದಾಕ್ಷಣ ಅವನು ಅಜರಾಮರ ನಾದ ಸಾಹಿತಿಯಾಗಲಾರ. ಅವರಂತೆ ಅವನ ಕೃತಿಗಳೂ

ಅಜರಾಮರವಾಗಲಾರವು. ಅವುಗಳನ್ನು ವಿಶ್ವಸಾಹಿತ್ಯದ ಸಾಲಿಗೆ ಸೇರಿಸಲಾರೆವು. ಶೇಕ್ಸ್‌ಪಿಯರ ತನ್ನ ಯುಗದ ಚೈತನ್ಯವನ್ನು ವ್ಯಕ್ತಪಡಿಸಿದುದಲ್ಲದೆ ಇಡೀ ವಿಶ್ವದ ಎಲ್ಲ ಯುಗಗಳಿಗೂ ಅನ್ವಯಿಸುವ ಮಾನವಜೀವನದ ಮೌಲ್ಯಗಳ ದಿಗ್ದರ್ಶನವನ್ನೂ ಕೂಡ ಮಾಡಿದ್ದಾನೆ.

ಸಾಹಿತ್ಯಕ್ಕೂ ಜೀವನಕ್ಕೂ ನೇರವಾದ ಹಾಗೂ ಆಳವಾದ ಸಂಬಂಧವಿದೆ. ಜೀವನದ ವಸ್ತುಸ್ಥಿತಿಗೂ ಸಾಹಿತ್ಯಕ್ಕೂ ಕೂಡ ಸಾಕಷ್ಟು ಸಂಬಂಧವಿರುವುದನ್ನು ನಾವು ಶೇಕ್ಸ್‌ಪಿಯರನ ನಾಟಕಗಳಲ್ಲಿ ಕಾಣುತ್ತೇವೆ. ಸಾಹಿತ್ಯವು ಗಹನವಾದದ್ದು ಹಾಗೂ ಅದು ಜೀವನದಿಂದ ಪ್ರತ್ಯೇಕವಾಗಿದೆ ಎನ್ನುವ ವಿಚಾರಸರಣಿಗಳು ಅಸಂಬದ್ಧವಾದವುಗಳು ಹಾಗೂ ಕೇವಲ ಅಸ್ಪಷ್ಟ ವಿಚಾರಗಳು. ಅದರಂತೆ ಸಾಹಿತ್ಯವು ಕೇವಲ ಕಾಲ್ಪನಿಕ ಲೋಕಕ್ಕೆ ಸಂಬಂಧಿಸಿದ್ದು ಎನ್ನುವದೂ ಕೂಡ ತಪ್ಪು ಅಭಿಪ್ರಾಯ. ಜೀವನ ಹಾಗೂ ಸಾಹಿತ್ಯಗಳೆರಡೂ ಬೇರೆಯಾಗದ ವಸ್ತುಗಳು. ವಿಧಾಯಕ ಸಾಹಿತ್ಯವು ಜೀವನದ ವಸ್ತುಸ್ಥಿತಿಗಳಿಂದ ಅಭಿವೃದ್ಧಿ ಹೊಂದುತ್ತದೆ. ಈ ಸಾಲಿಗೆ ಶೇಕ್ಸ್‌ಪಿಯರನ ನಾಟಕಗಳನ್ನು ಸೇರಿಸಬಹುದು. ವಿಧಾಯಕ ಸಾಹಿತ್ಯವಿಲ್ಲದ ಸಂಸ್ಕೃತಿಯು ಆಳವಾದ ಮಹತ್ವವಿಲ್ಲದ್ದು. ಸಾಹಿತ್ಯವು ಜನಪ್ರಿಯವಾಗಬೇಕಾದರೆ, ಉತ್ಪಾದಕಶಕ್ತಿಯುಳ್ಳದ್ದಾಗಬೇಕಾದರೆ ಅದು ಹಸ್ತಿದಂತದ ಗೋಪುರದಲ್ಲಿ ವಾಸ

ಮಾಡಕೂಡದು. ಜನಜೀವನದ ವ್ಯವಹಾರಗಳಲ್ಲಿ ಅದು ತನ್ನ ವಿಧಾಯಕ, ಉತ್ಪಾದಕ ಶಕ್ತಿಯ ಪಾತ್ರವನ್ನು ವಹಿಸಬೇಕು. ಜೀವನದೊಡನೆ ಅದು ಸಮರಸವಾಗಬೇಕು. ಅವರೆ ಜೀವನವನ್ನು ಅದು ಅನುವರ್ತಿಸಬಾರದು.

ಆಂಗ್ಲ ಸಾಹಿತ್ಯದಲ್ಲಿಯೇ ಸ್ವಯಂಕಲ್ಪಿತ, ಸ್ವತಂತ್ರವಾದ ವ್ಯಕ್ತಿತ್ವ, ವಿಚಾರಧಾರೆಗಳುಳ್ಳ ಶೇಕ್ಸಪೀಯರ ಕೂಡಾ ತನ್ನ ಕಾಲದ ಮನೋಧರ್ಮ ಸಾಮಾಜಿಕ ವಿಚಾರಗಳ ಸುಳಿಯಿಂದ ಪಾರಾಗಲಿಲ್ಲವೆಂದು ಅವನ ಕೃತಿಗಳೇ ಸಾಕ್ಷಿ ಹೇಳುತ್ತವೆ. ತನ್ನ ಕಾಲದ ಸಮಯದ ಚೈತನ್ಯವನ್ನು ಆತನು ತನ್ನ ನಾಟಕಗಳ ಮೂಲಕ ಬಿಂಬಿಸಿದ್ದಾನೆ. ತನ್ನ ಕಾಲದ ಬಹು ಜನಾನುರಾಗಿಗಳಾದ ನಾಟಕ ಸಾಹಿತ್ಯದ ಮೂಲಕವಾಗಿ ಶೇಕ್ಸಪೀಯರ ಮಾನವ ಜೀವನದ ಬಗೆಗಿನ ತನ್ನ ವಿಚಾರಧಾರೆಗಳನ್ನು ವ್ಯಕ್ತಪಡಿಸಿದ್ದಾನೆ. ಆತನ ಕಾಲ ಆದರ್ಶದ ಧ್ಯೇಯಗಳಿಂದೊಡಗೂಡಿದ ಸಮಯ. ಉದಾಹರಣಾರ್ಥವಾಗಿ ಉದಾತ್ತವಾದ ದೇಶಪ್ರೇಮ, ಪರಧರ್ಮ ಸಹಿಷ್ಣುತೆ, ಆದರ್ಶಪ್ರಾಯವಾದ ಸಾಮಾಜಿಕ ಜೀವನದ ಕೆಲವು ಮುಖಗಳು ಇವೇ ಮೊದಲಾದವುಗಳನ್ನು ಅವನ ನಾಟಕಗಳಲ್ಲಿ ನಾವು ಕಾಣಬಹುದು. ಜೀವನಕ್ಕೂ ಸಾಹಿತ್ಯಕ್ಕೂ ಎಷ್ಟೊಂದು ನಿಕಟ ಸಂಬಂಧವಿದೆ, ಎಂಬುದನ್ನು ತೋರಿಸಲು ಅವನ ನಾಟಕಗಳನ್ನು ಉದಾಹರಿಸಬಹುದು. ಜೀವನದ ಅಂತರಂಗ, ಬಹಿರಂಗಗಳೆರಡನ್ನು ಸಮತೋಲತೆ

ಯಿಂದ ತೂಗಿ ನಮಗೆ ನಿಜವಾದ ಜೀವನದ ಮೌಲ್ಯಗಳ ದರ್ಶನವನ್ನು ಶೇಕ್ಸಪೀಯರ ತನ್ನ ನಾಟಕಗಳ ಮುಖಾಂತರ ಮಾಡಿಕೊಟ್ಟಿದ್ದಾನೆ. ಅವನ ನಾಟಕಗಳು ನಾಟಕಗಳಲ್ಲ; ಅವು ಮಾನವನ ಜೀವನವೇ ಎನ್ನುವ ಭಾವನೆ ನಮ್ಮಲ್ಲಿ ಉಂಟಾಗುತ್ತದೆ.

ಟ್ಯೂಡರ ಕಾಲದ ಸಂಪ್ರದಾಯ, ವಿಚಾರಧಾರೆ, ಅಭಿರುಚಿಗಳಿಗೆ ಅನುಗುಣವಾಗಿ ಶೇಕ್ಸಪೀಯರ ನಾಟಕಗಳನ್ನು ರಚಿಸಿದ್ದಾನೆ. ಆ ಕಾಲದ ಸಾಮಾನ್ಯ ಜನರು ತಮ್ಮ ನಿತ್ಯ ಜೀವನದ ವಿವಿಧ ಮುಖಗಳನ್ನು ಹಾಗೂ ಪ್ರತಿಬಿಂಬವನ್ನು ರಂಗಭೂಮಿಯ ಮೇಲೆ ಅವನ ನಾಟಕಗಳ ಮುಖಾಂತರ ಕಂಡು ಅರಿತರು. ಅವನ ನಾಟಕಗಳು ಜನರಲ್ಲಿ ತಮ್ಮ ಜೀವನ ಹಾಗೂ ಅವುಗಳ ಸಮಸ್ಯೆಗಳ ವಿಚಾರವಾಗಿ ಆಸಕ್ತಿ ಹಾಗೂ ಕುತೂಹಲಗಳನ್ನು ಕೆರಳಿಸಿದವು. ಆತನು ವಿದ್ಯಾವಂತ ಹಾಗೂ ಮುಗ್ಧ ಅಶಿಕ್ಷಿತ ಜನರ ಮನಸ್ಸಿನ ಮೇಲೆ ಅಗಾಧವಾದ ಪರಿಣಾಮವನ್ನುಂಟು ಮಾಡಿದನು. ಸಾಹಿತ್ಯ ಸಮಾಜದ ಪ್ರತಿಬಿಂಬ-ಕೈಗನ್ನಡಿ. ಶೇಕ್ಸಪೀಯರ ತನ್ನ ನಾಟಕಗಳ ಮುಖಾಂತರ ಜೀವನದ ಬಗೆಗೆ ತನಗಿರುವ ಅಭಿರುಚಿ, ಆಸಕ್ತಿಗಳನ್ನು ವ್ಯಕ್ತಪಡಿಸಿದ್ದಾನೆ. ಶೇಕ್ಸಪೀಯರ ತಾನು ಏನನ್ನು ನೋಡಿದನೋ, ಯಾವುದನ್ನು ಕೇಳಿದನೋ ಅವೆಲ್ಲವೂ ಅವನ ಅನುಭವದ ಭಾಗವಾಯಿತು. ಅವನ ಕಲ್ಪನಾಶಕ್ತಿ ಎಷ್ಟೊಂದು ಚಿತ್ತವೇಧಕವಾಗಿತ್ತೆಂದರೆ ಜೀವ-

ನನ ಯಾವುದೇ ಭಾಗವೂ ಆದರಿಂದ ನುಸುಳಿ ಹೋಗಲು ಸಾಧ್ಯವಾಗುತ್ತಿರಲಿಲ್ಲ. ಅವನ ಗ್ರಹಣಶಕ್ತಿ ಅಪಾರವಾಗಿತ್ತು ಎನ್ನುವದಕ್ಕೆ ಅವನ ನಾಟಕಗಳೇ ಪ್ರತ್ಯಕ್ಷ ಪ್ರಮಾಣ. ಇಂಗ್ಲಂಡಿನ ಪುನರುತ್ಥಾನ ಯುಗದ (ರಿನೇಸಾನ್ಸ್) ಪೂರ್ಣ ಪ್ರತಿಬಿಂಬವನ್ನು ನಾವು ಕಾಣುವದು ಅವನ ನಾಟಕಗಳಲ್ಲಿ. ಆತನು ತನ್ನ ನಾಟಕಗಳ ದೃಶ್ಯಗಳಿಗಾಗಿ ಬೇರೆ ದೇಶಗಳ ಉದ್ಯಾನ ನಗರಗಳನ್ನು ಉಪಯೋಗಿಸಿದರೂ ಕೂಡ ಅವೆಲ್ಲವೂ ಸಂಪೂರ್ಣವಾಗಿ ಇಂಗ್ಲಂಡಿನವೇ. ನಾಟಕಗಳಲ್ಲಿಯ ದೃಶ್ಯಗಳು, ವ್ಯಕ್ತಿಗಳು ಆತನ ಕಾಲದ ಇಂಗ್ಲಂಡಿನ ಪೂರ್ಣ ವಾತಾವರಣವನ್ನೇ ಪ್ರತಿಬಿಂಬಿಸುತ್ತವೆ. ಮಧ್ಯಕಾಲೀನ ಯುಗದ ಕೆಲವು ಸಂಪ್ರದಾಯಗಳು ಎಲಿಝಬೆಥ್ ಕಾಲದಲ್ಲೂ ಹೊಸ ಮುಖವಾಡ ಧರಿಸಿಕೊಂಡು ಮುಂದುವರಿದವು. ಶೇಕ್ಸಪೀಯರನಿಗೆ ಅವುಗಳ ಅರಿವು ಇತ್ತು. ಇಷ್ಟು ಇದ್ದಾಕ್ಷಣ ಶೇಕ್ಸಪೀಯರನು ಮಧ್ಯಕಾಲಯುಗದ ವಾತಾವರಣವನ್ನು ತನ್ನ ನಾಟಕಗಳಲ್ಲಿ ಬಿಡಮೂಡಿಸಿದ್ದಾನೆ, ಎನ್ನುವದು ವಿವೇಚನೆಯಿಲ್ಲದೇ ಹೇಳುವ ಮಾತುಗಳು. ಅವನಿದ್ದುದು ಹದಿನಾರನೇ ಶತಮಾನ. ಒಂದು ಅಥವಾ ಎರಡು ಶತಮಾನಗಳ ಹಿಂದಿನ ಜನಜೀವನ, ಸಂಪ್ರದಾಯ, ಘಟನೆಗಳನ್ನು ಆತನು ಎಷ್ಟರಮಟ್ಟಿಗೆ ನೆನಪಿನಲ್ಲಿಟ್ಟುಕೊಂಡಿದ್ದನೆಂಬುವದೂ ಸಂದೇಹವೇ ಸರಿ. ಅದೂ ಅಲ್ಲದೇ ಅಂದಿನ ಕಾಲದಲ್ಲಿ ಸಂಗ್ರಹಿಸುವದಾದರೂ ಹೇಗೆ?

ಕೆಲವು ಐತಿಹಾಸಿಕ ಘಟನೆಗಳನ್ನು ಬಿಟ್ಟರೆ ಉಳಿದೆಲ್ಲ ನಾಟಕಗಳಲ್ಲಿಯ ವಾತಾವರಣ ಹದಿನಾರನೇ ಶತಮಾನದ ಜೀವನವನ್ನೇ ಸಂಪೂರ್ಣವಾಗಿ ಹೋಲುತ್ತದೆ. ಇದು ಮಿ॥ ಕ್ರೇಗ್ ಅವರ ಅಭಿಪ್ರಾಯ. ನಾಟಕಗಳಲ್ಲಿಯ ಪಾತ್ರಗಳು ಗ್ರೀಕರೇ ಇರಲಿ, ರೋಮನರೇ ಇರಲಿ, ಟ್ರೋಜನ್‌ರೇ ಇರಲಿ, ಅವರೆಲ್ಲರೂ ಹಳೆಯ ಮುಖವಾಡ ಧರಿಸಿದ ಎಲಿಝಾಬೆಥ್ ಯುಗದವರೇ ಎನ್ನುವದೂ ಕೂಡ ನಿರ್ವಿವಾದ ಮಾತು. ಶೇಕ್ಸ್‌ಪೀಯರ ಉದ್ದೇಶಪೂರ್ವಕವಾಗಿ ಉಪಯೋಗಿಸಿದ ಕಾಲ ನಿರ್ದೇಶ ಪ್ರಮಾದ ಅವನ ಅನೇಕ ನಾಟಕಗಳಲ್ಲಿ ಕಂಡು ಬರುವದು. ಅವನ ನಾಟಕಗಳಲ್ಲಿಯ ಅವನ ಕಾಲದ ನಿತ್ಯಜೀವನದ ಅನೇಕ ಅನ್ವಯಗಳು ಎಷ್ಟೊಂದು ನೈಮಿತ್ತಿಕವಾಗಿವೆಯೆಂದರೆ ನಮಗೆ ಅವುಗಳನ್ನು ಕೂಲಂಕಷವಾಗಿ ಪರಿಶೀಲಿಸದ ಹೊರತು ಅವುಗಳ ಗುರುತು ಸಿಗುವದಿಲ್ಲ. ಆದರೆ ಅವುಗಳು ಹದಿನಾರನೇ ಶತಮಾನದ ಜೀವನಕ್ಕೆ ಸಂಬಂಧಿಸಿದವುಗಳೆಂದು ಹೇಳಲು ನಮ್ಮ ಪೂರ್ಣ ಸಮ್ಮತಿ ಇದೆ.

೨. ಶೇಕ್ಸಪೀಯರನ ಕಾಲದ ಇಂಗ್ಲಂಡ

ಶೇಕ್ಸಪೀಯರನು ಜೀವಿಸಿದ್ದು ಹಾಗೂ ತನ್ನ ನಾಟಕಗಳನ್ನು ಬರೆದ ಕಾಲ ಹದಿನಾರನೆಯ ಶತಮಾನ. ಆಗ ಯುರೋಪ ಖಂಡದಲ್ಲಿ ಪ್ರಸಾರವಾದ ಕಲೆ ಮತ್ತು ವಿದ್ಯೆಯ ಪುನರುಜ್ಜೀವನದ ಕರೆಗೆ ಓಗೊಟ್ಟು ಇಂಗ್ಲಂಡ ದೇಶದ ಜನರು ಉತ್ಸಾಹಿತರಾಗಿ ಜೀವನದ ಬಗ್ಗೆ ಹೊಸದೃಷ್ಟಿ, ವಿಚಾರಗಳನ್ನು ಹೊಂದಿದವರಾಗಿದ್ದರು. ಶೇಕ್ಸಪೀಯರನ ಕಾಲ ಪರ್ವಕಾಲ. ಜನರ ಜೀವನಕ್ಕೆ ಹೊಸ ತಿರುವು ಉಂಟಾಗಿತ್ತು. ಮಧ್ಯಕಾಲಯುಗದ ಕೆಲವು ಹಳೆಯ ಕಂದಾಚಾರ, ಸಂಪ್ರದಾಯಗಳು ಹೊಸ ರೂಪ ತಾಳಿ ಮುಂದುವರಿದಿದ್ದವು. ಹೀಗಾಗಿ ಇಂಗ್ಲಂಡಿನ ಸಮಾಜದಲ್ಲಿ ಜೀವನ ಹಳತು, ಹೊಸತು ಭಾವನೆಗಳ ಸಮ್ಮಿಶ್ರವಾದ ವಾತಾವರಣ

ಇತ್ತು. ಮಹಾನ್ ಮೇಧಾವಿಗಳಾದ ಸರ್ ಥಾಮಸ್ ಮೋರ್, ರಾಬರ್ಟ ಬರ್ಟನ್, ಬೇಕನ್, ರ್ಯಾಲೇ ಮೊದಲಾದವರು ತಮ್ಮ ನೂತನ ವಿಚಾರಧಾರೆಗಳಿಂದ ಆಗಲೇ ಉದಯ ಹೊಂದಿದ ಮಧ್ಯಮ ವರ್ಗದ ಜನರ ಮನಸ್ಸಿನ ಮೇಲೆ ಬಹಳಷ್ಟು ಪರಿಣಾಮವನ್ನುಂಟು ಮಾಡಿದರು. ಮೆಕೀವಲೀ, ಗೆಲಿಲಿಯೋ, ಕೋಪರ್ನಿಕಸ್ ಅವರ ವೈಜ್ಞಾನಿಕ ಹೇಳಿಕೆಗಳೂ ಅದರಂತೆ ಹಾರ್ವೇ ಅವರ ವೈಜ್ಞಾನಿಕ ಸಂಶೋಧನೆಗಳೂ ಜನರ ಜೀವನದೃಷ್ಟಿಗೆ ಹೊಸ ತಿರುವನ್ನು ಕೊಟ್ಟವು. ತಮ್ಮ ಜೀವನ ಮೌಲ್ಯಗಳನ್ನು ಅವರು ಹೊಸ ದಾರಿ ಕಂಡುಕೊಳ್ಳಲು ಪ್ರಯತ್ನಿಸುತ್ತಿದ್ದರು. ಆಗಲೇ ಉಗಮಹೊಂದಿದ ವೈಯಕ್ತಿಕವಾದ ಹಾಗೂ ಹಳೆಯ ಸಾಮಾಜಿಕ ವ್ಯವಸ್ಥೆಯ ಹಕ್ಕುಗಳ ನಡುವಿನ ವ್ಯಾಜ್ಯವನ್ನು ಶೇಕ್ಸ್‌ಪೀಯರ ತನ್ನ ನಾಟಕಗಳಲ್ಲಿ ಬಿಂಬಿಸಿದ್ದಾನೆ.

"ಆ್ಯಜ ಯು ಲೈಕ ಇಟ್" ನಾಟಕದಲ್ಲಿ ಈ ಮಧ್ಯಮ ವರ್ಗದ ಜನರ ಉಗಮ ಹಾಗೂ ಹೊಸ ಜೀವನದ ಮೌಲ್ಯಗಳನ್ನು ಶೇಕ್ಸ್‌ಪೀಯರ ಚಿತ್ರಿಸಿದ್ದಾನೆ. ಶ್ರೀಮಂತ ಹಾಗೂ ಬಡಜನರ ನಡುವೆ ಸಾಕಷ್ಟು ಅಂತರ ಬೆಳೆದಿತ್ತು. ಕೇವಲ ಶ್ರೀಮಂತ ವರ್ಗಕ್ಕೆ ಮಾತ್ರ ವಿಶೇಷ ಸವಲತ್ತುಗಳಿದ್ದವು. ಉಚ್ಚ ಶಿಕ್ಷಣವನ್ನು ಅವರು ಮಾತ್ರ ಪಡೆಯಲು ಅರ್ಹರಾಗಿದ್ದರು. ಮಧ್ಯಮ ವರ್ಗದ ಜನರೂ ಕೂಡ ತಮ್ಮ ಬೇಡಿಕೆಗಳನ್ನು ಮುಂದಿಡುವದರಲ್ಲಿ ಮೊದಲಿಗರಾಗಿದ್ದರು. ಕಾಯಿದೆ, ಸುವ್ಯವಸ್ಥೆ, ಜೀವರಕ್ಷಣೆಗಳೇ ಅವರ ಬೇಡಿಕೆ

ಗಳಾಗಿದ್ದವು. ಕೆಳವರ್ಗದ ಜನರಲ್ಲಿ ಶಿಕ್ಷಣವಿಲ್ಲದೇ ಇದ್ದುದರಿಂದ ಅನೇಕ ಮೂಢನಂಬಿಕೆಗಳು ಆ ಜನರಲ್ಲಿ ಮನೆ ಮಾಡಿಕೊಂಡಿದ್ದವು. ಆ ಜನರು ದೆವ್ವ, ಭೂತ, ಕನಸುಗಳ ಬಗ್ಗೆ ಬಹಳ ನಂಬಿಕೆಯುಳ್ಳವರಾಗಿದ್ದರಲ್ಲದೇ ಅವುಗಳ ವಿಚಾರವಾಗಿ ವಿಪುಲವಾಗಿ ಚರ್ಚೆ ನಡೆಸುತ್ತಿದ್ದರು. ಭಯ, ಭೀಭತ್ಸ ಭಾವನೆಗಳಿಂದ ಅವುಗಳನ್ನು ನಂಬುತ್ತಿದ್ದರು. ಇದಕ್ಕೆ ಮುಖ್ಯವಾದ ಕಾರಣವನ್ನು ರಾಬರ್ಟ ಬರ್ಟನ್ ಅವರು ತಮ್ಮ "ಅನಾಟಮಿ ಆಫ್ ಮೆಲಾಂಕಲಿ" ಎಂಬ ಗ್ರಂಥದಲ್ಲಿ ವಿವರಿಸಿದ್ದಾರೆ. ಅವರ ಪ್ರಕಾರ ಮನಸ್ಸಿನ ವ್ಯಾಕುಲತೆ ಆಗಿನ ಕೆಲವರ್ಗಗಳಲ್ಲಿ ಮನೆಮಾತಾಗಿತ್ತು. ಆದ್ದರಿಂದ ಮನೋವೈಕಲ್ಯದಿಂದ ಅನೇಕ ವಿಚಿತ್ರವಾದ ಹಾಗೂ ಅಸಹಜವಾದ ಕೃತ್ಯಗಳನ್ನು ಅವರು ಮಾಡುತ್ತಿದ್ದರು ಹಾಗೂ ಹಾಗೆಯೇ ವರ್ತಿಸುತ್ತಿದ್ದರು. ಜನರಿಗೆ ಮಂತ್ರ, ಮಾಯೆ, ಮಾಟಗಳಲ್ಲಿ ಅಪಾರವಾದ ಶ್ರದ್ಧೆ, ನಂಬಿಕೆಗಳು ಇದ್ದವು. ಇದಕ್ಕೆ ಮತ್ತೊಂದು ಮೂಲ ಕಾರಣ ಯಾವುದೆಂದರೆ ಜನರ ಮೂಢತನ, ಅಜ್ಞಾನ. ಚರ್ಚಿನ ಪೂಜಾರಿಗಳು, ಧರ್ಮೋಪದೇಶಕರು ಜನರ ಈ ಮೂಢ ನಂಬಿಕೆಗಳ ದುರುಪಯೋಗ ಪಡೆಯುತ್ತಿದ್ದರು. ಹಾಗೂ ಲಾಭ ಪಡೆಯುತ್ತಿದ್ದರು.

ಅವರು ಅಂತಹುದನ್ನು ಪ್ರೋತ್ಸಾಹಿಸಲೂ ಹಿಂಜರಿಯಲಿಲ್ಲ. ಏಕೆಂದರೆ ಅದುವೇ ಅವರ ಬಂಡವಾಳವಾಗಿತ್ತು. ಇಂಥ ಜನರ ಮನಸನ್ನು ಸೆರೆಹಿಡಿಯಲೆಂದೇ ಲೇಖಕಿಯರ

ತನ್ನ ನಾಟಕಗಳಲ್ಲಿ ಧಾರಾಳವಾಗಿ ದೆವ್ವ, ಭೂತಚೇಷ್ಟೆಗಳ, ಮಾಯಾವಿಲಾಸಿಗಳ ಕಥೆಗಳನ್ನು, ದೃಶ್ಯಗಳನ್ನು ಅಳವಡಿಸಿಕೊಂಡಿದ್ದಾನೆ. ಹೀಗಾಗಿ ಅವನ ನಾಟಕಗಳು ಸಾಮಾನ್ಯ ಜನರಿಗೆ ಬಹಳವಾಗಿ ಜನಪ್ರಿಯವಾದವು. ಹದಿನಾರನೆಯ ಶತಮಾನದ ಕಾಲ ರಾಜಪ್ರಭುತ್ವದ ಕಾಲ. ಎಲ್ಲದಕ್ಕೂ ಚಕ್ರವರ್ತಿಯೇ ಸರ್ವಾಧಿಕಾರಿ. ತನ್ನ ಇತಿಹಾಸದಲ್ಲೇ ಪ್ರಥಮವಾಗಿ ಇಂಗ್ಲಂಡದೇಶ ಒಕ್ಕಟ್ಟಾಗಿ ಸ್ಪೇನ್ ದೇಶವನ್ನು ಸೋಲಿಸಿತು. ಎಲಿಝಬೆಥ್ ರಾಣಿಯ ಆಡಳಿತದ ಕಾಲವನ್ನು 'ಸುವರ್ಣಯುಗ'ವೆಂದು ಸಾಮಾನ್ಯವಾಗಿ ಎಲ್ಲ ಚರಿತ್ರಕಾರರೂ ಕರೆಯುತ್ತಾರೆ. ಪ್ರಯತ್ನಶೀಲತೆ, ಹೊಸ ವಿಷಯ ಹಾಗೂ ವಸ್ತುಗಳನ್ನು ಸಂಶೋಧಿಸುವಿಕೆ ಈ ಭಾವನೆಗಳು ಎಲ್ಲೆಲ್ಲೂ ಕಂಡುಬರುತ್ತಿದ್ದವು. ಆದರೆ ಆಗಿನ ಇಂಗ್ಲಂಡ ಅಷ್ಟೇನೂ ಮುಂದುವರಿದ ದೇಶವಾಗಿರಲಿಲ್ಲ. ಕಾಲು ದಾರಿಗಳು ಬಹಳೇ ಕೆಟ್ಟ ಪರಿಸ್ಥಿತಿಯಲ್ಲಿದ್ದವು. ಅವುಗಳಿಂದಲೇ ಎಲ್ಲ ವ್ಯಾಪಾರ ಪ್ರವಾಸ ಸಾಗುತ್ತಿತ್ತು. ಹಾಗೂ ಪ್ರವಾಸಿಗಳಿಗೆ ಈ ಕಾಲುದಾರಿಗಳಲ್ಲಿ ಭಯಾನಕ ದರೋಡೆ, ಕಳುವು ಕೊಲೆ ಸುಲಿಗೆಗಳು ಯಾವಾಗಲೂ ಕಾದಿರುತ್ತಿದ್ದವು. ಆದರೂ ಜನರು ಗುಂಪು ಗುಂಪಾಗಿ ಪ್ರವಾಸ ಮಾಡುತ್ತಿದ್ದರು. ಪ್ರವಾಸ ಮಾಡುವದು ಆ ಕಾಲದ ಜನರಲ್ಲಿ ಒಂದು ಹವ್ಯಾಸವಾಗಿದ್ದಿತು. ಶ್ರೀಮಂತ, ಮಧ್ಯಮ ವರ್ಗದ ಜನರು ಸುಖಿಗಳಾಗಿದ್ದರೂ ಕೂಡ ಕೆಳ ವರ್ಗದ ಜನರು ಬಹಳೇ ತೊಂದರೆಯನ್ನು ಅನುಭವಿಸುತ್ತಿದ್ದರು. ಗೂಳಿ ಕಾಳಗ, ಕುಕ್ಕುಟಯುದ್ಧಗಳು ಮನೋ-

ರಂಜನೆಯ ಕ್ರೀಡೆಗಳಾಗಿದ್ದವು. ಅವುಗಳಿಗೆ ಅಪಾರವಾಗಿ
ಜನರು ಬಂದು ಸೇರುತ್ತಿದ್ದರು. ಬೇಟೆಯಾಡುವದೂ ಕೂಡ
ಪ್ರಚಲಿತವಾದ ಒಂದು ಕ್ರೀಡೆಯಾಗಿದ್ದಿತು. ಶ್ರೀಮಂತ
ವರ್ಗದವರು ಬಹಳೇ ವಿಲಾಸಿಗಳಾಗಿದ್ದರು. ಹೊಸ ಹೊಸ
ಉಡಿಗೆ, ತೊಡಿಗೆಗಳಿಗೆ ಬಹು ಬೇಗ ಮಾರು ಹೋಗಿ ಅವು
ಗಳನ್ನು ಅನುಸರಿಸುತ್ತಿದ್ದರು. ಏಕೆಂದರೆ ಅವರ ಮಕ್ಕಳು
ವಿದೇಶಗಳಲ್ಲಿ ಶಿಕ್ಷಣ ಪಡೆಯುವದಲ್ಲದೇ ಆಯಾ ದೇಶಗಳ
ಸಂಸ್ಕೃತಿ ಉಡುಗೆ ತೊಡಿಗೆಗಳನ್ನು ವಿಚಾರವಿಲ್ಲದೇ ಅನು-
ಸರಿಸುತ್ತಿದ್ದರು. ಭಾಷೆ, ಮಾತು-ಕತೆಗಳಲ್ಲಿ ಕೂಡಪರ
ಭಾಷೆಯ ಶೈಲಿಯನ್ನು ಅನುಸರಿಸುತ್ತಿದ್ದರು. ಕ್ಯಾಥೋ
ಲಿಕ್ ಹಾಗೂ ಪ್ರಾಟೆಸ್ಟೆಂಟ್ ಜನರಲ್ಲಿ ವೈಮನಸ್ಸು, ಜಗಳ
ಗಳು ನಿತ್ಯದ ಮಾತಾಗಿದ್ದವು. ಪ್ರಾಟೆಸ್ಟಂಟ್‌ರಲ್ಲಿಯೇ
ಪ್ಯೂರಿಟನ್ ಎಂಬ ಉಗ್ರಗಾಮಿಗಳು ಮನೋರಂಜನೆಗಳನ್ನು
ಬಲವಾಗಿ ನಿಷೇಧಿಸುತ್ತಿದ್ದರು. ಕ್ರಿಸ್ತ ಧರ್ಮದ ಈ ಎರಡೂ
ಅನುಯಾಯಿಗಳಲ್ಲಿ ಒಕ್ಕಟ್ಟನ್ನು ಒಡಮೂಡಿಸಲು ರಾಣಿ
ಎಲಿಝಾಬೆಥ್‌ಳು ಪ್ರೊಟೆಸ್ಟಂಟ ಚರ್ಚಿಗೆ ತನ್ನ ಸಹಕಾರ,
ಸಹಾಯ ನೀಡಿ ಅದಕ್ಕೆ ತಾನೇ ಮುಖ್ಯಸ್ಥಳಾದಳು. ಬೈಬ-
ಲ್‌ನ್ನು ಪರಿಷ್ಕರಿಸಿ ಅದನ್ನು ಎಲ್ಲರೂ ಅನುಸರಿಸುವಂತೆ
ಆಜ್ಞೆ ವಿಧಿಸಿದಳು. ಅವಳಿಗೆ ವಿರೋಧ ಒಡ್ಡಿದ್ದ ಕ್ಯಾಥೋ-
ಲಿಕ್ ಪಾದ್ರಿಗಳನ್ನು ಗಲ್ಲಿಗೇರಿಸಲಾಯಿತು. ಪ್ಯೂರಿಟನ್
ಸಂಪ್ರದಾಯಗಳ ಬಗೆಗೂ ಜನರಲ್ಲಿ ಅಸಮಾಧಾನವಿತ್ತು.
ಏಕೆಂದರೆ ಅವರು ವ್ಯಕ್ತಿತ್ವವಾದವನ್ನು ಅಲ್ಲಗಳೆಯುವವ
ರಾಗಿದ್ದರು. ಇದನ್ನೆಲ್ಲ ನೋಡಿದರೆ ಆಗಿನ ಕಾಲದ ಇಂಗ್ಲಂಡ

ಕ್ಯಾಥೋಲಿಕ್ ಧರ್ಮಪೀಠದ ಉಚ್ಚ ಧರ್ಮಾಧಿಕಾರಿ ಪೋಪನ ದಾಸ್ಯ ಶೃಂಖಲೆಯನ್ನು ಕಿತ್ತೆಸೆದು ತನ್ನದೇ ಆದ ಧರ್ಮ ಆಚರಣೆಗಳನ್ನು ಪ್ರಾರಂಭಿಸಿತ್ತು ಎನ್ನುವ ಸಂಗತಿ ಬೆಳಕಿಗೆ ಬರುತ್ತದೆ. ವಸಂತಪಂಚಮಿ (May Day) ಕ್ರಿಸ್‌ಮಸ್, ಗುಡ್‌ಫ್ರಾಯಡೇ ಮೊದಲಾದ ಧಾರ್ಮಿಕ ಉತ್ಸವಗಳನ್ನು ಜನರು ಆಚರಿಸುತ್ತಿದ್ದರು. ಅದೂ ಅಲ್ಲದೇ ಅನೇಕ ಸಂತರ ಉತ್ಸವಗಳನ್ನೂ ಕೂಡ ನಡೆಸಿಕೊಂಡು ಬರುತ್ತಿದ್ದರು. ಮಾನವತಾವಾದ, ಧರ್ಮದ ಪುನರುತ್ಥಾನಗಳಿಂದ ಜನರ ಮನಸ್ಸಿನ ಮೇಲೆ ಅಗಾಧವಾದ ಪರಿಣಾಮವಾಗಿತ್ತು. ಕುಡಿತಕ್ಕಾಗಿ ಸುರಾಪಾನದ ಅಂಗಡಿಗಳು ಲಂಡನ್‌ದ ಕೆಲವು ಭಾಗಗಳಲ್ಲಿದ್ದವು. ಅವು ಕೇವಲ ಕುಡಿತಕ್ಕಾಗಿ ಮೀಸಲಾಗಿರದೇ ಬುದ್ಧಿವಂತ ಜನರ ಚರ್ಚಾಕೂಟದ ಸ್ಥಳಗಳಾಗಿಯೂ ಕೂಡ ಮಾರ್ಪಾಡಾಗಿರುತ್ತಿದ್ದವು. ದೇಶದ ವ್ಯಾಪಾರವು ಸಮುದ್ರದ ಮುಖಾಂತರ ಬೇರೆ ದೇಶಗಳೊಡನೆ ಸುಗಮವಾಗಿ ಸಾಗುತ್ತಿತ್ತು. ಹೀಗಾಗಿ ದೇಶದ ಸಂಪತ್ತು ಬೆಳೆಯಲು ಕಾರಣವಾಯಿತು. ಬೇರೆ ದೇಶಗಳ ಶೋಧನೆಗಳೂ ಕೂಡ ಇದೇ ಕಾಲದಲ್ಲಿ ಪ್ರಾರಂಭವಾದದ್ದು. ಒಟ್ಟಿನಲ್ಲಿ ಇಂಗ್ಲೆಂಡ ದೇಶವು ಸರ್ವತೋಮುಖವಾದ ಅಭಿವೃದ್ಧಿಯನ್ನು ಈ ಕಾಲದಲ್ಲಿ ಸಾಧಿಸಿತ್ತು. ವ್ಯಾಪಾರೀ ವರ್ಗದ ಜನ, ವಕೀಲರು, ವಿಜ್ಞಾನಿಗಳು ಹೀಗೆ ಮಧ್ಯಮ ವರ್ಗದ ಜನರ ಉದಯ ಹಾಗೂ ಅದರಿಂದ ಅನೇಕ ಬೆಳವಣಿಗೆ, ಬದಲಾವಣೆಗಳು ಉಂಟಾದವು. ದೇಶದಲ್ಲಿ ಐಕ್ಯತೆ, ರಾಷ್ಟ್ರೀಯ ಭಾವನೆಗಳು ಉಕ್ಕಿ ಹರಿದ ಕಾಲವಿದಾಗಿತ್ತು. ಸಾಹಿತ್ಯ,

ವಿಜ್ಞಾನ, ಸಂಸ್ಕೃತಿ, ಸಾಹಸ, ವೀರತೆ ಈ ಎಲ್ಲ ಉತ್ಕೃಷ್ಟವು ಗುಣಗಳಿಂದ ಇಡೀ ಯುರೋಪ ಖಂಡದ ದೇಶಗಳಲ್ಲಿಯೇ ಇಂಗ್ಲೆಂಡು ತನ್ನ ಮೇಲ್ಮೆಯನ್ನು ಸಾಧಿಸಿತ್ತು. ಹೆಣ್ಣು, ಗಂಡಿನ ವಿಷಯದಲ್ಲಿ ಅಂದರೆ ಅವರ ವಿವಾಹ ಇತ್ಯಾದಿ ವಿಷಯಗಳಲ್ಲಿ ಮಧ್ಯಕಾಲೀನ ಯುಗದ ಪರನಾರೀ ಸಹೋದರತೆಯ ಸಂಸ್ಕೃತಿ ಆಗಲೇ ಮರೆಯಾಗಿತ್ತು. ಆದರೆ ಸ್ವೇಚ್ಛಾಚಾರದ ಸ್ವತಂತ್ರ ಪ್ರವೃತ್ತಿಯು ಆಗಲೇ ಕಾಣಿಸಿಕೊಂಡಿತ್ತು. ಇದಕ್ಕೆ ಉಧಾಹರಣೆಗಳು ಶೇಕ್ಸಪೀಯರನ ನಾಟಕಗಳಲ್ಲಿ ಕಂಡುಬರುತ್ತವೆ. ಆದರೆ ಈ ಬಗೆಯ ಸ್ವೇಚ್ಛಾಚಾರದ ಪ್ರವೃತ್ತಿಯು ಬೇಜವಾಬದಾರಿಯದಾಗಿರಲಿಲ್ಲ. ವಿವಾಹವನ್ನು ಅಂದಿನ ತರುಣ-ತರುಣಿಯರು ಒಂದು ಉತ್ತಮ ವ್ಯವಹಾರವನ್ನಾಗಿ ತಿಳಿದುಕೊಂಡಿದ್ದರು. ಶೇಕ್ಸಪೀಯರನ ಕಾಲ ಸ್ಥಿತ್ಯಂತರದ ಅಥವಾ ಬದಲಾವಣೆಯ ಯುಗ. ಮಧ್ಯಕಾಲೀನ ಯುಗದ ಕೆಂಪುಯುದ್ಧಗಳ ಹಾಗೂ ಹದಿನಾರನೆಯ ಶತಮಾನದ ರಾಜಕೀಯ ಪಕ್ಷಗಳ ಪೈಪೋಟಿಗಳ ನಡುವಿನ ಸಂಕ್ರಮಣದ ಯುಗ. ಅನೇಕ ಶ್ರೀಮಂತ ಮನೆತನಗಳು ತಮ್ಮ ವಿಲಾಸೀ ಜೀವನದಿಂದ ದಿವಾಳಿಯ ಸ್ಥಿತಿಯಲ್ಲಿದ್ದರೆಂಬುದಕ್ಕೆ ಶೇಕ್ಸಪೀಯರನ ನಾಟಕಗಳೇ ಕೈಗನ್ನಡಿ.

ಮಧ್ಯಯುಗದಲ್ಲಿಯಂತೆ ಶೇಕ್ಸಪೀಯರನ ಕಾಲದಲ್ಲೂ ಕೆಲ ಶ್ರೀಮಂತ ವರ್ಗಗಳಲ್ಲಿ ಅವಿಭಕ್ತ ಕುಟುಂಬ ವ್ಯವಸ್ಥೆ ಇತ್ತು ಎನ್ನುವದಕ್ಕೆ ಅವನ ಕೆಲವು ಹರ್ಷ ನಾಟಕಗಳೇ ಸಾಕ್ಷಿಯಾಗಿವೆ. ಅದರಂತೆಯೇ ವೈಯಕ್ತಿಕವಾದ ಪ್ರಾರಂಭ

ಪ್ರಾಪ್ತರಿಂದ ಮಧ್ಯಮ ಹಾಗೂ ಕೆಳವರ್ಗೀಯ ವರ್ಗಗಳಲ್ಲಿ ಅವಿಭಕ್ತ ಕುಟುಂಬ ವ್ಯವಸ್ಥೆ ಮೆಲ್ಲಗೆ ಮರೆಯಾಗಿ ವಿಭಕ್ತ ಕುಟುಂಬ ವ್ಯವಸ್ಥೆ ಪ್ರಾರಂಭವಾಗಿತ್ತು. ಅದಕ್ಕೆ ಸಾಕ್ಷಿ ಎಂದರೆ ಅಂಟೋನಿಯೋನ ಗೆಳೆಯ ಬಸಾನಿಯೋ ಹಾಗೂ ರಾಜಕುಮಾರ ಹ್ಯಾಮ್ಲೆಟ್‌ನ ಗೆಳೆಯರು. ಕುಟುಂಬದಲ್ಲಿಯ ಪಾಲಕರು ತಮ್ಮ ಮಕ್ಕಳೊಡನೆ ವರ್ತಿಸುತ್ತಿದ್ದ ಅತಿರೇಕ ಶಿಸ್ತಿನ ವರ್ತನೆಗಳು, ಅದರಂತೆಯೇ ವಿಧೇಯರೂ ಹಾಗೂ ಅವಿಧೇಯರೂ ಆದ ಮಕ್ಕಳೂ ಇವರ ಸ್ವಭಾವ, ಭಾವನೆಗಳನ್ನು ಶೇಕ್ಸ್‌ಪಿಯರ್ ಹಾಗೂ ಅವನ ಸಮಕಾಲೀನ ನಾಟಕಕಾರರು ತಮ್ಮ ನಾಟಕಗಳಲ್ಲಿ ಪ್ರತಿಬಿಂಬಿಸಿದ್ದಾರೆ. ಎಲಿಝಾಬೆಥ್ ಸಮಾಜದಲ್ಲಿಯ ವಿವಿಧ ವರ್ಗಗಳು ದುರಾರಾಧ್ಯವಾಗಿದ್ದವು ಎನ್ನುವದಕ್ಕೆ ಅವನ ನಾಟಕಗಳೇ ಪ್ರತ್ಯಕ್ಷ ಪ್ರಮಾಣವಾಗಿವೆ. ಬೇಜವಾಬದಾರಿತನ, ಜೂಜು, ಕುಡಿತ, ಕುಟಿಲತ, ಐಹಿಕ ಸುಖಜೀವನ ಭ್ರಷ್ಟಾಚಾರಗಳಿಂದ ಶ್ರೀಮಂತ ಹಾಗೂ ರಾಜಮನೆತನಗಳು ತುಂಬಿಹೋಗಿದ್ದವು ಎನ್ನುವ ವಿಷಯಕ್ಕೆ ಅವನ ನಾಟಕಗಳೇ ಸಾಕ್ಷಿಯಾಗಿವೆ.

ಶೇಕ್ಸ್‌ಪಿಯರನಿಗೆ ತನ್ನ ಕಾಲದ ಇಂಗ್ಲಂಡ ಜನರ ಜೀವನದ ಮೌಲ್ಯಗಳ ಪರಿಚಯ ಸಾಕಷ್ಟು ಇತ್ತು ಎನ್ನುವದರ ಕಲ್ಪನೆ ನಮಗೆ ಅವನ ನಾಟಕಗಳ ಮುಖಾಂತರ ತಿಳಿದು ಬರುತ್ತದೆ. ಎಲಿಝಾಬೆಥ್ ಕಾಲದ ಜೀವನದ ಮೌಲ್ಯಗಳ ಪರಿಚಯವನ್ನು ಆ ಕಾಲದ

ಪ್ರಮುಖ ವಕ್ತಾರರಾದ ಬೇಕನ್, ಹೂಕರ್‌ರು ನಮಗೆ ತಮ್ಮ ಲೇಖನಗಳ ಮುಖಾಂತರ ಮಾಡಿಕೊಟ್ಟಿದ್ದಾರೆ. ಹಾಗೂ ಅವರು ಅವುಗಳ ಪ್ರತಿಪಾದಕರೂ ಕೂಡ ಆಗಿದ್ದಾರೆ. ಹದಿನಾರನೆಯ ಶತಮಾನದ ಇಂಗ್ಲಂಡದ ವಿಶ್ವದೃಷ್ಟಿ ಒಂದಕ್ಕೊಂದು ಹೊಂದುವ ನಂಬಿಕೆಗಳ ವ್ಯವಸ್ಥೆಯಾಗಿತ್ತು. ಇಂಗ್ಲಂಡದ ಜನರು ಸಂಪ್ರದಾಯವಾದಿಗಳು. ಆ ಜನರ ದೃಷ್ಟಿಯಲ್ಲಿ ಸೃಷ್ಟಿ ಅಂದರೆ ಅನೇಕ, ಆದರೆ ಸಂಬಂಧವುಳ್ಳ, ತಾರತಮ್ಯವುಳ್ಳ ಅಸ್ತಿತ್ವಗಳಾದ, ನಾಲ್ಕು ಮೂಲ-ವಸ್ತುಗಳಿಂದ ಹಿಡಿದು ದೇವತೆಗಳ ಪರಿಶುದ್ಧ ಬುದ್ಧಿಯವರೆಗೆ ಒಳಗೊಂಡದ್ದು ಆಗಿತ್ತು. ದೇವರ ಇಚ್ಛೆಯೇ ಇಡೀ ವಿಶ್ವವನ್ನು ಆಳುವದು. ಪ್ರಕೃತಿಯಿಂದಲೇ ಪ್ರಕೃತಿ ದೇವರ ಸಾಧನ. ಸಾಮಾಜಿಕ ಏರು ಪೇರುಗಳು ಪ್ರಕೃತಿಯಿಂದಲೇ ಸೃಷ್ಟಿಸಲ್ಪಟ್ಟ ವಸ್ತುಗಳು. ಈ ಪ್ರಕೃತಿಯಲ್ಲಿ ಕಾಣುವ ವ್ಯವಸ್ಥೆ ಮನುಷ್ಯನ ಲಾಭಕ್ಕಾಗಿ. ಮನುಷ್ಯ ಪ್ರಕೃತಿಯಲ್ಲಿ ಕಾಣುವ ವ್ಯವಸ್ಥೆ ಮನುಷ್ಯನ ಲಾಭಕ್ಕಾಗಿ ಮನುಷ್ಯ ಪ್ರಕೃತಿಯ ಅವಿಭಾಜ್ಯ ಅಂಗ. ಇನ್ನೊಬ್ಬ ಸಮಕಾಲೀನ ಕವಿ, ನಾಟಕಕಾರ ಬೆನ್ ಜಾನಸನ್ ಕೂಡ ಈ ಸಂಪ್ರದಾಯಕ್ಕೆ ವಿರುದ್ಧವಾಗಿರಲಿಲ್ಲ. ಆಗಿನ ಕಾಲದ ಸಂಪ್ರದಾಯವಾದಿಗಳಿಗೆ ಪ್ರಕೃತಿ ಮುಖ್ಯವಾಗಿ ಮೌಲ್ಯ-ಸೂಚಿ. ಅವರಿಗೆ ಅದು ಆದರ್ಶ ವ್ಯವಸ್ಥೆಗಳ ಪ್ರತಿಬಿಂಬ. ತಮ್ಮ ಜೀವನದಲ್ಲಿ ಕೂಡ ಪ್ರಕೃತಿಯ ಆದರ್ಶ ವ್ಯವಸ್ಥೆ-ಗಳನ್ನು ಹಾಸುಹೊಕ್ಕಾಗಿ ಮಾಡಲು ಜನರು ಶ್ರಮಿಸು-

ತ್ತಿದ್ದರು. ಹೂಕರನ ದೃಷ್ಟಿಯಲ್ಲಿ ಪ್ರಕೃತಿ ಪರಿಪೂರ್ಣತೆಗೆ ಹಿಡಿದ ಕನ್ನಡಿ. ಈ ಪ್ರಕೃತಿಯ ಆದರ್ಶವ್ಯವಸ್ಥೆಗಳಿಗೆ ವಿರೋಧ ತೋರಿಸಿದರೆ ವಿನಾಶ ಖಂಡಿತ ಎನ್ನುವದೂ ಕೂಡ ಅವನ ವಾದ. ಮನುಷ್ಯನ ವಿಚಾರಶಕ್ತಿ, ತರ್ಕಶಕ್ತಿಗಳೂ ಕೂಡ ಪ್ರಕೃತಿಯಿಂದ ಪ್ರೇರಣೆ ಪಡೆಯುತ್ತವೆ ಎಂಬ ಮಾತನ್ನು ಬೇಕನ್ ಹೇಳಿದ್ದಾನೆ. ಇಂಥ ಸಾಮಾಜಿಕ ವ್ಯವಸ್ಥೆ ನಮ್ಮ ಕಾಲದ ಜನರ ಮನಸ್ಸಿಗೆ ಹಿಡಿಸುವದಿಲ್ಲ-ವಾದರೂ ಆ ಕಾಲದ ಜನರಿಗೆ ಅದುವೇ ವೇದವಾಕ್ಯ ಸುಪ್ರೀಮಾಜ್ಞೆ ಆಗಿತ್ತು. ಅದನ್ನು ತಪ್ಪಿ ನಡೆದವರಿಗೆ ಶಿಕ್ಷೆ ಖಂಡಿತ. ಶೇಕ್ಸ್‌ಪೀಯರನ ಕಾಲದ ಸಾಮಾಜಿಕ ವ್ಯವಸ್ಥೆ ಮಾನವೀಯ ಮೌಲ್ಯಗಳನ್ನು ಹೊಂದಿಕೊಂಡಿರದೇ ಮಾನವ ನಿರ್ಮಿತ ಕೃತ್ರಿಮ ಮೌಲ್ಯಗಳ ಚೌಕಟ್ಟಿನಲ್ಲಿ ಬೆಳೆದಿತ್ತು. ಹಾಗಾದರೆ ಶೇಕ್ಸ್‌ಪೀಯರನಿಗೆ ಈ ಸಾಮಾಜಿಕ ವ್ಯವಸ್ಥೆಯ ವಿಷಯವಾಗಿ ಯಾವ ಅಭಿಪ್ರಾಯ ಇತ್ತು ಎನ್ನುವದನ್ನು ನಾವು ಪರಿಶೀಲಿಸಬೇಕಾಗಿದೆ. ಅವನು ಯಾವುದೇ ವಿಷಯ ಪ್ರಸ್ತಾಪಮಾಡಿದರೂ ಬಹಳ ಸಮತೋಲತೆಯನ್ನು ತೋರಿದ್ದಾನೆ. "ಕಿಂಗ್ ಲಿಯರ್" ನಾಟಕದಲ್ಲಿ ಶೇಕ್ಸ್‌ಪೀಯರ್ ಸಂಪ್ರದಾಯವಾದಿಗಳ ವಿಚಾರಗಳನ್ನು ಲಿಯರ್‌ನ ಮುಖಾಂತರ ನಮಗೆ ಚಿತ್ರಪಡಿಸಲೆತ್ನಿಸಿದ್ದಾನೆ. ಮೊದಲ ಮಗಳು ಗಾನೆರಿಲ್‌ಳಿಂದ ತ್ಯಕ್ತನಾದಾಗ ಎರಡನೆಯ ಮಗಳು ರೀಗನ್‌ಳಿಗೆ ಲೀಯರ್ ಹೇಳುವ ಮಾತುಗಳಲ್ಲಿ ಆಗಿನ ಕಾಲದ ಸಂಪ್ರದಾಯವಾದಿಗಳ ವಿಚಾರಗಳು ವ್ಯಕ್ತವಾಗುತ್ತವೆ. "ಇಲ್ಲ

ರೀಗನ್, ಎಂದೆ ನಾ ನಿನ್ನ ಶಪಿಸೆನು ಬಾಂಧವ್ಯದುಪಚಾರ-ಗಳನು, ಮಗುತನವೆಂಬ ಸಂಬಂಧವನು ವಿನಯ ವರ್ತನೆ-ಗಳಿಗೂ ಕೃತದ ನೆನವ ಋಣವನು" ಇಲ್ಲಿ ಲಿಯರ್‌ನ ದೈವಶಾಸ್ತ್ರದ ಪ್ರಕಾರ ಪ್ರಕೃತಿ ಉದಾರಿ ಎನ್ನುವದು ಬೇಕನ್ ಮತ್ತು ಹೂಕರಲ್ಲಿ ಕಂಡ ಹಾಗೇ ಕಾಣುತ್ತದೆ. ಅವರ ಪ್ರಕೃತಿಯು ಹಾಗೇ ಲಿಯರನದೂ ಮೆಟ್ಟಲು ಮೆಟ್ಟಲಾದ ವ್ಯವಸ್ಥೆ. ಅದೂ ಸಹ ತಾಯಿ-ತಂದೆಗಳನ್ನು ಮಕ್ಕಳು ಗೌರವಿಸಬೇಕು; ಮಾನವನಿಗೆ ತಕ್ಕುದಾದ್ದನ್ನು ಮಾಡಬೇಕು ಎಂದು ಹೇಳುತ್ತದೆ. ಕರುಣೆ, ಔದಾರ್ಯ, ದಾನ, ವ್ಯಕ್ತಿ-ಗೌರವ, ಕೃತಜ್ಞತೆ ಇವುಗಳನ್ನು ಮಾನವನ ಪರಿಪೂರ್ಣತೆಯ ಅಂಶಗಳನ್ನಾಗಿ ಎಣಿಸುತ್ತೇವೆ. ಹೂಕರ್, ಬೇಕನ್‌ನ ವಿಚಾರ ಧಾರೆಯನ್ನು ಧಿಕ್ಕರಿಸುವ ಬೇರೆ ಬೇರೆ ವಿಚಾರಗಳುಳ್ಳ ಜನರೂ ಆಗಿನ ಕಾಲದಲ್ಲಿದ್ದರು. ಇಂತಹ ವಿರೋಧ ಭಾವನೆಗಳನ್ನು ಪ್ರತಿನಿಧಿಸುವಾತನೆಂದರೆ ಲಿಯರ್‌ದಲ್ಲಿ ಎಡ್ಮಂಡ್. ತನ್ನ ಎಲ್ಲ ಶಕ್ತಿ, ಕೌಟಿಲ್ಯಗಳಿಂದಲೇ ತನ್ನ ಹಿತವನ್ನು ಸಾಧಿಸಿಕೊಳ್ಳುವದೇ ಅವನ ವ್ಯವಹಾರ. ಕ್ರೂರ ಪ್ರಕೃತಿಯು ಹಾಗೂ ಬೇಕನ್, ಹೂಕರರ ಉದಾರ ಪ್ರಕೃತಿಯ ಘರ್ಷಣೆಯೇ "ಕಿಂಗ ಲಿಯರ್"ದಲ್ಲಿ ಪ್ರತಿ-ಬಿಂಬಿತವಾಗಿದೆ. ಎಲಿಝಬೆಥ್ ಕಾಲದ ಸಮಯ ಸಾಧಕ-ತನ, ಸ್ವಾರ್ಥತೆಗಳನ್ನು ಎಡ್ಮಂಡ್ ಪ್ರತಿನಿಧಿಸುತ್ತಾನೆ. ಲಿಯರ್ ಹುಚ್ಚನಾಗುವದಕ್ಕೆ ಕಾರಣವೇನೆಂದರೆ ಅವನು ತನ್ನ ನಿಶ್ಚಿತವಾದ ಪ್ರಕೃತಿಯಿಂದ ದೂರವಾದುದು. ಮನುಷ್ಯ

ನಲ್ಲಿರುವ ಪ್ರಾಣಿತನವನ್ನು, ಮನುಷ್ಯತನವನ್ನು ಬೇರೆಬೇರೆ-ಯಾಗಿ ನಾವು ನೋಡಲು ಶೇಕ್ಸ್‌ಪಿಯರನ ನಾಟಕಗಳು ಕೈಗನ್ನಡಿ. ಶೇಕ್ಸ್‌ಪಿಯರನಿಗೆ ಈ ಮಾನವ ಜೀವನದ ಪ್ರಕೃತಿಯ ವಿವಿಧಮುಖಗಳ ಪರಿಚಯವಿಲ್ಲದೇ ಈ ವಿಶ್ವದ ಪ್ರಕೃತಿಯ ವಿವಿಧ ಮುಖಗಳ ಪರಿಚಯವಿತ್ತು ಎನ್ನುವವನ್ನು ನಾವು ಅವನ ನಾಟಕಗಳ ಮೂಲಕ ಕಂಡುಕೊಳ್ಳುತ್ತೇವೆ. ಮಾನವನ ಬಾಹ್ಯಜೀವನದ ವಿಹಂಗಮ ನೋಟವನ್ನು, ಅವನ ಮನಸ್ಸಿನ ಅಂತರಂಗ ವ್ಯವಹಾರದ ಚಿತ್ರವಿಚಿತ್ರವಾದ ದೃಶ್ಯಗಳನ್ನು ಶೇಕ್ಸ್‌ಪಿಯರ್ ತನ್ನ ನಾಟಕಗಳ ಮೂಲಕ ನಮಗೆ ಪರಿಚಯ ಮಾಡಿಸಿದ್ದಾನೆ.

೩. ಶೇಕ್ಸಪೀಯರನ ನಾಟಕಗಳಲ್ಲಿ ಕಂಡು ಬರುವ ಅವನ ಸಾಮಾಜಿಕ ಪ್ರಜ್ಞೆ

"ಸಾಮಾಜಿಕ ಪ್ರಜ್ಞೆ" ಈ ಶಬ್ದಕ್ಕೆ ಅನೇಕ ವಿಶಾಲವಾದ ಅರ್ಥಗಳುಂಟು. ಅದರಂತೆಯೇ ಈ ಶಬ್ದವು ಬಹು ವಿಶಾಲವಾದ ಬಹುಮುಖ ರೂಪಿಯಾಗಿದೆ. ಸಾಮಾಜಿಕ ಪ್ರಜ್ಞೆಯಲ್ಲಿ ಮುಖ್ಯವಾಗಿ ಎರಡು ವಸ್ತುಗಳ ನೇರ ಪ್ರತಿಕ್ರಿಯೆ ಹಾಗೂ ಸಂಯೋಜನೆಗಳು ವ್ಯಕ್ತವಾಗುತ್ತವೆ. ಅವು ಯಾವುವೆಂದರೆ ಮೊದಲನೆಯದಾಗಿ ವಾಸ್ತವಿಕ ಜಗತ್ತು ಹಾಗೂ ಅದರ ನಿರೀಕ್ಷಣೆ ಮಾಡುತ್ತಿರುವ ಮಾನವ ನಿರೀಕ್ಷಕ. ಮಾನಸಿಕ ಅನುಭವಗಳ ರೂಪವೇ ಸಾಮಾಜಿಕ ಪ್ರಜ್ಞೆ ಎಂಬ ಅಭಿಪ್ರಾಯ ಕೆಲವು ವಿಮರ್ಶಕರದಾಗಿರುತ್ತದೆ. ಸಮಾಜದಲ್ಲಿದ್ದಾಗ

ನಮಗರಿಯದಂತೆಯೇ ನಾವು ಸಮಾಜದ ಕೆಲವು ರೀತಿ ನೀತಿ ಕಟ್ಟುಪಾಡುಗಳಿಗೆ ಒಳಗಾಗುತ್ತೇವೆ, ಹಾಗೂ ಪ್ರಭಾವಿತರಾಗುತ್ತೇವೆ. "ಎನ್ಸೈಕ್ಲೋಪೀಡಿಯಾ ಬ್ರಿಟಾನಿಕಾ"ದ ಪ್ರಕಾರ ಸಾಮಾಜಿಕ ಪ್ರಜ್ಞೆ ಅಂದರೆ ಎಲ್ಲ ವಸ್ತುಗಳ ವ್ಯಾಪಾರವನ್ನು ಸಂಪೂರ್ಣವಾಗಿ ತಿಳಿದುಕೊಳ್ಳುವದು. ಅದರಂತೆಯೇ "ಡಿಕ್ಶನರಿ ಆಫ್ ಸೋಶಿಯಲ್ ಸಾಯನ್ಸ"ದ ಪ್ರಕಾರ ವ್ಯಕ್ತಿಯು ಸಮಾಜದಒಂದು ಭಾಗವೆಂಬ ಅವನ ತಿಳುವಳಿಕೆಯೇ ಸಾಮಾಜಿಕ ಪ್ರಜ್ಞೆ. ಆದರೆ ಇಷ್ಟಕ್ಕೆಯೇ ಅವನ ತಿಳುವಳಿಕೆ ಸೀಮಿತವಾಗಿಲ್ಲ; ಬೇರೆಯವರ ಬಗ್ಗೆಯೂ ಅವನ ತಿಳುವಳಿಕೆ ಅತ್ಯಗತ್ಯ. ಈ ವ್ಯವಸ್ಥಿತ ಜ್ಞಾನದ ವಾಸ್ತವಿಕತೆಯೇ ಸಾಮಾಜಿಕ ಪ್ರಜ್ಞೆ. ಈ ಸಾಮಾಜಿಕ ಪ್ರಜ್ಞೆಯಲ್ಲಿ ಮತ್ತೊಂದು ಅಂಶವನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ. ಅದು ಯಾವುದೆಂದರೆ ಭೌತಿಕ ಜಗತ್ತಿನ ಪರಿಜ್ಞಾನದ ಜೊತೆಗೇ ವ್ಯಕ್ತಿಗೆ ತನ್ನ ವ್ಯಕ್ತಿತ್ವದ ಅರಿವು ಇರಬೇಕಾದದ್ದು ಅವಶ್ಯ. ಮನುಷ್ಯನ ಭಾವನೆಗಳು, ವಿಚಾರಗಳು ಹಾಗೂ ಬೇರೆ ರೀತಿಯ ಪ್ರಭಾವಗಳ ಒಟ್ಟು ಸಂಕಲನವೇ ಅವನನ್ನು ಸಾಮಾಜಿಕವಾಗಿ, ಪ್ರಜ್ಞಾಶೀಲನನ್ನಾಗಿ ಮಾಡುತ್ತವೆ.

ಶೇಕ್ಸ್‌ಪಿಯರನ ಸಾಮಾಜಿಕ ಪ್ರಜ್ಞೆಯನ್ನು ಕೇವಲ ಹದಿನಾರನೆಯ ಶತಮಾನದ ಸಮಾಜದ ವಾಸ್ತವಿಕ ನಿವೇದನೆ ಅಥವಾ ಯಥಾಕಥಿತ ಕಥನ ಎಂದು ಕರೆಯಲು ಸಾಧ್ಯವಿಲ್ಲ. ಎಲಿಜಾಬೆಥ್ ಕಾಲದ ಸಮಾಜದ ಪ್ರತಿನಿಧಿಯೆಂದು ಶೇಕ್ಸ್‌ಪಿಯರನನ್ನು ಕರೆಯುವದು ಅವನ ಮಹಾನ್

ವ್ಯಕ್ತಿತ್ವವಕ್ಕೇ ನಾವು ಸಂಕುಚಿತ ಅರ್ಥವನ್ನು ಕೊಟ್ಟಂತಾಗು ತ್ತದೆ. ಏಕೆಂದರೆ ಆತನ ವ್ಯಕ್ತಿತ್ವ, ಸಾಮಾಜಿಕ ಪ್ರಜ್ಞೆಗಳು ಕಾಲಾತೀತವಾಗಿವೆ. ತನ್ನ ದೇಶ ಕಾಲಮಾನಗಳ ಸಂಕುಚಿತ ಪರಿಸರವನ್ನೇ ದಾಟಿ ಹೋದ ಮಹಾನಾಟಕ ಕರ್ತೃ ಅವನು. ಯಾವುದೇ ನಾಟಕ ಕರ್ತೃವು ತನ್ನ ದೇಶ ಕಾಲಮಾನ ಪರಿಸ್ಥಿತಿ ಗಳನ್ನು ಮಾತ್ರ ನಾಟಕಗಳಲ್ಲಿ ಬಿಂಬಿಸಿದರೆ, ಅವನ ಸಾಮಾಜಿಕ ಪ್ರಜ್ಞೆ ಪರಿಪೂರ್ಣವಾಗಲಾರದು ಹಾಗೆ ಅವನು ಮಾಡಿದ್ದಾದರೆ ಜೀವನದ ಮೌಲ್ಯಗಳಿಗೆ ಆತನು ಎರವಾಗ ಬಹುದು. ಹಾಗೂ ಅವುಗಳಿಗೆ ನ್ಯಾಯ ದೊರಕಿಸಿ ಕೊಟ್ಟಂತಾಗುವದಿಲ್ಲ. ನಿರಂತರವಾಗಿ ಜೀವನದಲ್ಲಿ ಹಾಸು ಹೊಕ್ಕಾಗಿರುವ ಜೀವನ ಮೌಲ್ಯಗಳು ಸಾಮಾಜಿಕ ಪ್ರಜ್ಞೆಯ ಪ್ರಮುಖ ಭಾಗಗಳಾಗಿವೆ. ಇಂಥ ಜೀವನದ ಮೌಲ್ಯಗಳ ಪರಿಜ್ಞಾನ ಹಾಗೂ ಅವುಗಳ ಮೌಲ್ಯೀಕರಣದ ಚಾತುರ್ಯಗಳು ನಾಟಕ ಕರ್ತೃವಿನಲ್ಲಿರಬೇಕಾದದ್ದು ವಿಹಿತ. ಶೇಕ್ಸಪೀಯರನ ನಾಟಕಗಳನ್ನು ನಾವು ಅವಲೋಕಿಸಿದಾಗ ಅವನೊಬ್ಬ ಆಳವಾದ ವಿಚಾರ ಪ್ರವೃತ್ತಿಯುವನೆಂಬ ಭಾವನೆ ಬಾರದಿರದು. ಹಾಗೂ ಮಾನವನ ಜೀವನವನ್ನೇ ಬಗೆದು ಅಳೆದು ಜಗತ್ತಿಗೇ ತೋರಿಸಿದವನೆಂಬ ಅಭಿಪ್ರಾಯಕ್ಕೆ ಬರುತ್ತೇವೆ.

ಒಬ್ಬ ಸಾಮಾನ್ಯ ವ್ಯಕ್ತಿಯ ಸಾಮಾಜಿಕ ಪ್ರಜ್ಞೆಯು ಸ್ವಾನುಭವ ಸಿದ್ಧ, ಹಾಗೂ ವಾಸ್ತವಿಕವಾದದ್ದು. ಅವನು ನಿತ್ಯ ಜೀವನದ ಸತ್ಯಸ್ಥಿತಿಯನ್ನು ಅನುಭವಿಸುತ್ತಾನೆ. ಆದರೆ

ಬದ್ಧ ನಾಟಕಕರ್ತೃವಿನ ಊಹೆ ಹಾಗೂ ಆದರ್ಶ ಧ್ಯೇಯ-ಗಳಿಂದಲೂ, ಟೀಕೆ, ಹೇಳಿಕೆಗಳಿಂದಲೂ, ಕಲ್ಪನೆಯಿಂದಲೂ ಕೂಡಿದ್ದಾಗಿರುತ್ತದೆ. ಶೇಕ್ಸ್‌ಪಿಯರನು ತನ್ನ ಸಾಮಾಜಿಕ ಪ್ರಜ್ಞೆಯನ್ನು ತನ್ನ ನಾಟಕಗಳ ಕಥಾವಸ್ತುವನ್ನು ಹೆಣೆಯು-ವವರ ಮುಖಾಂತರ, ಪಾತ್ರ ಘೋಷಣೆಗಳ ಮುಖಾಂತರ ಅಭಿವ್ಯಕ್ತ ಪಡಿಸಿದ್ದಾನೆ. ಆತನ ಸಾಮಾಜಿಕ ಪ್ರಜ್ಞೆಯನ್ನು ಥಾಮಸ್ ಹಾರ್ಡಿ ಅಥವಾ ಬೆನ್‌ಜಾನ್ಸನ್‌ರಂಥವರ ವಾಸ್ತವಿಕತಾವಾದಕ್ಕಾಗಲೀ, ಅಥವಾ ಡಿಕನ್ಸ್‌ನ ಹಾಸ್ಯಭರಿತ ಮಾನವತಾವಾದಕ್ಕೂ ಹಾಗೂ ಸ್ಕಾಟ್‌ನ ರೋಮಾಂಟಿಕ್ ಸಂಪ್ರದಾಯಕ್ಕೂ ಹೋಲಿಸಲಾಗದು. ಆತನ ನಾಟಕಗಳಿಗೆ ಹೇಗೆ ತಮ್ಮದೇ ಆದ ಒಂದು ವಿಶಿಷ್ಟ ರೂಪ, ಶೈಲಿಗಳಿವೆಯೋ ಅದೇ ರೀತಿ ಆತನ ಸಾಮಾಜಿಕ ಪ್ರಜ್ಞೆಯೂ ಕೂಡ ಬಹುಮುಖವಾದದ್ದು, ಹಾಗೂ ವಿಶಿಷ್ಟವಾದದ್ದು. ಮೇಲೆ ಹೇಳಿದ ಎಲ್ಲ ಸಾಹಿತ್ಯ ಸಂಪ್ರದಾಯಗಳನ್ನು ಮೀರಿ ಆತನು ತನ್ನದೇ ಆದ ಸ್ವತಂತ್ರ ಶೈಲಿಯ ಮುಖಾಂತರ ತನ್ನ ಸಾಮಾಜಿಕ ಪ್ರಜ್ಞೆಯನ್ನು ವ್ಯಕ್ತಪಡಿಸಲು ಯತ್ನಿಸಿದ್ದಾನೆ. ಒಂದೊಂದು ಸಾಹಿತ್ಯ ಸಂಪ್ರದಾಯಕ್ಕೆ ಸೇರಿದ ವಿಮರ್ಶಕರು ಶೇಕ್ಸ್‌ಪಿಯರನು ತಮ್ಮ ಸಾಹಿತ್ಯ ಸಂಪ್ರದಾಯಕ್ಕೇ ಸೇರಿದವನು ಎಂದು ಇದುವರೆಗೂ ಅವರು ಹೇಳುತ್ತಲೇ ಇದ್ದಾರೆ. ಎಲಿಝಾಬೆಥ್ ಯುಗದಲ್ಲಿ ಜನ್ಮತಾಳಿದ ಆತ ನವ್ಯಕಾವ್ಯ ಸಂಪ್ರದಾಯ ಮಾನವತಾವಾದದ ಸಾಹಿತ್ಯ ಸಂಪ್ರದಾಯ, ಪರಧರ್ಮಸಹಿಷ್ಣುತೆಗಳನ್ನು ಹಾಗೂ

ಕ್ಯಾಥೋಲಿಕ್, ಪ್ಯೂರಿಟನ್, ಆ್ಯಂಗ್ಲಿಕನ್‌ರ ವಿಚಾರವಾದ ಒಳ ಜಗಳಗಳನ್ನೆಲ್ಲ ಮೈಗೂಡಿಕೊಂಡಿದ್ದ. ಆ ಯುಗದ ವಿಹಂಗಮ ನೋಟದ ಪರಿಜ್ಞಾನ ಅವನಿಗಿತ್ತು. ಅವನ ದೃಷ್ಟಿಕೋನ ಅಥವಾ ಸಾಮಾಜಿಕ ಪ್ರಜ್ಞೆಯ ಮುಖ್ಯ ವೈಶಿಷ್ಟ್ಯವೇನೆಂದರೆ ಸಮತೋಲತೆ ಅಥವಾ ನಿಷ್ಪಕ್ಷಪಾತತನ. ಚಿತ್ರಗೋಚರತ್ವ ಅವರ ಇನ್ನೊಂದು ಮುಖ್ಯ ವೈಶಿಷ್ಟ್ಯ. ತನ್ನ ಕಾಲ, ಯುಗ, ಸಂಸ್ಕೃತಿಗಳನ್ನು ತನ್ನ ನಾಟಕಗಳ ಮುಖಾಂತರ ಪ್ರತಿನಿಧಿ-ಕರಿಸುವದಲ್ಲದೇ, ಇಡೀ ಮಾನವ ಕೋಟಿಯು ನಿರಂತರ ಸಾಮಾಜಿಕ ಜೀತನಾ ಪ್ರವಾಹ ಜ್ಞಾನವನ್ನು ಕೂಡ ಅದೇ ಕಾಲಕ್ಕೆ ವ್ಯಕ್ತಪಡಿಸಿದ್ದಾನೆ. ಅತನು ತನ್ನ ರಾಷ್ಟ್ರಜೀವನದ ಮುಖ್ಯ ಪ್ರವಾಹದಲ್ಲಿ ಲೀನವಾಗಿದ್ದರಿಂದಲೇ ಪ್ರಚಲಿತ ಸಮಸ್ಯೆ, ಸಂಸ್ಕೃತಿ, ಧರ್ಮ, ಸಾಮಾಜಿಕ ಸ್ವಾಸ್ಥ್ಯಗಳನ್ನು ತನ್ನ ನಾಟಕಗಳ ಮುಖಾಂತರ ಪ್ರತಿಬಿಂಬಿಸಿದ್ದಾನೆ. ಕೆಲವು ವಿಮರ್ಶಕರು ಹೇಳುವದೇನೆಂದರೆ — ‘‘ಶೇಕ್ಸಪೀಯರನು ಬೇರೆಯವರ ವಿಚಾರಗಳನ್ನು ಹೇಳುತ್ತಾನೆಯೆ ಹೊರತು ತನ್ನ ವಿಚಾರಗಳನ್ನಲ್ಲ. ಆದರೆ ಅವನು ಏನು ಹೇಳುತ್ತಾನೆ ಎನ್ನುವದು ಮಾತ್ರ ನಿಗೂಢವಾದ ಪ್ರಶ್ನೆಯಾಗಿದೆ. ಆದರೆ ಈ ವಿಮರ್ಶಕರ ವಿಮರ್ಶೆಗಳು ತೀರಾ ವಿಕಲ್ಪವಾಗಿವೆ. ಕಥಾವಿನ್ಯಾಸ, ಪಾತ್ರಗಳ ಮುಖಾಂತರ ನಾವು ನಾಟಕಕಾರನ ಉದ್ದೇಶ, ಮನೋಧರ್ಮಗಳನ್ನು ತಿಳಿದುಕೊಳ್ಳಲು ಸಾಕಷ್ಟು ಅವಕಾಶವಿದೆ. ನಾಟಕಗಳಲ್ಲಿಯ ಪಾತ್ರಗಳು ಸಹಜವಾಗಿ ಮಾತನಾಡುತ್ತಿರಬಹುದೇನೋ ಸರಿ, ಆದರೆ ಇಷ್ಟಕ್ಕೇ

ತಪ್ಪು ಅಭಿಪ್ರಾಯವನ್ನುಂಟು ಮಾಡಿ ನಾಟಕಕಾರನು ತನ್ನ ಉದ್ದೇಶ, ವಿಚಾರಗಳನ್ನು ಪ್ರಕಟಿಸಲು ಯತ್ನಿಸಿಲ್ಲವೆನ್ನುವದು ವಿಮರ್ಶೆಯೇ ಅಲ್ಲ. ವಿಮರ್ಶಕರಾದ ರ್‍ಯಾಲೀ, ಡೌಡನ್, ಷೇಂಬರ್ಸ್, ಡೋವರ್ ವಿಲ್ಸನ್‌ರವರು ಶೇಕ್ಸ್‌ಪಿಯರನ ನಾಟಕಗಳು ವಾಸ್ತವಿಕ ಜಗತ್ತಿನ ನಿತ್ಯ ಜೀವನಕ್ಕೆ ಹಿಡಿಯುವ ಕನ್ನಡಿಗಳಾಗಿವೆ ಎಂದು ಹೇಳಿದ್ದಾರೆ. ಅವರ ಮಾತೇನು ಅತಿಶಯೋಕ್ತಿಯೇನೂ ಅಲ್ಲ.

ಶೇಕ್ಸ್‌ಪಿಯರನ ನಾಟಕಗಳಲ್ಲಿ ಮುಖ್ಯವಾಗಿ ಕಂಡು ಬರುವ ವೈಶಿಷ್ಟ್ಯವೇನೆಂದರೆ ಜೀವನ ಮೌಲ್ಯಗಳ ಪೃಥಃಕರಣ ಹಾಗೂ ಚಮತ್ಕಾರವಾಗಿ ಅವುಗಳ ವಿಶದೀಕರಣ ಈ ಪ್ರಕೃತಿಗೇ ಕನ್ನಡಿ ಹಿಡಿಯುವಂಥವುಗಳಾಗಿವೆ ಅವನು ಪ್ರತಿಪಾದಿಸಿದ ಜೀವನ ಮೌಲ್ಯಗಳು; ಅವು ಅವನ ನಾಟಕಗಳಲ್ಲಿ ಹಾಸುಹೊಕ್ಕಾಗಿವೆ. ಹಾಗೂ ಅವನ ನಾಟಕಗಳಿಗೆ ವೈಶಿಷ್ಟ್ಯವನ್ನು ತಂದುಕೊಟ್ಟಿವೆ. ಜೀವನದ ಮೌಲ್ಯಗಳು ಯುಗ - ಯುಗಾಂತರಗಳಲ್ಲಿ ಬದಲಾಗದೇ ಹಾಗೇ ಇರುವಂಥವು; ದೇಶದಲ್ಲಿ ಅನೇಕ ಸ್ಥಿತ್ಯಂತರಗಳಾದರೂ ಅವು ಅಮರವಾಗಿವೆ. ಅವನ ಪ್ರಕೃತಿ ಧರ್ಮ, ಜೀವನ ಭುಭುಕ್ಷೆ, ಮಾನವನ ಕುಂದು-ಕೊರತೆಗಳ ಬಗೆಗೆ ಅವನಿಗಿದ್ದ ಸಹಾನುಭೂತಿ, ಉದಾತ್ತವಾದ ಮಧುರ ಪ್ರೇಮದ ಹಾಗೂ ಪ್ರಣಯದ ವಿಚಾರಗಳು ಅವನ ನಾಟಕಗಳಲ್ಲಿ ಬಹು ರಮ್ಯವಾಗಿ ಒಡಮೂಡಿ ಜೀವತಾಳಿ ನಿಂತಿವೆ.

ಶೇಕ್ಸ್‌ಪೀಯರನು ಜೀವನದ ಬಾಹ್ಯ ಪ್ರಪಂಚದ ವ್ಯಾಪಾರಗಳ ರಮ್ಯ ಕಥಾವಸ್ತುವನ್ನು ಹೇಗೆ ವಿನ್ಯಾಸಗೊಳಿಸ ಬಲ್ಲನೋ ಅದೇ ರೀತಿ ಮಾನವನ ಮನಸ್ಸಿನ ತುಮುಲಗಳನ್ನು ಕೂಡ ಪಾತ್ರಗಳ ಮುಖಾಂತರ, ಕಥಾವಸ್ತುವಿನ ಮೂಲಕ ಜನರಿಗೆ ತೋರಿಸಬಲ್ಲವನಾಗಿದ್ದ. ಬೆನ್ ಜಾನ್ಸನ್, ಮಾರ್ಲೋರ ನಾಟಕಗಳು ಕೇವಲ ಹದಿನಾರನೆಯ ಶತಮಾನದ ಜೀವನ ದರ್ಶನಗಳಾದರೆ, ಶೇಕ್ಸಪೀಯರನವು ಅದರ ಜೊತೆಗೇ ಎಲ್ಲ ಯುಗಗಳ ವಿಶ್ವಮಾನವತೆಯ ಪರಿಪೂರ್ಣ ವರ್ಣರಂಜಿತವಾದ ಜೀವನವನ್ನು ಚಿತ್ರಿಸಿದ್ದಾನೆ. ಆದ್ದರಿಂದಲೇ ಆತನ ನಾಟಕಗಳು ವಿಶ್ವಸಾಹಿತ್ಯದ ಸಿರಿಮುಡಿ ಗಳು. ಹಾಗೂ ಪ್ರಪಂಚದಲ್ಲೆಲ್ಲ ಜನರ ಸೊತ್ತಾಗಿವೆ. ವಿಶ್ವಮಾನವ ಜೀವನದ ಆಕಾಂಕ್ಷೆಗಳನ್ನೇ ನಮ್ಮೆದುರು ಶೇಕ್ಸಪೀಯರ ಇಟ್ಟಿದ್ದಾನೆ. ಅವನ ನಾಟಕಗಳಲ್ಲಿ ಪ್ರಚಲಿತವಾದ ಅವನ ಸಾಮಾಜಿಕ ಪ್ರಜ್ಞೆಯು ಪ್ರಕೃತಿಯಷ್ಟು ಸಹಜವಾಗಿದೆ. ಹಾಗೂ ಸ್ವತಃ ಪ್ರವರ್ತಿತವಾಗಿದೆ. ಅದೊಂದು ವಿಶ್ವ ಕೋಶದ ಪರಿವರ್ತಿತ ರೂಪ. "ಸಾಮಾಜಿಕ ಪ್ರಜ್ಞೆ" ಈ ವಿಷಯದಲ್ಲಿ ನಾವು ನಾಟಕಕಾರನು ಘೋಷಿಸಿದ ಕಾಯಿದೇ ಕಟ್ಟಳೆಗಳನ್ನೇನೂ ಆರಂಭಿಸುವದಿಲ್ಲ. ಆದರೆ ನಾಟಕಕಾರ-ನಲ್ಲಿದ್ದ ಜೀವನದ ಬಗೆಗಿನ ದೃಷ್ಟಿಕೋನ, ವಿಚಾರಧಾರೆಗಳನ್ನು ಅಭ್ಯಸಿಸುವದಷ್ಟೆ ನಮ್ಮ ಗುರಿ. ಕಾಯಿದೇ ಕಟ್ಟಳೆಗಳನ್ನು ವಿವರಿಸಲು ಶೇಕ್ಸ್‌ಪೀಯರನೇನೂ ಉದ್ದೇಶಿಸಿರಲಿಲ್ಲ.

೪. ಶೇಕ್ಸ್‌ಪಿಯರನ ಹರ್ಷ ನಾಟಕಗಳು

ಶೇಕ್ಸ್‌ಪಿಯರನ ಸಮಕಾಲೀನ ನಾಟಕಕಾರನಾದ ಬೆನ್‌ಜಾನ್ಸನ್ ತನ್ನ ಗೇಯ ನಾಟಕಗಳಲ್ಲಿ ಅಳವಡಿಸಿಕೊಂಡಿರುವದು ಕಟುಹಾಸ್ಯ ಅವರಂತೆ ಎಲಿಝಾಬೆಥ್ ಕಾಲದ ನಾಟಕಗಳಲ್ಲಿ ಮುಖ್ಯವಾಗಿ ನಮಗೆ ಕಂಡುಬರುವದು ಕೂಡ ಅದೇ ಮಾದರಿಯ ಟೀಕಾಸ್ತ್ರ. ಈ ಸ್ವಾಭಾವಿಕವಾದ ಹಾಗೂ ಪ್ರಚಲಿತವಾದ ನಾಟಕಸಂಪ್ರದಾಯಗಳ ಪ್ರಭಾವದಿಂದ ಶೇಕ್ಸ್‌ಪಿಯರ್ ದೂರಾಗುವದು ಅಸಾಧ್ಯವಾದ ಸಂಗತಿಯಾಗಿತ್ತು. ಆದರೆ ಆತನು ಸಮಕಾಲೀನ ಸಂಪ್ರದಾಯದಿಂದ ಸ್ವಲ್ಪ ದೂರ ಸರಿದು ಸುವರ್ಣ ಮಧ್ಯಮಮಾರ್ಗವನ್ನು ಹಿಡಿದು ರಂಗಭೂಮಿಯ ಸಾಹಿತ್ಯದಲ್ಲಿ ಹೊಸ ಸಂಪ್ರ-

ದಾಯಕ್ಕೆ ನಾಂದಿ ಹಾಡಿದನು. ಅವನ ನಾಟಕಗಳಲ್ಲಿ ಕಂಡು ಬರುವದು ಕಟುಹಾಸ್ಯವಲ್ಲ; ಆದರೆ ಅಪ್ಪಟವಾದ, ಶಿಷ್ಟಹಾಸ್ಯದ ಹೊನಲು. ಇಂಗ್ಲಂಡಿನ ಮಧ್ಯ ಕಾಲದ ಕವಿ ಛಾಸರನ ಜಾಡನ್ನೇ ಶೇಕ್ಸ್ಪಿಯರ ರಂಗಭೂಮಿ ಸಾಹಿತ್ಯಕ್ಕೆ ಅರಸಿದ್ದಾನೆ. ತನ್ನ ಹರ್ಷ ನಾಟಕಗಳಲ್ಲಿ ಅವನು ತನ್ನ ಕಾಲದ ಜನರ ಭ್ರಾಂತಿ ಹಾಗೂ ಸಂಪ್ರದಾಯಗಳನ್ನು ಸೌಮ್ಯವಾಗಿ ನಗೆಪಾಟಲುಗೀಡುಮಾಡಿ ಹಾಸ್ಯದ ಹೊನಲನ್ನು ಧಾರಾಳವಾಗಿ ಹರಿಯಿಸಿದ್ದಾನೆ. ಅವನ ಹರ್ಷ ನಾಟಕಗಳ ಮುಖ್ಯ ಧ್ಯೇಯವೆಂದರೆ ಸಾಮಾಜಿಕ ವಿಡಂಬನೆ. ಈ ಶಿಷ್ಟಹಾಸ್ಯ, ಸಾಮಾಜಿಕ ವಿಡಂಬನೆಗಳಿಂದ ನಾವು ಕಂಡುಕೊಳ್ಳುವದೇನೆಂದರೆ ಅವನ ಜೀವನ ಭುಭುಕ್ಷೆ, ಮಾನವೀಯತೆ, ಮಾನವಜೀವನದ ಬಗೆಗಿನ ಅವನ ಅಪಾರ ಅನುಕಂಪ, ಶ್ರದ್ಧೆಗಳು. ಈ ನಾಟಕಗಳಲ್ಲಿ ಪ್ರತಿಬಿಂಬವಾಗಿರಲ್ಪಟ್ಟ ಜೀವನ ಬಗೆಗಿನ ಅವನ ನೋಟ ಹಾಗೂ ಪ್ರಸ್ಥಾನ ವಿಶಿಷ್ಟವಾದ ವಿಷಯದಿಂದ ಪ್ರಾರಂಭವಾಗಿ ವಿಶಾಲವಾದ ರಾಷ್ಟ್ರೀಯ ಜೀವನದೆಡೆಗೆ ಬೆಳೆಯುತ್ತಾ ಹೋಗಿದೆ. ಅವನೊಬ್ಬ ತನ್ನ ಕಾಲದ ಇತರ ರಂಗಭೂಮಿಯ ಸಾಹಿತಿಗಳಂತಿರದೇ ತಾನು ಸಮದರ್ಶಿಯಾಗಿಯೇ ಉಳಿಯಲು ಪ್ರಯತ್ನಿಸಿದ್ದಾನೆ. ತನ್ನ ಕಾಲದ ತನ್ನ ನಾಡಿನ ಶ್ರೀಮಂತ ವರ್ಗಗಳ ವೈಭವೋಪೇತ ದುಂದುಗಾರಿಕೆಯ ಜೀವನ ಹಾಗೂ ಕೃತ್ರಿಮತೆಯ ಜೀವನವನ್ನು ಆತನು ಮುಖ್ಯವಾಗಿ ವಿಡಂಬನೆ ಮಾಡಿದ್ದಾನೆ. "ಮರ್ಚಂಟ್ ಆಫ್ ವೇನಿಸ್," "ಲವ್ಸ್

ಲೆಟರ್ಸ್ ಲಾಸ್ಟ", "ಆ್ಯಜ ಯೂ ಲೈಕ ಇಟ್", "ಟ್ವೆಲ್ಥ ನೈಟ್" ಮುಂತಾದ ಈ ಹರ್ಷ ನಾಟಕಗಳಲ್ಲಿ ಇಂಗ್ಲೀಷ ಜನರ ಚಿತ್ರವಿಚಿತ್ರವಾದ ಉಡಿಗೆ ತೊಡಿಗೆಗಳ ಬಗೆಗಿನ ಮೋಹವನ್ನು, ಪರದೇಶದ ವ್ಯಾಮೋಹ, ಪ್ರವಾಸಗಳನ್ನು ವಿಡಂಬನೆಗೆ ಗುರಿ ಮಾಡಿದ್ದಾನೆ. ಮಾನವಪ್ರೇಮಿ ಹಾಗೂ ಸುಜ್ಞನಾದ ಶೇಕ್ಸ್‌ಪೀಯರ ಜೀವನದ ಸಾರ, ಅವಶ್ಯಕತತ್ವಗಳಿಗೆ ಮಹತ್ವ ಕೊಟ್ಟಿದ್ದಾನೆಯೇ ಹೊರತು ಸ್ವಯಂಸಿದ್ಧವೆಂದು ತಿಳಿದು-ಕೊಂಡ ತತ್ವಕ್ಕಲ್ಲ. ಪ್ರತಿಭೆಯ ಮೂಲ, ಉಗಮಗಳ ಕಲ್ಪನೆ, ಜ್ಞಾನ ಅವನಿಗಿತ್ತು ಎನ್ನುವದನ್ನು ಅವನ ನಾಟಕ-ಗಳು ಸಾಕ್ಷಿ ಹೇಳುತ್ತವೆ. ವಿಲಕ್ಷಣವಾದ ಕುಲೀನತೆಯ ಪ್ರತಿಪಾದನೆಗಾಗಿ ಹಾಗೂ ತಯಾರಾದ ನೀತಿಶಾಸ್ತ್ರಕ್ಕಾಗಿ ಶೇಕ್ಸ್‌ಪೀಯರನನ್ನು ಟೀಕಿಸಲಾಗುತ್ತದೆ. ವಿಶಾಲದೃಷ್ಟಿಯ ಶೇಕ್ಸ್‌ಪೀಯರ ನೀತಿಶಾಸ್ತ್ರದ ಸಮಸ್ಯೆಗಳನ್ನು ಮಾನವ ಜೀವನದ ಭಾಗಗಳೆಂದೇ ನಮಗೆ ಅವುಗಳನ್ನು ಅವನು ವಿದಿತ ಪಡಿಸಿದ್ದಾನೆಯೇ ಹೊರತು ಅವುಗಳ ನ್ಯಾಯ-ಅನ್ಯಾಯ, ಯೋಗ್ಯತೆ ಅಯೋಗ್ಯತೆಗಳನ್ನು ಚರ್ಚಿಸಿಲ್ಲ.

ಶೇಕ್ಸ್‌ಪೀಯರನ ಗೇಯ ನಾಟಕಗಳ ಮತ್ತೊಂದು ಪ್ರಾಮುಖ್ಯ ವೈಶಿಷ್ಟವೆಂದರೆ ರಂಜನೀಯವಾದ ಪ್ರಣಯದ ವಿವಿಧ ನಿಲುವುಗಳು. ಅವನ ಅನೇಕ ಗೇಯ ನಾಟಕಗಳ ಮುಖ್ಯ ಕಥಾ ವಸ್ತುವೂ ಕೂಡ ಪ್ರಣಯವೇ ಆಗಿದೆ. ಉದಾಹರಣಾರ್ಥವಾಗಿ ಪ್ರಸರ್ಪಿಲನ ಹಾಗೂ ವಿವಾಹಗಳಲ್ಲಿ

ಪ್ರಣಯದ ಪರ್ಯವಸಾನಗಳಾಗಿವೆ. ನಿಸರ್ಗ ಮಾನವ ನಿರ್ಮಿತ ಕೃತ್ರಿಮ ಕಾಯದೇ ಕಟ್ಟಳೆಗಳನ್ನು ನೋಡಿ ಅಪಹಾಸ್ಯ ಮಾಡುತ್ತದೆ ಎಂದು ಶೇಕ್ಸ್‌ಪೀಯರನೇ ತನ್ನ ನಾಟಕಗಳ ಮುಖಾಂತರ ನಿವೇದಿಸಿದ್ದಾನೆ. ಪ್ರಣಯದ ಕೆಲವು ಅತಿರೇಕ, ಹುಚ್ಚು, ಅಸಭ್ಯ, ಅನೈತಿಕ ವರ್ತನೆಗಳನ್ನು ಆತನು ತನ್ನ ನಾಟಕಗಳಲ್ಲಿ ಟೀಕೆಗೆ ಗುರಿಮಾಡಿದ್ದಾನೆ. ಪ್ರೇಕ್ಷಕರೇ ನಿಜವಾದ ನ್ಯಾಯ-ಅನ್ಯಾಯಗಳ ಪರಿಶೀಲಕರು ಆತನಿಗೆ. ಅವರ ಸಾಮಾನ್ಯ ತಿಳುವಳಿಕೆಗೇ ನಿರ್ಣಯಗಳನ್ನು ತೆಗೆದುಕೊಳ್ಳಲು ಆತನು ಅವಕಾಶ ಕಲ್ಪಿಸಿಕೊಟ್ಟಿದ್ದಾನೆ. ಆತನು ತಾನೇ ನ್ಯಾಯ-ಅನ್ಯಾಯಗಳ ಪರಿಶೀಲನೆಯಲ್ಲಿ ತೊಡಗಿದ್ದಾದರೆ ಬೆನ್‌ಜಾನ್ಸನ್‌ನಿಗೂ ಅವನಿಗೂ ಯಾವುದೇ ವ್ಯತ್ಯಾಸವಾಗುತ್ತಿರಲಿಲ್ಲ. ಮಾನವನ ಸಾಮಾನ್ಯ ಜ್ಞಾನ ಹಾಗೂ ಸ್ವಾಭಾವಿಕ ಸ್ವಭಾವಗಳ ಪರಿಚಯ ಮಾಡಿಕೊಡುವದೇ ಶೇಕ್ಸ್‌ಪೀಯರನ ಉದ್ದೇಶವಾಗಿದೆ. ಶೇಕ್ಸ್‌ಪೀಯರನ ಹಾಸ್ಯ, ವಿಡಂಬನೆಗಳು ಬಹಳ ಸೂಕ್ಷ್ಮವಾಗಿವೆ. ಹಾಗೂ ಮನಗಾಣಿಸಿಕೊಡುವಂಥವುಗಳಾಗಿವೆ. ಅವನ ಗೇಯ ನಾಟಕಗಳ ಸುಮಧುರ ಸಂಗೀತದ ಹಿನ್ನೆಲೆಯಲ್ಲಿ ಪ್ರೇಮ, ಪ್ರಣಯಗಳ ರಮ್ಯ ಹಿಮ್ಮೇಳವಿದೆಯೆಂದೇ ಅವುಗಳಿಗೆ ಒಂದು ಪರಿಪಕ್ವತೆ, ಮಾರ್ದವತೆ, ರಮ್ಯತೆಗಳು ಚಿಗುರೊಡೆದಿವೆ. ಮಾನವೀಯತೆ ಹಾಗೂ ಜೀವನ ಮೌಲ್ಯಗಳ ಉದಾತ್ತ ಧ್ಯೇಯಗಳನ್ನೇ ಲಕ್ಷ್ಯದಲ್ಲಿರಿಸಿಕೊಂಡು ಶೇಕ್ಸ್‌ಪೀಯರನು ತನ್ನ ಗೇಯ ನಾಟಕಗಳನ್ನು ರಚಿಸಿದ್ದಾನೆ.

ಸಮಕಾಲೀನ ಸಮಾಜದ ವಿರೂಪತೆಗಳನ್ನು ಕ್ರಿಯಾತ್ಮಕ ತೀಕ್ಷ್ಣ ಹಾಸ್ಯ ವಿಡಂಬನೆಗಳಿಂದ ಟೀಕಿಸಿದ್ದಾನೆ.

ಟ್ಯೂಡರ ಕಾಲದ ರಂಗಭೂಮಿ ಸಾಹಿತ್ಯ ಜನತೆಯ ಸಾಮಾಜಿಕ ರಾಜಕೀಯ ಜೀವನ, ಧಾರೆಯನ್ನೇ ಮುಂದಿಟ್ಟು ಕೊಂಡು, ಕ್ರಮವಾಗಿ ಅಳವಡಿಸಿಕೊಂಡು ಬೆಳೆದು ಬಂದಿತ್ತು. ಇದೇ ಸಂಪ್ರದಾಯವನ್ನೇ ಶೇಕ್ಸ್‌ಪೀಯರ್ ಅನುಸರಿಸಿದ್ದಾನೆ. ಏಕೆಂದರೆ ಜನತೆಗೋಸ್ಕರವಾಗಿ ಬರೆಯುವ ಉದ್ದೇಶವನ್ನೇ ಶೇಕ್ಸ್‌ಪೀಯರ್ ಹೊಂದಿದ್ದನು. ಅವನ ನಾಟಕಗಳ ರಚನೆ ಅವ್ಯಾಹತವಾಗಿ ನಡೆದಂತೆ ಅವನ ಮನಸ್ಸು ಸತ್ವ ಪ್ರಧಾನವಾದ ಮಾನಸಿಕವಾದ ನಾಟಕ ರಚನಾ ಸಂಪ್ರದಾಯದಿಂದ ಆವೃತವಾಯಿತು. ಆದರೆ ತನ್ನ ರಚನಾ ಕೌಶಲ್ಯದಿಂದ ಅಂಥ ಸಂಪ್ರದಾಯಕ್ಕೆ ತನ್ನದೇ ಆದ ಹೊಸ ರೂಪವನ್ನೇ ಆತನು ಕೊಟ್ಟಿದ್ದಾನೆ.

ರಾಜಭವನದ ವೈಭವ, ವೈಖರಿ ಕೃತ್ರಿಮ ಜೀವನವನ್ನು ಶೇಕ್ಸ್‌ಪೀಯರ್ ಮುಖ್ಯವಾಗಿ ಚಿತ್ರಿಸಲೆತ್ನಿಸಿದ್ದಾನೆ. ಮನೋರಂಜನೆ ಹಾಗೂ ಜೀವನ ಮೌಲ್ಯಗಳ ಪರಿಷ್ಕರಣ ಇವೆರಡನ್ನೂ ಏಕಕಾಲಕ್ಕೆ ಸಾಧಿಸಲು ಅವನು ತನ್ನ ಹರ್ಷ ನಾಟಕಗಳ ಮುಖಾಂತರ ಯತ್ನಿಸಿದ್ದಾನೆ. ಅವನ ಹರ್ಷ ನಾಟಕಗಳನ್ನು ನಾವು ಕೂಲಂಕಷವಾಗಿ ಪರಿಶೀಲಿಸಿದರೆ ಪ್ರಚಲಿತ ಪೂರ್ವಗ್ರಹ ಪೀಡೆಗಳಿಂದ ಹಾಗೂ ಗ್ರಹಣೀಯತೆಯಿಂದ ಅವನ

ಮನಸ್ಸು ದೂರವಾಗಿತ್ತು ಎಂಬುದರ ಕಲ್ಪನೆ ನಮಗೆ ಬಾರದಿರದು. ವಿಡಂಬನೆ, ಹಾಸ್ಯಗಳು ಅವನ ಕಾಲದ ರಂಗಭೂಮಿ ಸಾಹಿತ್ಯದಲ್ಲಿ ಹಾಸುಹೊಕ್ಕಾದ ಭಾಗಗಳು; ಅವುಗಳನ್ನು ಉಪಯೋಗಮಾಡಿಕೊಂಡಾಕ್ಷಣ ಅವನು ಪೂರ್ವಗ್ರಹಪೀಡಿತನಾಗಿದ್ದಾನೆಂದು ತಿಳಿದುಕೊಳ್ಳುವದು ಸರ್ವಥಾ ತಪ್ಪು. ವಿಡಂಬನೆ, ಹಾಸ್ಯಗಳೂ ಕೂಡ ಸಹಜವಾಗಿವೆ. ಅವು ಕೃತ್ರಿಮವಾಗಿಲ್ಲ. ಅವುಗಳ ಸಮತೋಲತೆ ಹಾಗೂ ವ್ಯಾಪ್ತಿ ಮೇರೆದಪ್ಪಿಹೋಗಿಲ್ಲ. ಸಮಾಜದ ಕೆಲವು ವಿಷಯಗಳ ಬಗೆಗೆ ತನ್ನ ಪಕ್ಷಾನುರಾಗ ವ್ಯಕ್ತಪಡಿಸಿಕೊಂಡಿಲ್ಲ. ಸಮಕಾಲೀನ ಸಮಾಜದ ವಾಸ್ತವವಾದ, ಯಥಾರ್ಥವಾದ ಚಿತ್ರವನ್ನು ಅವುಗಳ ಬಣ್ಣದಲ್ಲಿ ಅದ್ದಿ ಮನೋವೇಧಕವಾಗಿಯೂ, ಮನೋರಂಜಕವಾಗಿಯೂ ಆಗುವಂತೆ ಪೂರ್ಣ ಪ್ರತಿಬಿಂಬದಲ್ಲಿ ಅದನ್ನು ಪರಿವರ್ತಿಸಿದ್ದಾನೆ. ಮಹಾಕವಿ ಭಾಸರನು ಸಮಾಜದ ಹುಚ್ಚು ಕೃತ್ರಿಮತೆಗಳನ್ನು ಕಂಡು ನಕ್ಕು ನಲಿದು ಕೇಕೆ ಹಾಕಿ ಅವರ ಯಥಾರ್ಥಗಳನ್ನು ತಿಳಿದುಕೊಳ್ಳುವಂತೆಯೇ ಶೇಕ್ಸ್‌ಪೀಯರ್ ಕೂಡ ಅದೇ ಅನುಕೂಲಸಿಂಧು ಮಾರ್ಗವನ್ನು ಹಿಡಿದಿದ್ದಾನೆ. ಓದುಗರ ಹಾಗೂ ಪ್ರೇಕ್ಷಕರ ಮನಸೆಳೆದು ಅವರು ವಿಚಾರಪ್ರವೃತ್ತರಾಗುವಂತೆ ಮಾಡಿ, ತಮ್ಮ ಸಾಮಾನ್ಯ ಜ್ಞಾನದ ಟೀಕಿನಲ್ಲಿ ನ್ಯಾಯ ಅನ್ಯಾಯಗಳ ಪರಿಶೀಲನೆ ನಡೆಸಲು ಶೇಕ್ಸ್‌ಪೀಯರನು ಉದ್ದೇಶಿಸಿದ್ದಾನೆ. ಅದು ನಾಟಕಕಾರ ಮಾಡುವ ಕಾರ್ಯ, ಸೇವೆ. ಬೆನ್ ಜಾನ್ಸನ್‌ನಂತೆ ಪರೋಕ್ಷವಾಗಿ ಸಮಾಜದ ಭಾಷ್ಯಕಾರ,

ಟೀಕಾಕಾರನಾಗಲು ಅವನು ಯತ್ನಿಸಿಲ್ಲ. ಅವನವ ಅಪರೋಕ್ಷವಾದ ಮಾರ್ಗ. ಶೇಕ್ಸ್‌ಪಿಯರನನ್ನು ಕೆಲವು ವಿಮರ್ಶಕರು ಸಮಯಸಾಧಕನೆಂದು ಕರೆದು ಜರೆದಿದ್ದಾರೆ. ನಿಜವಾಗಿಯೂ ಅಂಥ ಟೀಕೆಗಳು ದುರದೃಷ್ಟಕರ. ನ್ಯಾಯ-ಅನ್ಯಾಯಗಳ ಪರಿಶೀಲನೆಗಾಗಿ ಜನರೆದುರು ವಿಷಯಗಳನ್ನು ಮಂಡಿಸುವವನಿಗೇ ಅವುಗಳ ಅರಿವಿಲ್ಲವೆನ್ನುವುದು ಸರಿಯಲ್ಲ. ಅವುಗಳ ಅರಿವು ಇದ್ದುದರಿಂದಲೇ ಶೇಕ್ಸ್‌ಪಿಯರ್ ಅವುಗಳನ್ನು ಕೃತೀಕರಿಸಿ, ಕ್ರಿಯೀಕರಿಸಲು ಅನುವಾಗಿದ್ದಾನೆ. ವಿವಿಧ ವಿಷಯಗಳ ಸತ್ಯಪೂರ್ಣ ವಿವೇಚನೆ ಅನುಸಂಧಾನಗಳು ಕೂಡ ಅವನ ನಾಟಕಗಳಲ್ಲಿ ಅಡಕವಾಗಿವೆ. ಅವುಗಳೇ ಶೇಕ್ಸ್‌ಪಿಯರನ ಬುದ್ಧಿಶಕ್ತಿಗೆ, ವಿಚಾರಶೀಲತೆಗೆ, ಒಲವು-ನಿಲವುಗಳಿಗೆ ಹಿಡಿಯುವ ಕನ್ನಡಿಗಳಾಗಿವೆ.

೫. ಶೇಕ್ಸಪೀಯರನ ರುದ್ರ ನಾಟಕಗಳು

ಶೇಕ್ಸಪೀಯರ್ ತನ್ನ ರುದ್ರ ನಾಟಕಗಳನ್ನು ಬರೆವಾಗ ಸೆನೇಕಾನ ರುದ್ರ ನಾಟಕಗಳನ್ನೇ ಮೊದಲು ಲಕ್ಷ್ಯದಲ್ಲಿಟ್ಟು ಕೊಂಡಿದ್ದಾನೆ. ಅವನ ಮೊದಲಿನ ರುದ್ರನಾಟಕಗಳು ಕೇವಲ ಅಸೂಯೆ, ಸೇಡು, ಕೊಲೆ, ಸುಲಿಗೆಗಳ ಕಥೆಗಳಾಗಿವೆ. ಏಕೆಂದರೆ ಅವನ ಕಾಲದ ಸಾಮಾನ್ಯ ಜನರು ಅಂಥವುಗಳನ್ನೇ ಮೆಚ್ಚುತ್ತಿದ್ದರು. ರುದ್ರಭಯಂಕರವಾದ ಅಭಿನಯ, ಕಾಳಗಗಳ ದೃಶ್ಯಗಳು ಸಾಮಾನ್ಯ ಪ್ರೇಕ್ಷಕರ ಮನಸ್ಸನ್ನು ಸೂರೆಗೊಳ್ಳುತ್ತಿದ್ದವು. ಅದೇ ವೇಳೆಗೆ "ಹ್ಯಾಮ್ಲೆಟ್"ನ ಗಹನವಾದ ವಿಚಾರಗಳೂ ಕೂಡ ವಿಚಾರವಂತರ ಮನಸ್ಸನ್ನು ಸೆಳೆಯುತ್ತಿದ್ದವು. "ಕಿಂಗ ಲಿಯರ್" ನಾಟಕದಲ್ಲಿಯಂತೂ ಶೇಕ್ಸಪೀಯರನ ರುದ್ರನಾಟಕ ಸಾಹಿತ್ಯ ರಿಣತೆಯು ಮೇರೆ ಮೀರಿವೆ. ಮಾನವನ ಪಶುತ್ವದ ಆಳ

ದಿಂದ ಆತ್ಮದ ಪರಿಶುದ್ಧತೆಯು ಶಿಖರಗಳನ್ನು ಅದು ಬಿಂಬಿಸುತ್ತದೆ. ಕ್ರಿಸ್ತಧರ್ಮದ ಮೌಲ್ಯಗಳಾದ ನಮ್ರತೆ, ಸತ್ಯ, ದಯಾ ಧರ್ಮ ತ್ಯಾಗಗಳು ಮನಸ್ಸಿನ ತುಮುಲ, ದುಗುಡಗಳಿಂದ ಹೊರಹೊಮ್ಮುತ್ತವೆ. ಭೌತಿಕ ಪ್ರಪಂಚದಲ್ಲಿ ಲೀಯರ್ ಸಾಕಷ್ಟು ಕಳೆದುಕೊಂಡಿದ್ದರೂ, ಆತ್ಮದ ಲೋಕದಲ್ಲಿ (ಪಾರಮಾರ್ಥಿಕ) ಸಾಕಷ್ಟು ಹೊಸ ಬೆಳಕು ಕಂಡ ಭಾವನೆ ನಮಗೆ ಬಾರದಿರದು. ಮಾನವ ಮನಸ್ಸಿನ ನಿಗೂಢತೆ ಹಾಗೂ ಕ್ರೂರತೆಗಳನ್ನು ಶೇಕ್ಸ್‌ಪಿಯರನು ತನ್ನ ದುರಂತ ನಾಟಕಗಳಲ್ಲಿ ಚರ್ಚಿಸಿದ್ದಾನೆ. ಮಾನವನ ದುರಂತ ಜೀವನ ಪ್ರಸಂಗಗಳ ಮೂಲಭೂತ ದೃಷ್ಟಿಯನ್ನೇ ಅವನು ಕೂಲಂಕಷವಾಗಿ ವಿವರಿಸಿದ್ದಾನೆ. ಆ ದುರಂತ ಜೀವನ ಪ್ರಸಂಗಗಳು ಸಹಜವಾಗಿಯೇ ಇವೆ. ಶೇಕ್ಸ್‌ಪಿಯರನ ದುರಂತ ಜೀವನದ ದೃಷ್ಟಿ ಬಹಳ ಗಂಭೀರ ಹಾಗೂ ಭಯಾನಕ ಭೀಭತ್ಸತೆಗಳಿಂದ ಸಮ್ಮಿಳಿತವಾಗಿದೆ. ಅವನ ದುರಂತ ನಾಟಕಗಳಲ್ಲಿ ನೀತಿಯ ಪಾಠಗಳನ್ನು ಹುಡುಕುವದು ಸುಲಭ ಸಾಧ್ಯವಲ್ಲ. ಏಕೆಂದರೆ ಅವು ಮನುಷ್ಯನ ಜೀವನಕ್ಕಿಂತಲೂ ಹೆಚ್ಚಾಗಿ ವಿಶ್ವದ ಮೂಲಭೂತ ಶಕ್ತಿಗಳ ವಿಷಯವಾಗಿ ಹಾಗೂ ವಿಶ್ವದ ದುರಂತ ದೃಷ್ಟಿಯ ಬಗೆಗೆ ವಿವರಣೆಯನ್ನು ನೀಡಿವೆ. ಶೇಕ್ಸ್‌ಪಿಯರನ ನಾಟಕಗಳಲ್ಲಿ ಮನುಷ್ಯ ಸ್ವಭಾವವೇ ಅವನ ವಿಧಿಯನ್ನು ನಿರ್ಧರಿಸುತ್ತದೆ, ಎಂಬ ಉಕ್ತಿಯನ್ನು ಮುಖ್ಯವಾಗಿ ಬ್ರ್ಯಾಡ್ಲೇಯವರು ಹೇಳಿದಾರೇನೋ ನಿಜ. ಇದಕ್ಕೆ ವ್ಯತಿರಿಕ್ತವಾಗಿ ರ್‍ಯಾಲೇಯವರು ಮೇಲಿನ ಹೇಳಿಕೆ

ಯನ್ನು ಅಲ್ಲಗಳೆದಿದ್ದಾರೆ. ಶೇಕ್ಸ್‌ಪಿಯರನು ತನ್ನ ದುರಂತ ನಾಟಕಗಳನ್ನು ಸಾಹಿತ್ಯದ ಯಾವದೇ ಕಾಯಿದೆ ಕಟ್ಟಳೆಗಳಿಗನುಗುಣವಾಗಿ ಬರೆದಿಲ್ಲ. ಕೂಲಂಕಷವಾಗಿ ಪರಿಶೀಲಿಸಿದರೆ ನಮಗೆ ವಿದಿತವಾಗುವ ವಿಷಯವೇ ಬೇರೆ. ಮನುಷ್ಯ ಸ್ವಭಾವ ಮಾತ್ರವೇ ಅವನ ಹಣೆಬರಹವನ್ನು ನಿರ್ಧರಿಸುವದಿಲ್ಲ. ಅದಕ್ಕೂ ಒಂದು ಮಿತಿ ಇದೆ. ಈ ಮನುಷ್ಯ ಸ್ವಭಾವದ ಜೊತೆಗೇ ನಿಗೂಢವಾದ ನಿಸರ್ಗದ ಶಕ್ತಿ ಭವಿಷ್ಯವನ್ನು ನಿರ್ಧರಿಸುತ್ತವೆ ಎಂಬುದನ್ನು ಉದಾಹರಣೆಯಾಗಿ ಶೇಕ್ಸ್‌ಪಿಯರ್ ತನ್ನ ದುರಂತ ನಾಟಕಗಳಲ್ಲಿ ಹೇಳಿದ್ದಾನೆ. ಹ್ಯಾಮ್ಲೆಟ್‌ನ ದುರಂತ ಮರಣ, ಅದರಂತೆ, ಲೀಯರ್ ರಾಜನ ರುದ್ರ ಭೀಕರ ಕೊನೆ, ಮುಂತಾದವುಗಳು ಉದಾಹರಣೆಗಳು. ಒಳ್ಳೆಯದು ಜಯಿಸುತ್ತದೆ; ಕೆಟ್ಟದ್ದು ಸೋಲುತ್ತದೆ ಎಂಬ ಹಳೆಯ ಸಂಪ್ರದಾಯದ ವಿಷಯವನ್ನು ನಾವು ಅವನ ದುರಂತ ನಾಟಕಗಳಲ್ಲಿ ಕಾಣಲಾರೆವು. ನಿರಾಶಾವಾದಕ್ಕೆ ಅವನ ದುರಂತ ನಾಟಕಗಳಲ್ಲಿ ಸ್ಥಳವಿಲ್ಲ. ದೈವದ ಎದುರಿಗೆ ಮಾನವ ಕೇವಲ ಹುಲ್ಲುಕಡ್ಡಿಯಾಗಿಲ್ಲ. ಆದರೆ ಅದರ ಪ್ರವಾಹದ ವಿರುದ್ಧವಾಗಿ ಈಸಬಲ್ಲ ಎಂಬ ಕಲ್ಪನೆ ನಮಗೆ ಬಾರದಿರದು. ದುಃಖ, ಮರಣ, ಕಷ್ಟಗಳ ಸರಿಯಾದ ಮೌಲೀಕರಣವನ್ನು ಶೇಕ್ಸ್‌ಪಿಯರ್ ತನ್ನ ದುರಂತ ನಾಟಕಗಳ ಮುಖಾಂತರ ಮಾಡಿಕೊಟ್ಟಿದ್ದಾನೆ. ಜ್ಯೂಲಿಯಸ್ ಸೀಝರ್, ಹ್ಯಾಮ್ಲೆಟ್, ಅಂಟೋನಿ ಮತ್ತು ಕ್ಲಿಯೋಪಾತ್ರ ಈ ದುರಂತ ನಾಟಕಗಳು ಮನುಷ್ಯನ

ಮನಸ್ಸಿನ ಲೋಕಕ್ಕೆ ಸಂಬಂಧಿಸಿದವುಗಳು. ಆದ್ದರಿಂದ ಅವುಗಳು ಮನಶ್ಶಾಸ್ತ್ರ ರೀತ್ಯ ಬರೆದ ದುರಂತ ನಾಟಕಗಳು. ಎರಡನೇ ಗುಂಪಿಗೆ ಸೇರಿದ ದುರಂತ ನಾಟಕಗಳೆಂದರೆ ಮ್ಯಾಕಬೆಥ್, ಲೀಯರ್ ಹಾಗೂ ಒಥೆಲೋ. ಮನುಷ್ಯನ ಸ್ವಭಾವವನ್ನು ಬಿಟ್ಟು ಅವನ ಸುತ್ತ-ಮುತ್ತಲಿನ ಪರಿಸರ, ಅವನಿಗಿಂತಲೂ ಮಿಗಿಲಾದ ವಿಶ್ವವ್ಯಾಪಿ ವಸ್ತುಗಳು, ದುರಂತದ ಮೂಲಗಳ ಬಗೆಗೆ ವಿಶೇಷವಾಗಿ ಶೇಕ್ಸ್‌ಪೀಯರ್ ತನ್ನ ದುರಂತ ನಾಟಕಗಳಲ್ಲಿ ಚರ್ಚಿಸಿದ್ದಾನೆ. ದುರಂತ ಜೀವನದಲ್ಲಿ ಬುದ್ಧಿಯಾಗಿ ಆತ್ಮೋದ್ಧಾರವನ್ನು ಪಡೆದು ಈ ದುರಂತ ಜೀವನದಿಂದ ಜೀವನ ಮುಕ್ತಿಯನ್ನು ಹೊಂದುತ್ತ-ನೆಂಬುದೇ ಶೇಕ್ಸ್‌ಪೀಯರನ ದುರಂತ ನಾಟಕಗಳ ಮುಖ್ಯ ತಾತ್ಪರ್ಯ.

ಲೌಕಿಕ ಹಾಗೂ ಪಾರಮಾರ್ಥಿಕ ಜಗತ್ತುಗಳ ವಿರಧೀಕರಣ ಅವುಗಳ ನಡುವಿನ ಸೇತುಬಂಧಗಳ ವಿವರಣೆಗಳು ದುರಂತ ನಾಟಕಗಳಲ್ಲಿ ಕಂಡು ಬರುವ ಮುಖ್ಯ ವೈಶಿಷ್ಟ್ಯಗಳು. ಶೇಕ್ಸ್‌ಪೀಯರ್ ಗ್ರೀಕ ತತ್ವಜ್ಞಾನಿ, ವಿಮರ್ಶಕ ಅರಿಸ್ಟಾಟಲನ ದುರಂತ ನಾಟಕದ ಪಾತ್ಯೈಯನ್ನೇನೂ ಅಕ್ಷರಶಃ ಪಾಲಿಸಲಿಲ್ಲ. ಆದರೆ ಅವನ ದುರಂತ ನಾಟಕಗಳು ಮನುಷ್ಯ ಸ್ವಭಾವಕ್ಕೆ ಹಿಡಿದ ಕನ್ನಡಿಗಳು. ಮಾನವನ ಜೀವನದಲ್ಲಿ ಸುಖ ದುಃಖಗಳೆಷ್ಟು ಸಹಜವೋ ಅದೇ ರೀತಿ ಅವನ ದುರಂತ ನಾಟಕಗಳು ಕೂಡ ಅಷ್ಟೇ ಸಹಜವಾದವುಗಳಾಗಿವೆ. ಅವನು ಸಾಕಷ್ಟು ದುರಂತ ನಾಟಕಗಳನ್ನು ಬರೆದಿರುವನಾದರೂ ಕೂಡ,

ಹ್ಯಾಮ್ಲೆಟ್, ಒಥೆಲೋ, ಲೀಯರ್ ಈ ನಾಲ್ಕು ದುರಂತ ನಾಟಕಗಳು ಅವನ ಕಲಾನೈಪುಣ್ಯದ ಆಳವಾದ ಜ್ಞಾನದ ಸಂಕೇತವಾಗಿವೆ. ಅವನ ದುರಂತ ನಾಟಕಗಳ ವಿಷಯವಾಗಿ ಎಷ್ಟು ಚರ್ಚಿಸಿದರೂ ಕಡಿಮೆಯೇ. ಮುಖ್ಯವಾಗಿ ಮನುಷ್ಯ ಸ್ವಭಾವದ ಪರಸ್ಪರ ವಿರೋಧವಾದ ಎರಡು ಮುಖಗಳಾದ ಒಳ್ಳೆಯದು, ಕೆಟ್ಟದ್ದು ಇವುಗಳ ಘರ್ಷಣೆ ಅವನ ದುರಂತ ನಾಟಕಗಳ ಅಡಿಪಾಯ. ಈ ಘರ್ಷಣೆ ಎರಡು ಪ್ರಕಾರದ್ದಾಗಿದೆ. ಆಂತರಿಕ ಹಾಗೂ ಬಹಿರಂಗ, ಎರಡು ಪರಸ್ಪರ ವಿರೋಧಿ ಜನರ ಗುಂಪುಗಳ ಅಥವಾ ವ್ಯಕ್ತಿಗಳ ಘರ್ಷಣೆ ಬಹಿರಂಗದ್ದು. ವ್ಯಕ್ತಿಯ ಮನಸ್ಸಿನಲ್ಲಿ ನಡೆಯುವ ಪರಸ್ಪರ ಎರಡು ವಿರೋಧಿ ವಿಚಾರ, ಧ್ಯೇಯಗಳ ತುಮುಲ ಅಂತರಂಗದ ಘರ್ಷಣೆ. ಈ ಘರ್ಷಣೆಗಳಿಂದಲೇ ಅವನ ದುರಂತ ನಾಟಕಗಳಿಗೆ ಗಂಭೀರತೆ, ರೌದ್ರ ಕಾವ್ಯ ಸೌಂದರ್ಯಗಳು ಉಂಟಾಗಿವೆ. ಮಧ್ಯಕಾಲೀನ ಯುಗದ ದುರಂತ ನಾಟಕಗಳಂತೆ ಶೇಕ್ಸ್‌ಪಿಯರ್ ತನ್ನ ನಾಟಕಗಳಲ್ಲಿ ಕೀಳ-ದರ್ಜೆಯ ಬೀಭತ್ಸ, ಕೊಲೆ, ಸುಲಿಗೆ, ಸೇಡಿನ ರುದ್ರ ಭಯಂಕರ ಕಥಾವಸ್ತುವನ್ನು ಉಪಯೋಗಿಸಲಿಲ್ಲ. ಅವುಗಳನ್ನು ಉಪಯೋಗಿಸಿದರೂ ಕೂಡ ಅವುಗಳಿಗೆ ಹೊಸದಾದ ಒಂದು ರೂಪವನ್ನೇ ಕೊಟ್ಟಿದ್ದಾನೆ. ಥಾಮಸ್ ಹಾರ್ಡಿ ಅವನ ಕಲ್ಪನೆಯ ದೈವವನ್ನು ಶೇಕ್ಸ್‌ಪಿಯರನ ನಾಟಕಗಳಲ್ಲಿ ನಾವು ಕಾಣಲಾರೆವು. ಅದು ಅವನ ರುದ್ರ ನಾಟಕಗಳಲ್ಲಿ ನಿರಂಕುಶವಾಗಿಲ್ಲ. ಮನುಷ್ಯ

ಸ್ವಭಾವ ಹಾಗೂ ಅದೃಷ್ಟಗಳು ಒಂದಕ್ಕೊಂದು ಪೂರಕವಾಗಿವೆ. "ಮ್ಯಾಕಬೆಥ್" ಹಾಗೂ "ಹ್ಯಾಮ್ಲೆಟ್"ಗಳಲ್ಲಿ ಕಂಡುಬರುವ ಭೂತ ಚೇಷ್ಟೆಯ ದೃಶ್ಯಗಳು, ಅದರಂತೆ "ಮ್ಯಾಕಬೆಥ್" ದಲ್ಲಿಯ ಮಾಟಗಾತಿ, ಕಣಿ ಹೇಳುವ ಹೆಂಗಳೆಯರು ಇವೆಲ್ಲವೂ ಅವನ ಸಾಮಾಜಿಕ ಪರಿಸರಕ್ಕೆ ಪೂರಕವಾಗಿ ಹೊಂದಿಕೊಂಡೇ ಇವೆ. ಆಗಿನ ಕಾಲದ ಜನರಿಗೆ ಭೂತ, ಮಾಟಗಳಲ್ಲಿ ನಂಬುಗೆ ಇದ್ದಿತು ಎಂಬುವನ್ನು ಶೇಕ್ಸ್ಪಿಯರ್ ತೋರಿಸಿ ಕೊಟ್ಟಿದ್ದಾನೆ.

ಮಾರ್ಲೋ ಹಾಗೂ ಥಾಮಸ್ ಕಿಡ್ ಇವರ ಜಾಡಿನಲ್ಲೇ ತನ್ನ ನಾಟಕಗಳನ್ನು ಬರೆಯುವದನ್ನು ಪ್ರಾರಂಭ ಮಾಡಿದ ಶೇಕ್ಸ್ಪಿಯರ್ ತನ್ನದೇ ವೈಶಿಷ್ಟ್ಯವುಳ್ಳ ದುರಂತ ನಾಟಕಗಳನ್ನು ಹಂತಹಂತವಾಗಿ ಬರೆದಿದ್ದಾನೆ. ಸೇಡು, ದ್ವೇಷದ ದುರಂತ ನಾಟಕಗಳಿಂದ ವಿಚಾರ ಪರಿಪ್ಲುತವಾದ ರುದ್ರ ರಮ್ಯ ನಾಟಕಗಳನ್ನು ಬರೆಯುವವರೊಂದಿಗೆ ಶೇಕ್ಸ್ಪಿಯರ್ ತನ್ನ ಸ್ವಸಾಮರ್ಥ್ಯ ಹಾಗೂ ಕಲೆಯ ಹೊಸ ಹಾದಿಯನ್ನು ತೋರಿಸಿದ್ದಾನೆ. "ಒಥೆಲೋ," "ಹ್ಯಾಮ್ಲೆಟ್" ಗಳಂತೂ ಎಲಿಝಾಬೆಥ್ ಸಂಪ್ರದಾಯದ ರುದ್ರ ನಾಟಕಗಳಿಂದ ಬಹಳ ಭಿನ್ನವಾಗಿವೆ. ಅವುಗಳಿಗೆ ತಮ್ಮದೇ ಆದ ಸ್ವತಂತ್ರತೆ ಇದೆ. ಮಾನವನ ಪರಸ್ಪರ ಸಂಬಂಧಗಳ ಅತಿರೇಕಗಳ ಅಲೋಚನೆಗಳನ್ನು, ಅವುಗಳ ತಾತ್ವಿಕ ಮೂಲ ಸೂತ್ರಗಳ ವಿಶ್ಲೇಷಣೆಯನ್ನು ಅವನ ದುರಂತ ನಾಟಕಗಳಲ್ಲಿ

ನಾವು ಕಂಡು ಹಿಡಿಯ ಬಹುದಾಗಿದೆ. ಅವನು ಹೇಳುವ ಒಂದು ಮಾತು ಅತಿ ಮುಖ್ಯವಾದದ್ದು ಹಾಗೂ ಗಮನ ಸೆಳೆಯುವಂಥಾದ್ದು. ದೇವರ ದಯೆ ಅದೃಷ್ಟದ ಮುಖಾಂತರ ಹಾಗೂ ಮಾನವ ಸ್ವಭಾವದ ಮೂಲಕ ಮನುಷ್ಯ ಲೋಕದ ಮೇಲೆ ಪರಿಣಾಮವನ್ನುಂಟು ಮಾಡಿ ಮಾನವ ಲೋಕ ತನ್ನ ಗುರಿಯನ್ನು ತಲುಪಲು ಸಹಾಯ ಮಾಡುತ್ತದೆ ಎಂದು ಶೇಕ್ಸ್‌ಪಿಯರ ಹೇಳಿದ್ದಾನೆ. ಅವನ ಈ ಅಭಿಪ್ರಾಯಗಳನ್ನು ಭಾಗಶಃ ಸಹಜ ಜೀವನದೊಂದಿಗೆ ಜೋಡಿಸಿ ನೋಡಿದಾಗ ಅವುಗಳಲ್ಲಿ ಸತ್ಯತೆ ಕಾಣದಿರದು. ದೇವರ ದಯೆ ಮನುಷ್ಯನನ್ನು ಸುಖದೆಡೆಗೂ, ದುಃಖದೆಡೆಗೂ ಸೆಳೆದೊಯ್ಯ ಬಹುದಾಗಿದೆ. ಅದಕ್ಕೆ ಮನುಷ್ಯ ಸ್ವಭಾವ ಪೂರಕವಾಗುತ್ತದೆ. ಶೇಕ್ಸ್‌ಪಿಯರನು ಬರೆದ ರುದ್ರ ನಾಟಕಗಳು ಯಾವದೇ ಒಂದು ನಿರ್ದಿಷ್ಟ ಅವಧಿಗೆ ಸಂಬಂಧಪಟ್ಟವುಗಳಾಗಿಲ್ಲ. ಅವುಗಳು ಅವನ ಇಡೀ ಜೀವನ ಯಾತ್ರೆಯ ಉದ್ದಕ್ಕೂ ಬರೆದಂಥವುಗಳಾಗಿವೆ. ಇದೇ ವೇಳೆಗೆ ಜೀವನದ ಬಗೆಗಿನ ಅವನ ದೃಷ್ಟಿಕೋನವು ವಿಶಾಲವೂ, ಆಳವಾಗಿಯೂ ಬೆಳವಣಿಗೆ ಹೊಂದುತ್ತ ಹೋಗಿದೆ. ಅವನ ಪ್ರತಿಯೊಂದು ದುರಂತ ನಾಟಕವೂ ವಿಶಿಷ್ಟವಾದ ಭಿನ್ನವರ್ತಿತ್ವವನ್ನು ತೋರಿಸುತ್ತದೆ. ಅವನ ರುದ್ರ ನಾಟಕಗಳ ಇನ್ನೊಂದು ವೈಶಿಷ್ಟ್ಯವೆಂದರೆ ವಿವಿಧ ಮುಖಗಳ ಜ್ಞಾನವುಳ್ಳ ಪ್ರೇಕ್ಷಕರ ಅಥವಾ ಓದುಗರ ಮನ್ನಸನ್ನು ಸೆರೆಹಿಡಿಯುವದು. ಉದಾಹರಣಾರ್ಥವಾಗಿ - ಕೊಲೆ ಸುಲಿಗೆಗಳ ವಿಷಯವಾಗಿ ಚರ್ಚಿಸುವವರು ಹ್ಯಾಮ್ಲೆಟ್, ಮ್ಯಾಕಬೆಥ್ ನಾಟಕಗಳನ್ನು ಆ ದೃಷ್ಟಿಯಿಂದಲೇ ನೋಡು

ವರು. ಅದರಂತೆ ವಿಮರ್ಶಾತ್ಮಕ ದೃಷ್ಟಿಯುಳ್ಳವರು ಅವು
ಗಳನ್ನು ಮನುಷ್ಯ ಸ್ವಭಾವದ ತೀಕ್ಷ್ಣವಾದ ವಿಂಗಡಣೆಯೆಂದು
ತಿಳಿಯುವರು. ಇನ್ನೂ ಅನೇಕ ದೃಷ್ಟಿಕೋನಗಳುಳ್ಳವರು
ತಮ್ಮಂತೆಯೇ ಈ ಶೇಕ್ಸಪೀಯರನ ನಾಟಕಗಳನ್ನು
ಅಭ್ಯಸಿಸುವರು. ಅವನ ರುದ್ರ ನಾಟಕಗಳಲ್ಲಿ ಕೆಲವು
ಮುಖ್ಯವಾದ ವೈಶಿಷ್ಟ್ಯಗಳಿಂದ ಕೂಡಿದವುಗಳಾಗಿವೆ.
"ಹ್ಯಾಮ್ಲೆಟ್"ನಲ್ಲಿ ಅವನು ಮನುಷ್ಯನ ನಡತೆ, ವಿಚಾರಶೀಲ
ಮನಸ್ಸು, ಭಾವನೆಗಳ ವಿಷಯವಾಗಿ ಪರಿಶೋಧನೆ ನಡೆಸಿದ್ದಾನೆ.
"ಒಥೆಲೋ" ದುರಂತ ನಾಟಕವು ವಿಶೇಷವಾದ ಭಾವ ತರಂಗ-
ಗಳಿಂದ ಕೂಡಿದೆ. "ಲೀಯರ" ರುದ್ರ ನಾಟಕಗಳಲ್ಲೇ ದುರಂತ
ಕಾವ್ಯ ನಾಟಕವಾಗಿದೆ. ಮ್ಯಾಕಬೆಥ್‌ದಲ್ಲಿ ನಾವು ಕಾಣುವದು
ಮಾನವ ಮನಸ್ಸಿನ ವಿಧ ವಿಧವಾದ ವ್ಯಾಪಾರ. "ಅಂತೋನಿ
ಕ್ಲಿಯೋಪಾತ್ರ"ದಲ್ಲಿ ಶೇಕ್ಸಪೀಯರ ಪ್ರಣಯಕ್ಕೆ ಹಾಗೂ
ಮೆಚ್ಚಿಗೆ ಬಹಳ ಮಹತ್ವ ಕೊಟ್ಟಿದ್ದಾನೆ. ರಾಜಕಾರಣ
ಪ್ರಣಯಗಳ ಘರ್ಷಣೆಯೇ ಅವರ ಮುಖ್ಯ ಕಥಾವಸ್ತು
ಅವೆರಡೂ ವಾಸ್ತವಿಕ ಪ್ರಮಾಣಕ್ಕೆ ಮೀರಿದ ಕಲ್ಪನೆಗಳಾಗಿವೆ.
"ಕೋರಿಯೋಲನಸ್" ನಾಟಕದಲ್ಲಿ ಕಥಾವಸ್ತು ರಾಜಕಾರಣ
ವಾಗಿದೆ. ಮತ್ತು ಅದರ ಪ್ರತಿಪಾದನೆಯೂ ಕೂಡ ಬಹಳೇ
ಕಠೋರವಾಗಿದೆ. ಜ್ಯೂಲಿಯಸ್ ಸೀಝರ್ ನಾಟಕವು ರಾಜ
ಕೀಯ ವಾಸ್ತವಿಕತೆಗೆ ಸಂಬಂಧಿಸಿದ್ದಾಗಿದೆ. ಹದಿನಾರನೆಯ
ಶತಮಾನದ ಕಲೆ ಮತ್ತು ವಿದ್ಯೆಯ ಪುನರುಜ್ಜೀವನ ಹಾಗೂ
ಮಾನವೀಯತೆ ಇವ ನೋಟಗಳ ಪ್ರತಿಬಿಂಬಗಳನ್ನು ಮುಖ್ಯ

ವಾಗಿ "ಹ್ಯಾಮ್ಲೆಟ್" ನಾಟಕದಲ್ಲಿ ಕಾಣಬಹುದಾಗಿದೆ. ರುದ್ರ ನಾಟಕಗಳಲ್ಲಿ ಕಂಡು ಬರುವ "ಸ್ವಗತ ವಾಕ್ಯಗಳು" ಶೇಕ್ಸ್‌ಪೀಯರನ ಹೊಸ ಸಂಶೋಧನೆ, ಪಾತ್ರ ಪರಿಚಯವನ್ನು ಸ್ಥೂಲವಾಗಿ ಪರಿಚಯ ಮಾಡಿಕೊಡುವದು ಅಲ್ಲದೇ ಆಯಾ ಪಾತ್ರಗಳ ಧ್ಯೇಯ ಧೋರಣೆಗಳನ್ನು ಪ್ರಕಟ ಪಡಿಸುವ ಸಾಧನಗಳಂತೆ ಅವನ್ನು ಶೇಕ್ಸ್‌ಪೀಯರ್ ಉಪಯೋಗಿಸಿದ್ದಾನೆ. ಪ್ರೇಮ, ಗೌರವ, ದಯೆ, ಪಶ್ಚಾತ್ತಾಪ, ನ್ಯಾಯ, ಆತ್ಮದ ಪರಿಶುದ್ಧತೆ ಹಾಗೂ ಪುನರುತ್ಥಾನಗಳ ಸಿಂಧುತ್ವವನ್ನು ವಿಶ್ಲೇಷಿಸುವದೂ ಕೂಡ ಈ ರುದ್ರ ನಾಟಕಗಳ ಮತ್ತೊಂದು ಧ್ಯೇಯ. ಇದೂ ಅಲ್ಲದೇ ಶೇಕ್ಸ್‌ಪೀಯರನ ಭಾವ ಸಂವೇದಿತ್ವವನ್ನೂ ಅವನಿಗಿದ್ದ ಮಾನವ ಭಾವನೆಗಳ ಒಳನೋಟವನ್ನೂ ಕೂಡ ಈ ದುರಂತ ನಾಟಕಗಳು ಸರಿಯಾಗಿ ತೋರಿಸುತ್ತವೆ. ದುರಂತ ನಾಟಕಗಳ ಕಥಾವಸ್ತುಗಳು ವಿಶ್ವ ಜೀವನದ ಸರ್ವತೋಮುಖತ್ವವನ್ನು ಅಪರಿಹಾರತ್ವವನ್ನು ಘಂಟಾಘೋಷವಾಗಿ ಸಾರುತ್ತವೆ. ಅವುಗಳ ಲೋಕಮಾನ್ಯತೆ ಜನಪ್ರಿಯತೆಗಳಿಗೆ ಮೇಲೆ ಸೂಚಿಸಿದ ಎರಡು ಗುಣಗಳೇ ನಿಜವಾದ ಬರಗ್ಲುಗಳಾಗಿವೆ. ಕೊನೆಯದಾದ ನಿಸರ್ಗದ ಅದೃಷ್ಟ ಶಕ್ತಿ ನ್ಯಾಯವಾದದ್ದು ಹಾಗೂ ನೈತಿಕವಾದದ್ದೆಂದು ಶೇಕ್ಸ್‌ಪೀಯರ್ ತನ್ನ ದುರಂತ ನಾಟಕಗಳಲ್ಲಿ ಹೇಳಿದ್ದಾನೆ. ಹರ್ಷ ನಾಟಗಳಿಂದ ಮಾನವನಿಗೆಷ್ಟು ಸಂತಸವಾಗುವದೋ ಅಷ್ಟೇ ಸಂತೋಷ ರುದ್ರ ನಾಟಕಗಳನ್ನು ವೀಕ್ಷಿಸುವದರಿಂದ ಉಂಟಾಗುತ್ತದೆ. ಈ ದೃಷ್ಟಿಯಲ್ಲಿ ಶೇಕ್ಸಪೀಯರನ ರುದ್ರ

ನಾಟಕಗಳು ಹೃದಯವನ್ನೂ ಭೇದಿಸುವಂಥವುಗಳಾಗಿವೆ. ಕರುಣೆ, ಭಯದ ಭಾವನೆಗಳನ್ನು ಸುಲಭವಾಗಿ ಉದ್ದೀಪನೆ ಮಾಡುತ್ತವೆ. ಹಾಗೂ ಅವುಗಳನ್ನು ಶುದ್ಧೀಕರಿಸುತ್ತವೆ. ಮಾನಸಿಕ ಅಸ್ವಾಸ್ಥ್ಯ, ಮಾನವನ ವೈಪರೀತ್ಯ ನಡತೆಗಳೂ ಕೂಡ ಮನುಷ್ಯನ ದುರಂತ ಜೀವನ ಮರಣಕ್ಕೆ ಕಾರಣವಾಗಬಹುದೆಂದು ಶೇಕ್ಸ್‌ಪಿಯರ್ ಉದಾಹರಣದ ಮುಖಾಂತರ ತೋರಿಸಿಕೊಟ್ಟಿದ್ದಾನೆ. ಅವನ ದುರಂತ ನಾಟಕಗಳ ನಾಯಕರು ಜೀವನದ ಉನ್ನತ ಮಟ್ಟದಲ್ಲಿದ್ದವರು. ಉದಾಹರಣಾರ್ಥವಾಗಿ ಸೇನಾಧಿಪತಿ, ರಾಜ, ಚಕ್ರವರ್ತಿ, ರಾಣಿ ಹಾಗೂ ಇವರಿಗೆ ಸಂಬಂಧಪಟ್ಟ ಜನರು. ಇಂಥವರ ದುರಂತ ಮರಣ ಇಡೀ ದೇಶಕ್ಕೆ ಪರಿಣಾಮವನ್ನುಂಟು ಮಾಡುತ್ತವೆ ಎಂಬುದನ್ನೂ ಕೂಡ ಶೇಕ್ಸ್‌ಪಿಯರ್ ತೋರಿಸಿದ್ದಾನೆ. ಇವೆಲ್ಲವುಗಳನ್ನೂ ಅವಲೋಕಿಸಿದಾಗ ನೈಸರ್ಗಿಕ, ದೈವಿಕ, ಮಾನವೀಯ ಶಕ್ತಿಗಳು ಮಾನವನ ದುರಂತ ಮರಣಕ್ಕೆ ಕಾರಣವಾಗುತ್ತವೆಂದು ಅವನು ತನ್ನ ದುರಂತ ನಾಟಕಗಳ ಮೂಲಕ ತೋರಿಸಿದ್ದಾನೆ. ಇನ್ನೂ ಒಂದು ಸಂಗತಿಯೆಂದರೆ ಈ ವಿಶ್ವದ ಬಗೆಯು ಮಾನವನ ದುರಂತ ಮರಣಕ್ಕೆ ಸಂಬಂಧಿಸಿದಂತೆ ಬಿಡಿಸಲಾರದ್ದಾಗಿದೆ. ಮಾನವನ ವಿಧಿಯು ಜಾಲದಲ್ಲಿ ರಹಸ್ಯವೂ ಒಂದು ಮುಖ್ಯವಾದ ಸೂತ್ರವಾಗಿದೆ. ಈ ಎಲ್ಲ ವಿಷಯಗಳ ಕಲ್ಪನೆ ಅವನ ದುರಂತ ನಾಟಕಗಳನ್ನು ಅರ್ಥೈಸುವದರಿಂದ ಉಂಟಾಗುವದು. ಮಧ್ಯಯುಗ ಸಂಪ್ರದಾಯದ ದುರಂತ ನಾಟಕಗಳ ಕಲ್ಪನೆಯಿಂದ

ಮಾನಸಿಕ, ಶೃಂಗಾರಿಕ ದುರಂತ ನಾಟಕಗಳ ಸೃಷ್ಟಿಯ ವರೆಗೆ ಷೇಕ್ಸ್‌ಪಿಯರನ ರುದ್ರ ನಾಟಕಗಳ ಕತೃತ್ವ ಶಕ್ತಿ ವಿಶಾಲವಾಗಿ ಬೆಳೆಯುತ್ತ ಹೋಗಿದೆ.

ಈ ದುರಂತ ನಾಟಕಗಳಲ್ಲಿಯ ದುರಂತ ದೃಶ್ಯಗಳು ಹಾಗೂ ದುರುಳ ಪಾತ್ರಗಳನ್ನು ನಾಟಕಕಾರನೇ ಪೂರ್ವಗ್ರಹ ಪೀಡಿತನಾಗಿ ಬರೆದನೆಂದು ಹೇಳುವಷ್ಟು ಅಸಾಧ್ಯವಾಗಿದೆ ಅವುಗಳ ವಿನ್ಯಾಸ ಹಾಗೂ ನಿರೂಪಣೆ. ಅದರಂತೆಯೇ ದುರಂತ ನಾಯಕರ ಕಾರ್ಯಶೀಲತೆ ಪೂರ್ವಗ್ರಹ ಪೀಡಿತವಾಗಿಲ್ಲ. ಅಲ್ಲದೇ ನಾಟಕಕಾರನಿಂದ ಪೂರ್ವ ನಿಯೋಜಿತವಾಗಿಯೂ ಇಲ್ಲ. ಅವುಗಳಲ್ಲಿಯ ಪಾತ್ರಗಳ ಘಟನಾವಳಿಗಳು ಸ್ವತಂತ್ರವಾಗಿಯೂ, ಸಹಜವಾಗಿಯೂ ತಮ್ಮಷ್ಟಕ್ಕೆ ತಾವೇ ಹೊರ ಹೊಮ್ಮುತ್ತವೆ. ಷೇಕ್ಸ್‌ಪಿಯರ್ ದುರಂತ ಜೀವನದ ದೃಷ್ಟಿಕೋನದಿಂದ ಮಾನವನ ಹಾಗೂ ವಿಶ್ವದ ಜೀವನ ಮೌಲ್ಯಗಳನ್ನು ಪ್ರಕೃತಿ ಸಹಜವಾಗಿ ನಿವೇದಿಸುತ್ತಾನೆ. ಮಾನವ ಸಹಜ ತಾಮಸ ಗುಣಗಳು ಮನುಷ್ಯನಲ್ಲಿ ಹುಟ್ಟಿ ಬೆಳೆದು ದುರಂತವಾಗಿ ವಿಶ್ವರೂಪೀ ಶಕ್ತಿಯಲ್ಲೇ ಲೀನವಾಗುತ್ತವೆಂದು ನಾಟಕಕಾರ ಈ ದುರಂತ ಕಥಾನಕಗಳ ಮೂಲಕ ಹೇಳುತ್ತಾನೆ. ಈ ನಾಟಕಗಳಿಂದ ನಮಗೆ ನಿರಾಶೆಯಾಗುವದಿಲ್ಲ ಏಕೆಂದರೆ ವಿಶ್ವ ಶಕ್ತಿಯ ರಹಸ್ಯವು ನಮ್ಮ ಮನಃಪಟಲದ ಮೇಲೆ ಬಂದು ಜಾಲ ಹಾಕುತ್ತದೆ. ಈ ವಿಶ್ವಶಕ್ತಿಯು ಎದುರಿನಲ್ಲಿ ಮಾನವನ ಅಸಹಾಯಕತೆ ಹಾಗೂ ಭೌತಿಕ ಜೀವನದ

ನಿರುಪಯುಕ್ತತೆಗಳನ್ನು ನಾಟಕಕಾರ ನಮಗೆ ನಿವೇದಿಸಿದ್ದಾನೆ. ಅವನು ಬರೆದ "ಕೊರಿಯೋಲಿನಸ್" ನಾಟಕವು ರಾಜಕೀಯಕ್ಕೆ ಸಂಬಂಧಿಸಿದ್ದು. ನಾಟಕಕಾರ ತನ್ನ ಕಾಲದಲ್ಲಿ ಜರುಗಿದ ಶ್ರೀಮಂತ ಬಡವರ ವರ್ಗಕಲಹವನ್ನು ಸೂಚ್ಯವಾಗಿ ಇಲ್ಲಿ ತಿಳಿಸಿದ್ದಾನೆ. ಮತ್ತೊಂದು ಐತಿಹಾಸಿಕ ದುರಂತ ನಾಟಕ "ಟೈಟಸ್ ಅಂಡ್ರೋನಿಕಸ್" ಇದು ಶೇಕ್ಸ್‌ಪಿಯರನ ಕಾಲದಲ್ಲಿ ಸಂಭವಿಸಿದ ಚಕ್ರವರ್ತಿ ಪಟ್ಟದ ವಾರಸುದಾರಿಕೆಯ ಗೃಹ ಕಲಹಕ್ಕೆ ಸೂಚ್ಯವಾಗಿ ಸಂಬಂಧಪಟ್ಟದ್ದು. ರೋಮಿನ ಸರ್ವಾಧಿಕಾರಿ ಕೋರಿಯೋಲನಸ್‌ನ ಆಳಿಕೆಗೂ ಟೂಡರರ ಆಳಿಕೆಗೂ ಸಾಕಷ್ಟು ಸಾಮ್ಯವನ್ನು ನಾವು ಕಾಣುತ್ತೇವೆ.

೬. ಶೇಕ್ಸ್‌ಪಿಯರನ ಐತಿಹಾಸಿಕ ನಾಟಕಗಳು

ಶೇಕ್ಸ್‌ಪಿಯರನ ಐತಿಹಾಸಿಕ ನಾಟಕಗಳನ್ನು ನಾವು ಕೂಲಂಕಷವಾಗಿ ಅವಲೋಕಿಸಿದಾಗ ನಮಗೆ ಕಂಡು ಬರುವ ವಿಷಯವೆಂದರೆ–ಅವುಗಳ ರಾಷ್ಟ್ರೀಯ ಹಾಗೂ ರಾಜಕೀಯ ಮಹತ್ವ. ಮೊದಲನೆಯ ಎಲಿಝಾಬೆಥ್ ಚಕ್ರವರ್ತಿನಿಯ ರಾಜ್ಯಭಾರ ಇಂಗ್ಲಂಡಿನ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವಂಥಾದಾಗಿತ್ತು. ರಾಷ್ಟ್ರೀಯ ಭಾವೈಕ್ಯತೆ, ಜಾಗ್ರತಿ ಎಲ್ಲೆಡೆಯಲ್ಲೂ ಪಸರಿಸಿದ ಕಾಲವದು. ಇದಕ್ಕೂ ಮೊದಲೇ ಅಂದರೆ ಮೂರನೇ ಎಡ್ವರ್ಡ ಹಾಗೂ ಐದನೆಯ ಹೆನ್ರಿ ದೊರೆಗಳ ಕಾಲದಲ್ಲೂ ಈ ದೇಶದ ಜನರ ದೇಶಪ್ರೇಮ, ರಾಷ್ಟ್ರೀಯ ಭಾವನೆಗಳು ಎಲ್ಲರಿಗೂ ಗೊತ್ತಿದ್ದ ಸಂಗತಿಗಳಾಗಿ

ದ್ದವು. ಆದರೆ ನಡುವಿನ ಕೆಲ ವರ್ಷ ಕಾಲದಲ್ಲಿ ಗೃಹಕಲಹ ಗಳಿಂದ ಇಂಗ್ಲೆಂಡಿನ ಐಕ್ಯಕ್ಕೆ ಹೊರಗಿನ ಸ್ವಲ್ಪ ಧಕ್ಕೆ ಉಂಟಾಗಿತ್ತು. ಸ್ಪೇನಿನ ಸೋಲಿನ ಇಂಗ್ಲೆಂಡಿನ ಐತಿಹಾಸಿಕ ವಿಜಯ ಧರ್ಮ ಸುಧಾರಣೆ, ಎಲಿಜಬೆತ್ ರಾಣಿಯ ಕುಶಲ ರಾಜ್ಯಾಡಳಿತಗಳಿಂದ ಆ ದೇಶದಲ್ಲಿ ರಾಷ್ಟ್ರೀಯ ಭಾವನೆ ಜಾಗೃತಿಯಾಗಲು ಕಾರಣವಾಯಿತು. ಅಲ್ಲದೆ ಜನರಲ್ಲಿ ರಾಷ್ಟ್ರೀಯ ಭಾವನೆಗಳನ್ನು ಉದ್ದೀಪನ ಮಾಡಲೆಂದೇ ಶೇಕ್ಸ್‌ಪಿಯರ್ ಐತಿಹಾಸಿಕ ನಾಟಕಗಳನ್ನು ಬರೆದು ಪ್ರಚಾರ ಮಾಡಿದನು. ಹಾಗೂ ಅಂಥ ನಾಟಕಗಳಿಗೆ ಸಾಕಷ್ಟು ಪ್ರೋತ್ಸಾಹವೂ ಕೂಡ ಲಭಿಸುತ್ತಿತ್ತು. ತಮ್ಮ ದೇಶದ ಹಿಂದಿನ ಧುರೀಣರ ಸೋಲು ಗೆಲುವುಗಳನ್ನು ರಂಗಭೂಮಿಯ ಮೇಲೆ ನೋಡಿ ದೇಶದ ಮುಂದಿನ ಉಜ್ವಲ ಭವಿಷ್ಯತ್ತಿನ ಸಲುವಾಗಿ, ಉಚ್ಚ ಧ್ಯೇಯಗಳಿಗಾಗಿ ಹೋರಾಡುವ ಮನೋವೃತ್ತಿಯನ್ನು ಬೆಳೆಸಿಕೊಳ್ಳುವ ಅಭ್ಯಾಸವನ್ನು ಶೇಕ್ಸ್‌ಪಿಯರನ ಕಾಲದ ಪ್ರೇಕ್ಷಕರು ಹೊಂದಿದವರಾಗಿದ್ದರು.

ಮಧ್ಯಯುಗ ಸಮಾಜದ ಕೆಲವು ಅವಶೇಷಗಳಾದ ಜಮೀನ್ದಾರಿ ಪದ್ಧತಿಯು ಎಲಿಜಬೆತ್ ಕಾಲದಲ್ಲೂ ಕೂಡ ಮುಂದುವರಿದದ್ದು ಎಂಬುದಕ್ಕೆ ಅವನ ಐತಿಹಾಸಿಕ ನಾಟಕಗಳೇ ಆಧಾರ. ಆಡಳಿತವನ್ನು ಹಾಗೂ ಕಾಯದೆ ಕಟ್ಟಳೆಗಳನ್ನು ಜಾರಿಗೆ ತರುವ ಕೆಲವು ಅಧಿಕಾರವನ್ನು ಜಮೀನ್ದಾರರು ಹೊಂದಿದ್ದರು. ನಾಲ್ಕನೆಯ ಹೆನ್ರಿ ನಾಟಕ

ದಲ್ಲಿ ಬರುವ ಪ್ರಸಿದ್ಧ ಜಮೀನ್ದಾರರು ಐದು ಗರ್ವಿಷ್ಠರು. ಡ್ಯೂಕ್ ಹಾಗೂ ಅರ್ಲರು ಇನ್ನೂ ತಮ್ಮ ಅಧಿಕಾರ ಸ್ಥಾನಮಾನಗಳಿಂದ ಭ್ರಷ್ಟರಾಗಿರಲಿಲ್ಲ. ನಾಲ್ಕನೆಯ ಹೆನ್ರಿ (ಒಂದು, ಎರಡು, ಮೂರನೆಯ ಭಾಗಗಳು) ಹಾಗೂ ಐದನೆಯ ಹೆನ್ರಿ ಈ ಐತಿಹಾಸಿಕ ನಾಟಕಗಳು ಸಮಕಾಲೀನ ರಾಜಕೀಯ ಪರಿಸರದ ದೃಷ್ಟಿಕೋನದಿಂದ ಬರೆದವುಗಳಾಗಿವೆ ಹಾಗೂ ಅವು ಐತಿಹಾಸಿಕ ಘಟನೆಗಳ ಸಂಪ್ರದಾಯ ಬದ್ಧವಾದ ವಿವರಣೆಗಳು. ಶೇಕ್ಸ್‌ಪಿಯರನು ತನ್ನ ಕಾಲದ ರಾಜಕೀಯ ಕಲ್ಪನೆ ವಿಚಾರಗಳಿಂದ ಸಾಕಷ್ಟು ಪ್ರಭಾವಿತನಾಗಿದ್ದನು. ಅವನ ಐತಿಹಾಸಿಕ ನಾಟಕಗಳೇ ಇದಕ್ಕೆ ಸಾಕಷ್ಟು ಆಧಾರವನ್ನು ಕೊಡುತ್ತವೆ. ರಾಜ ಹಾಗೂ ರಾಜಪ್ರಭುತ್ವದ ಬಗೆಗೆ ಮೇಲಿನ ಎರಡು ನಾಟಕಗಳಲ್ಲದೇ ಎರಡನೆಯ ರಿಚರ್ಡ ಕೂಡ ಸಾಕಷ್ಟು ವಿಚಾರ ಪರಿಪ್ಲುತವಾದ ಭಾಷ್ಯ, ವಿವರಣೆಗಳನ್ನೂ ನೀಡುತ್ತವೆ. ರಾಜಪ್ರಭುತ್ವವು ದೇವರಿಂದ ನಿರ್ಮಿತವಾಗಿ ದೈವತ್ವವನ್ನು ಪಡೆದಿದೆ ಎಂಬ ಸಿದ್ಧಾಂತವನ್ನು ಈ ಐತಿಹಾಸಿಕ ನಾಟಕಗಳು ಎತ್ತಿ ತೋರಿಸುತ್ತವೆ. ಗಹನವಾದ ರಾಜಕೀಯ ವಿಚಾರಗಳಿಗಿಂತಲೂ ಮನುಷ್ಯನ ಸ್ವಭಾವದ ಮೇಲೆ ಅವುಗಳ ಪ್ರಭಾವವೇ ಶೇಕ್ಸ್‌ಪಿಯರನ ಐತಿಹಾಸಿಕ ನಾಟಕಗಳ ಮುಖ್ಯ ಉದ್ದೇಶವೆಂದು ಕೆಲವು ವಿಮರ್ಶಕರು ಅಭಿಪ್ರಾಯ ಪಡುತ್ತಾರೆ. ಈ ಐತಿಹಾಸಿಕ ನಾಟಕಗಳು ರಾಜಕೀಯ ಧ್ಯೇಯ ಧೋರಣೆಗಳನ್ನು ವಿವರಿಸುವವಲ್ಲದೇ ನೈತಿಕ ಸತ್ಯಸ್ಥಿತಿಗಳನ್ನೂ ಕೂಡ ನಿವೇದಿಸುವವು. ನಿಜವಾದ

ರಾಜನಾರು ಎಂಬ ಪ್ರಶ್ನೆಗೆ ಉತ್ತರ ದೊರಕುವದೇ: ಈ ಐತಿಹಾಸಿಕ ನಾಟಕಗಳಲ್ಲಿ ಕಂಡು ಬರುವ ಶೇಕ್ಸ್‌ಪಿಯರನ ಉತ್ತರವಿಷ್ಟೇ. ಜನತೆಯ ಪ್ರಿಯನೇ ಅವನ ದೃಷ್ಟಿಯಲ್ಲಿ ನಿಜವಾದ ರಾಜ. ಕೆಲವು ಮಹತ್ತರವಾದ ಉದ್ದೇಶಗಳನ್ನು ತನ್ನ ಮನಸ್ಸಿನಲ್ಲಿಟ್ಟುಕೊಂಡೇ ಅವನು ಈ ರಾಜನ ಪಾತ್ರ ಪರಿಚಯವನ್ನು ಮಾಡಿಕೊಟ್ಟಿದ್ದಾನೆ. ರಾಜಪ್ರಭುತ್ವದಲ್ಲಿ ಸಾಮಾನ್ಯವಾಗಿರುವ ಅತ್ಯಂತ ವಿಲಾಸೀ ಜೀವನ, ಒಳಸಂಚು, ಪಕ್ಷಪಾತದ ವಿನೋದ ಜೀವನದ ಘಟನೆಗಳು ಇವೆಲ್ಲವುಗಳನ್ನು ನಾವು ಐತಿಹಾಸಿಕ ನಾಟಕಗಳಲ್ಲಿ ಕಾಣಬಹುದು. ಪ್ರಜಾಪ್ರಭುತ್ವದ ವಿಷಯವನ್ನು ಚರ್ಚಿತ ಚರ್ವಣವಾಗಿ ಚರ್ಚಿಸಿದ್ದಾನೆ. ಯಾವ ದೇಶದಲ್ಲಿ ಅಶಿಕ್ಷಿತ, ಮೂಢ, ಚಂಚಲ ಸ್ವಭಾವದ ಜನರಿರುವರೋ ಅಂಥಲ್ಲಿ ನಿಜವಾದ ಪ್ರಜಾ-ಪ್ರಭುತ್ವವು ಬರಲು ಸಾಧ್ಯವಿಲ್ಲವೆಂಬುದನ್ನು "ಜೂಲಿಯಸ್ ಸೀಝರ್"ದ ಮುಖಾಂತರ ನಮಗೆ ಮನದಟ್ಟು ಮಾಡಿಕೊಟ್ಟಿದ್ದಾನೆ. ಪ್ರಜಾಪ್ರಭುತ್ವವು ಒಂದು ವೇಳೆ ಇಂಥ ಜನರಿಗೆ ಲಭಿಸಿದ್ದೇ ಆದರೆ ಇಡೀ ದೇಶಕ್ಕೆ ಬಹಳಷ್ಟು ಹಾನಿ ತಪ್ಪದೇ ಇರದು ಎಂಬ ಮಾತನ್ನು ಕೂಡ ಅವನು ಅದರ ಮುಖಾಂತರ ನಮಗೆ ತಿಳಿಯಪಡಿಸಿದ್ದಾನೆ. ಈ ಎಲ್ಲ ಐತಿಹಾಸಿಕ ನಾಟಕಗಳಲ್ಲಿ ಶೇಕ್ಸ್‌ಪಿಯರ್ ನಾಟಕಕಾರನಾಗಿ ಉಳಿದಿಲ್ಲ. ಅವನೊಬ್ಬ ದೂರದೃಷ್ಟಿಯ ರಾಜನೀತಿ ತಜ್ಞನ ಹಾಗೆ ವಿಚಾರಪರಿಪ್ಲುತವಾಗಿ ನಾಟಕಗಳನ್ನು ಬರೆದಿದ್ದಾನೆ.

೧೫೯೯ ರಲ್ಲಿ ನಡೆದ ಅರ್ಲ್ ಆಫ್ ಎಸೆಕ್ಸ್‌ನ ರಾಜಕೀಯ ಚಟುವಟಿಕೆಗಳ ಇಣುಕು ನೋಟವನ್ನು ನಾವು ಶೇಕ್ಸ್‌ಪಿಯರನ 'ಐದನೆಯ ಹೆನ್ರಿ' ನಾಟಕದಲ್ಲಿ ಕಾಣಬಹುದಾಗಿದೆ. ನಾಲ್ಕನೆಯ ಹೆನ್ರಿಯ ಒಂದನೆಯ ಭಾಗದಲ್ಲಿ ತನ್ನ ಕಾಲದ ಅನುಭವಗಳನ್ನು ಶೇಕ್ಸ್‌ಪಿಯರ್ ಹೇಳಿದ್ದಾನೆ. ಫಾಲಸ್ಟಾಫ್‌ನೊಡನೆ ರಾಜಕುಮಾರ ಹಾಲ್‌ನೂ ಕೂಡ ಬೀದಿ ದರೋಡೆಗೆ ತೊಡಗುವದು ವಾಸ್ತವಿಕವಾದ ಅಂಶ. ಪ್ರಯಾಣ ಮಾಡುತ್ತಿದ್ದ ಪ್ರವಾಸಿಕರ ಜೀವನವು ಬಹಳ ಶೋಚನೀಯವಾಗಿತ್ತು. ಕೊಲೆ, ದರೋಡೆ, ಸುಲಿಗೆಗಳು ನಿತ್ಯದ ಮಾತಾಗಿದ್ದವು.

ಶೇಕ್ಸ್‌ಪಿಯರನು ರಾಜಪ್ರಭುತ್ವವಾದಿಯೇ ಅಥವಾ ಪ್ರಜಾಪ್ರಭುತ್ವದ ಜನಸಾಮಾನ್ಯರ ಪ್ರತಿನಿಧಿಯೇ ಎಂಬ ಪ್ರಶ್ನೆಗೆ ಉತ್ತರ ಹುಡುಕುವದು ಬಹಳ ಕಷ್ಟವಾದದ್ದು. ಅವನು ಜೀವಿಸಿದ ಯುಗ ರಾಜಪ್ರಭುತ್ವದ ಯುಗ. ಜಮೀನ್ದಾರರ, ಸರದಾರರ, ರಾಜರ ಕೃಪಾಕಟಾಕ್ಷದಲ್ಲಿಯೇ ಕಲಾಕಾರರು ತಮ್ಮ ಕಲೆಯನ್ನು ವೃದ್ಧಿಸಿಕೊಂಡು ಬಾಳಬೇಕಾಗಿತ್ತು. ಶೇಕ್ಸ್‌ಪಿಯರನೂ ಕೂಡ ಈ ಮಾತಿಗೆ ಹೊರತಾಗಿರಲಿಲ್ಲ. ತನ್ನ ಅನೇಕ ಚೌಪದಿಗಳನ್ನು ಸೌಥಂಪ್ಟನ್‌ನ ಅರ್ಲನಿಗೆ ಅರ್ಪಿಸಿದ್ದಾನೆ. ಐತಿಹಾಸಿಕ ನಾಟಕಗಳಲ್ಲಿ ರಾಜಪ್ರಭುತ್ವದ ವಿಷಯವಾಗಿಯೇ ಬಹಳವಾಗಿ ಚರ್ಚಿಸಿದ್ದಾನೆ. ಆದರೆ ಜನಸಾಮಾನ್ಯರ ಬಗೆಗೆ ತಿರಸ್ಕಾರ ವ್ಯಕ್ತಪಡಿಸಿಲ್ಲ. ಎಲಿಜಬೆಥ್ ಕಾಲದಲ್ಲಿಯ ಬಹು ಮನಸ್ಸಿನ

ಪ್ರವೃತ್ತಿಯಿಂದ ಶೇಕ್ಸ್ಪಿಯರ್ ಸಾಮಾನ್ಯ ಜನರ ಚಂಚಲ ಸ್ವಭಾವ, ಮೌಢ್ಯತೆ ಅನಾಗರಿಕತೆಗಳನ್ನು ಬಿಟ್ಟು ಮಾಡಿ ತೋರಿಸಿದ್ದಾನೇ ಹೊರತು ಅವರನ್ನು ಅಪಹಾಸ್ಯಕ್ಕೆ ಅಥವಾ ಟೀಕೆಗೆ ಗುರಿಪಡಿಸಿಲ್ಲ. “ಜ್ಯೂಲಿಯಸ್ ಸೀಜರ್” ಹಾಗೂ “ಕೋರಿಯೋಲನಸ್”ಗಳಲ್ಲಿ ಹೇಳಿದ ಸಂಗತಿಗಳು ಸ್ಪಷ್ಟವಾಗಿ ಕಾಣಿಸುತ್ತವೆ. ಕವಿಥಾಸರನ ಹಾಗೆ ಶೇಕ್ಸ್ಪಿಯರನೂ ಕೂಡ ಸಾಮಾನ್ಯ ಜನರ ಬಗೆಗೆ ಸಹಾನುಭೂತಿಯನ್ನು ವ್ಯಕ್ತಪಡಿಸಿದ್ದಾನೆ. ಓದುಗರು ಅವರ ವಿಷಯವಾಗಿ ಅನುಕಂಪ, ದಯಾದೃಷ್ಟಿಯಿಂದ ನೋಡುವಂತೆ ತನ್ನ ನಾಟಕಗಳಲ್ಲಿ ಅವರನ್ನು ಚಿತ್ರಿಸಿದ್ದಾನೆ. ಜನರ ಗುಣಾವಗುಣಗಳೆರಡನ್ನೂ ಕೂಲಂಕಷವಾಗಿ ತೂಗಿ ನಾಲ್ಕನೆಯ ಹೆನ್ರಿ ನಾಟಕದಲ್ಲಿ ವಿವರವಾಗಿ ಚರ್ಚಿಸಿದ್ದಾನೆ. ಅವನ ಅಪಹಾಸ್ಯಕ್ಕೆ ಗುರಿಯಾದವರು ಬಡಜನರಲ್ಲ; ಅವರೆ ಮಧ್ಯಮ ವರ್ಗದ ಜನರು. ಸಾಮಾನ್ಯ ವರ್ಗದ ಜನರ ವಿಷಯಕ್ಕಾಗಲಿ, ಮಧ್ಯಮ ವರ್ಗದವರ ವಿಷಯಕ್ಕಾಗಲಿ ಶೇಕ್ಸ್ಪಿಯರ್ ವಾಸ್ತವಿಕ ನಿಲುವನ್ನು ತಳೆದಿದ್ದಾನೆ. ಮಾನವನ ರಾಜಕೀಯ ಇತಿಹಾಸ ಪುನರಾವೃತ್ತಿಗೊಳ್ಳುತ್ತಲೇ ಇರುತ್ತದೆ ಎಂಬ ಮಾತನ್ನು ಆತನು ಘೋಷಿಸಿದ್ದಾನೆ. ರಾಜಪ್ರಭುತ್ವವಾದಿಗಳಿಗೆ ಕೆಲವು ಹಿತವಚನದ ನುಡಿಗಳನ್ನು ಕೂಡ ಅವನು ಹೇಳಿದ್ದಾನೆ. ತಮ್ಮ ಸ್ವಹಿತಕ್ಕಿಂತಲೂ ಜನತೆಯ ಹಿತಕ್ಕಾಗಿ ಚಕ್ರವರ್ತಿಗಳು ದುಡಿಯಬೇಕೆನ್ನುವದೇ ಅವನ ಅಭಿಪ್ರಾಯ. ಐದನೆಯ ಹೆನ್ರಿ ನಾಟಕವೇ

ಗಕ್ಕೆ ಸಾಕ್ಷಿ. ಅದರಂತೆ ಸಾಮಾನ್ಯ ಜನರು ದೇಶಕ್ಕಾಗಿ ತ್ಯಾಗ ಮಾಡಬೇಕು. ಅವರು ದೇಶಕ್ಕೆ ವಿಧೇಯರಾಗಿ ನಡೆದುಕೊಳ್ಳಬೇಕು ಎನ್ನುವದೂ ಕೂಡ ಅವನ ಅಭಿಪ್ರಾಯ. ಸರ್ವಾಧಿಕಾರತ್ವ. ಸ್ವಜನದ್ರೋಹಿಗಳ ಬಗ್ಗೆ ಜನರಿಗೆ ಎಚ್ಚರಿಕೆ ನೀಡಿದ್ದಾನೆ. ಶೇಕ್ಸ್‌ಪಿಯರನ ಕಾಲ ಪ್ರಜಾಪ್ರಭುತ್ವದ ಕಾಲವಲ್ಲ. ಹಾಗೆಂದ ಮಾತ್ರಕ್ಕೆ ಅವನಿಗೆ ಪ್ರಜಾಪ್ರಭುತ್ವದ ಕಲ್ಪನೆ ಇದ್ದಿರಲಿಲ್ಲವೆಂದು ಅರ್ಥವಲ್ಲ. ರಾಜ್ಯಕಾರಭಾರ ಆಡಳಿತ ನಡೆಸಲು ಒಂದು ಸರಕಾರದ ಅಗತ್ಯವಿದೆ; ಜನಹಿತದ ಕಾರ್ಯಗಳನ್ನು ಅದು ಮಾಡಬೇಕು, ಮಾಡದೇ ಹೋದರೆ ಅವರ ಕೊನೆ ಖಂಡಿತ ಎನ್ನುವದು ಶೇಕ್ಸ್‌ಪಿಯರನ ಅಭಿಪ್ರಾಯ. ತನ್ನ ಕಾಲದ ವಾಸ್ತವಿಕ ರಾಜಕೀಯ ಪರಿಸರವನ್ನು ಪೂರ್ಣವಾಗಿ ಅವನು ತನ್ನ ಐತಿಹಾಸಿಕ ನಾಟಕಗಳಲ್ಲಿ ಪ್ರತಿಬಿಂಬಿಸಿದ್ದಾನೆ.

ಸಮಾಜದಲ್ಲಿದ್ದ ವಿವಿಧ ವರ್ಗಗಳ ಅಸ್ತಿತ್ವ, ಅವುಗಳ ಬಗ್ಗೆ ಜನರಿಗಿದ್ದ ವಿಶೇಷ ಶ್ರದ್ಧೆ, ಆಸ್ಥೆಗಳನ್ನು ಕೂಡ ಶೇಕ್ಸ್‌ಪಿಯರ್ ತನ್ನ ಐತಿಹಾಸಿಕ ನಾಟಕಗಳಲ್ಲಿ ಎತ್ತಿ ತೋರಿಸಿದ್ದಾನೆ. ತನ್ನ ದೇಶದ ಹಾಗೂ ಜನರ ಬಗೆಗೆ ಆತನಿಗೆ ಬಹಳ ಅಭಿಮಾನ. ಇಂಗ್ಲಂಡ ಸಂಕ್ರಮಣ ಕಾಲದಲ್ಲಿ ಸಿಲುಕಿದಾಗ ಅದ್ಭುತ ಪವಾಡ ಅಥವಾ ದೇವತಾ ಶಕ್ತಿಯಿಂದ ಅದೆಲ್ಲವೂ ದೂರಾಗಿ ಇಂಗ್ಲಂಡ ಮತ್ತೆ ತನ್ನ ಕೀರ್ತಿ ಧ್ವಜವನ್ನು ಹಾರಿಸುತ್ತದೆ ಎನ್ನುವದು ಶೇಕ್ಸ್‌ಪಿಯರನ

ಅಭಿಪ್ರಾಯ. ಇಂಗ್ಲೆಂಡಿನ ಜನರ ಕ್ಯಾಥೋಲಿಕ್ ಧರ್ಮದ ಜನರ ಬಗೆಗಿನ ದ್ವೇಷ, ಸಂಶಯಗಳನ್ನು, ಅದರಂತೆ ಕ್ಯಾಥೋಲಿಕ್ ಜನರ ಮೋಸದ ಯೋಜನೆಗಳನ್ನು, ಅವನು ತನ್ನ ನಾಟಕಗಳಲ್ಲಿ ಅಳವಡಿಸಿಕೊಂಡಿದ್ದಾನೆ. ಕ್ಯಾಥೋಲಿಕ್ ಚರ್ಚಿನ ಪಾದ್ರಿಗಳ ವಿಷಯವಾಗಿ ಈ ನಾಟಕಕಾರ ಕೆಲವು ವಾಸ್ತವಿಕ ಸಂಗತಿಗಳನ್ನು ಹೊರಗೆಡವಿದ್ದಾನೆ. ಮಧ್ಯಯುಗದ ಸತ್ಸಂಪ್ರದಾಯದ ಪಾದ್ರಿಗಳು ಇವರಲ್ಲ; ಆದರೆ ಗುಣಾವಗುಣಗಳಿಂದ ಕೂಡಿದ ಮನುಜರು. ಇವರೇನೂ ದೇವದೂತರಲ್ಲ. ತಮಗೆ ಸಂಬಂಧವಿಲ್ಲದ ರಾಜಕಾರಣ ವಿಷಯದಲ್ಲಿ ತೊಡಗಿ ಚರ್ಚಿನ ಪವಿತ್ರತೆಗೂ ಕ್ರಿಸ್ತಧರ್ಮಕ್ಕೂ ಮಸಿ ಬಳಿದ ಮಹಾನ್ ಕುಕರ್ಮಿಗಳು. ಆರನೆಯ ಹೆನ್ರಿ ನಾಟಕದಲ್ಲಿ ಇದನ್ನು ನಿವೇದಿಸಲಾಗಿದೆ. ಅದರಂತೆಯೇ ಪ್ರಮುಖ ಸರದಾರರು, ಸಭಾಸದರು ಇವರೆಲ್ಲರ ಚಿತ್ರಗಳೂ ಆಸವಿಲ್ಲದವುಗಳೂ, ವಿಕಾರವಾದ ಹಾಸ್ಯಜನಕವಾಗಿಯೂ ಇವೆ.

ಶೇಕ್ಸ್ಪಿಯರನಿಗೆ ಇತಿಹಾಸವು ಕೇವಲ ಒಂದು ತಮಾಷೆಯ ಮನೋರಂಜಕ ವಿಷಯವಾಗಿರಲಿಲ್ಲ. ಅದಕ್ಕೆ ತನ್ನದೇ ಆದ ಒಂದು ಅರ್ಥವಿರುತ್ತದೆಂದು ಅವನ ಅಭಿಮತ. ಅವನ ಐತಿಹಾಸಿಕ ನಾಟಕಗಳು ರಾಜಕೀಯ ಮೂಲತತ್ವಗಳನ್ನು ಪ್ರತ್ಯೇಕವಾದ ವಿವಿಧ ವ್ಯಕ್ತಿಗಳ ಮುಖಾಂತರ ನಮಗೆ ನಿವೇದಿಸುತ್ತವೆ. ಟ್ಯೂಡರ್ ಕಾಲದಲ್ಲಿ ಬಹಳಷ್ಟು ಪ್ರಚಲಿತವಾದ "ರಾಜಪ್ರಭುತ್ವ ಹಾಗೂ

ದಿ ಫಿಫ್ತ್”ಗಳನ್ನು ಶೇಕ್ಸ್‌ಪಿಯರ್ ಬರೆದನು. ಇದರ ನಾಟಕದಲ್ಲಿ ವಿಶೇಷವಾಗಿ ವಿವರಿಸಿ ಹೇಳಿದ್ದಾನೆ. ಅವನ ಐತಿಹಾಸಿಕ ನಾಟಕಗಳು ದೂರದ ಕಾಲದ ಪರಿಸ್ಥಿತಿ, ದೃಷ್ಟಿಕೋನಗಳಿಂದ ಪ್ರಭಾವಿತವಾಗಿ ಬರೆಯಲ್ಪಟ್ಟವೆ ಎನ್ನುವುದರಲ್ಲಿ ನಮಗೆ ಯಾವುದೇ ಸಂಶಯವಿಲ್ಲ. ಅದರಿಂದ ಹೆನ್ರಿ ನಾಟಕದಲ್ಲಿ ಶೇಕ್ಸ್‌ಪಿಯರ್ ತನ್ನ ಕಾಲದ ಸಾಮಾಜಿಕ ಸಮಸ್ಯೆಗಳ ಬಗೆಗೆ ಅಷ್ಟೊಂದು ಆಸ್ಥೆ ವಹಿಸಿರಲಿಲ್ಲ ಎನ್ನುವುದು ನಮಗೆ ಗೊತ್ತಾಗುತ್ತದೆ. ಸಾಮಾನ್ಯ ಜನತೆಯ ಬಗ್ಗೆ ಕೂಡ ಅವನು ವಿಚಾರಿಸಿರಲಿಲ್ಲವೆನ್ನುವುದು ನಮಗೆ ಗೊತ್ತಾಗುತ್ತದೆ. ತನ್ನ ಕಾಲದ ರಾಜಕೀಯ, ಐತಿಹಾಸಿಕ ವಾತಾವರಣವನ್ನು ಪುನಃ ನಿರ್ಮಿಸಿ ಶೇಕ್ಸ್‌ಪಿಯರ್ ನಮ್ಮ ಮುಂದೆ ಇಟ್ಟಿದ್ದಾನೆ. ಅವನ ಐತಿಹಾಸಿಕ ನಾಟಕಗಳು ಕೇವಲ ನಿರರ್ಥಕ ಇತಿಹಾಸದ ಘಟನೆಗಳಾಗಿಲ್ಲ; ಆದರೆ ಅವು ವೈಚಾರಿಕವಾಗಿವೆ. ವಿವಿಧ ರಾಜಕೀಯ ತತ್ವ ಪ್ರಣಾಲಿಗಳ ವಿಷಯ ವಿವೇಚನೆ ಅವುಗಳಲ್ಲಿದೆ. ಅವುಗಳೇನೂ ನಾಟಕಕಾರನ ಸ್ವತಃ ಕಪೋಲಕಲ್ಪಿತ ಕಟ್ಟುಕಥೆಗಳೂ ಅಲ್ಲ. ನಾಲ್ಕನೆಯ ಹೆನ್ರಿ ನಾಟಕದಲ್ಲಿ ಶೇಕ್ಸ್‌ಪಿಯರ್ ರಾಜಕೀಯ ಪುರೋಹಿತರ ಸಂಘಗಳ ಬಗ್ಗೆ ಸಾಕಷ್ಟು ಟೀಕೆಯನ್ನು ಮಾಡಿದ್ದಾನೆ. ಹಾಗೂ ಯುದ್ಧಗಳ ಬಗ್ಗೆ ಕೂಡ ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾನೆ. ಸಾಮಾನ್ಯ ಪ್ರಜೆಗಳ ರಾಷ್ಟ್ರೀಯ ಭಾವನೆ ಹಾಗೂ ರಾಷ್ಟ್ರಕ್ಕೆ ಸರಕಾರಕ್ಕೆ ವಿಧೇಯತೆಗಳು ಮಾತ್ರ ರಾಷ್ಟ್ರವನ್ನು ಸಂಕಟದಿಂದ ಪಾರು

ಮಾತಬಲ್ಲನೆಂದು ಶೇಕ್ಸ್‌ಪೀಯರ್ ಸ್ಪಷ್ಟೀಕರಿಸಿದ್ದಾನೆ. ಈ ನಾಟಕಗಳ ಮುಖಾಂತರ ಅವನಿಗಿದ್ದ ವಾಸ್ತವಿಕ, ರಾಜಕೀಯ ಮೌಲ್ಯಗಳ ಪರಿಜ್ಞಾನ, ರಾಜಕೀಯ ಜವಾಬ್ದಾರಿತನಗಳ ಪರಿಚಯ ನಮಗೆ ಉಂಟಾಗುತ್ತದೆ. ರಾಜಕೀಯ ಮೌಲ್ಯಗಳ ವಿಷಯದಲ್ಲಿ ಅವನು ತನ್ನ ಕಾಲದ ರಾಜಕೀಯ ಪರಿಸರವನ್ನು ಗಮನದಲ್ಲಿಟ್ಟುಕೊಂಡು ಐತಿಹಾಸಿಕ ನಾಟಕಗಳನ್ನು ಬರೆದಿದ್ದರೂ ಕೂಡ ಅವನ ರಾಜಕೀಯ ವಿಚಾರಗಳು ಕಾಲಾತೀತವಾಗಿವೆ. ತನ್ನ ಕಾಲದ ವಾತಾವರಣಕ್ಕಿಂತಲೂ ಮುಂದೆ ಅವನು ಹೋಗಿದ್ದಾನೆ.

ಕಿಂಗ್ ಜಾನ್, ಎರಡನೆಯ ರಿಚರ್ಡ, ಆರನೆಯ ಹೆನ್ರಿ ಈ ಚಾರಿತ್ರಿಕ ನಾಟಕಗಳಲ್ಲಿ ಚಕ್ರವರ್ತಿಗಳ ಕೆಲವು ಮುಖ್ಯವಾದ ಅವಗುಣಗಳನ್ನು ಶೇಕ್ಸ್‌ಪೀಯರ್ ಬಯಲಿಗೆಳೆದಿದ್ದಾನೆ. ಇಂಗ್ಲಂಡಿನ ರಾಜಕೀಯ ವಸ್ತುಸ್ಥಿತಿಯನ್ನು ವಾಸ್ತವಿಕವಾಗಿಯೇ ಪ್ರಕಟಿಸಿ ಜನರಿಗೆ ರಾಜಕೀಯ ವಾಸ್ತವಿಕತೆಯನ್ನು ಮಾರ್ಮಿಕವಾಗಿ ತಿಳಿಸಿಕೊಡುವುದೇ ಅವನ ಗುರಿಯಾಗಿತ್ತೆಂದು ನಮಗೆ ಸ್ಪಷ್ಟವಾಗಿ ಹೇಳಿದ್ದಾನೆ. ಹೇಳುವದೆಲ್ಲವನ್ನೂ ನಿರ್ದಾಕ್ಷಿಣ್ಯವಾಗಿ ಹೇಳಿದ್ದಾನೆ. ಅವನ ಈ ನಾಟಕಗಳು ಅವನ ಕಾಲದಲ್ಲೇ ರಂಗಭೂಮಿಯ ಮೇಲೆ ತರಲ್ಪಟ್ಟವು. ರಾಜಪ್ರಭುತ್ವವಿದ್ದ ಆ ಕಾಲದಲ್ಲಿ ಇಂಥ ಮಾರ್ಮಿಕ, ವೈಚಾರಿಕ, ಚಾರಿತ್ರಿಕ ನಾಟಕಗಳನ್ನು ಬರೆದು ರಂಗಭೂಮಿಯ ಮೇಲೆ ತಂದುದು ಆಗಿನ ಕಾಲದಲ್ಲಿ

ಕವಿಯೆಂಬ ಸಾಮಾನ್ಯವೇನೂ ಆಗಿರಲಿಲ್ಲ. ಅವನ ನಿರ್ದಾಕ್ಷಿಣ್ಯತೆ ನಿರ್ಭೀತಿಗಳಿಗೆ ಈ ಐತಿಹಾಸಿಕ ನಾಟಕಗಳು ಕನ್ನಡಿಗಳಾಗಿ ಪರಿಣಮಿಸಿವೆ. ಅವನ ಹತ್ತು ಚಾರಿತ್ರಿಕ ನಾಟಕಗಳಲ್ಲಿ ಒಂದೊಂದು ನಾಟಕವೂ ಒಂದು ರೀತಿಯ "ಧರ್ಮ ಮತ್ತು ನೀತಿರಕ್ಷಕ"ದಂತೆ ಭಾಸವಾಗುವದು. ರುದ್ರ ನಾಟಕಗಳಂತೆ ಈ ನಾಟಕಗಳೂ ಕೂಡ ನಮಗೆ ಶಿಸ್ತಿನ ಪಾಠಗಳನ್ನು ಕಲಿಸುತ್ತವೆ. ರುದ್ರನಾಟಕಗಳಲ್ಲಿಯಂತೆ ಈ ನಾಟಕಗಳಲ್ಲಿ ಜೀವನ ಮರಣಗಳ ಅನಂತ ಮೌಲ್ಯಗಳ ನಿವೇದನೆ ಏನೂ ಇಲ್ಲ. ವ್ಯವಹಾರಿಕ ಜೀವನದಲ್ಲಿಯ ಸಾಮಾನ್ಯ ಸೀಮಿತವಾದ ವ್ಯವಹಾರಗಳ ಬಗೆಗೆ ಹಾಗೂ ಅವುಗಳ ಯಶಾಪಯಶಗಳ ವಿಷಯವಾಗಿ ನಾಟಕಕಾರ ಕೆಲವು ಮಾತುಗಳನ್ನು ಹೇಳಿದ್ದಾನೆ. ಧರ್ಮಪೀಠ ಹಾಗೂ ರಾಜಕಾರಣಗಳ ವಿಶೇಷ ವ್ಯತ್ಯಾಸವನ್ನು ನಾವು "ಕಿಂಗ್ ಜಾನ್"ನಲ್ಲಿ ಕಾಣಬಹುದಾಗಿದೆ. ಧರ್ಮಪೀಠಗಳ ಬಿಷಪ್‌ರು ರಾಜಕಾರಣದಲ್ಲಿ, ಒಳಸಂಚಿನಲ್ಲಿ, ಹಾಗೂ ಯುದ್ಧದಲ್ಲಿ ತೊಡಗುವದನ್ನು ನಾವು ಶೇಕ್ಸ್‌ಪಿಯರನ ನಾಟಕಗಳಲ್ಲಿ ಕಾಣುತ್ತೇವೆ. ಇವೆರಡೂ ಒಂದಕ್ಕೊಂದು ಪೋಷಕವಾಗಬೇಕೇ ಹೊರತು ಒಂದರ ಸ್ಥಾನವನ್ನು ಮತ್ತೊಂದು ಆಕ್ರಮಿಸಿ ರಾಜ್ಯಕ್ಕೆ ಹಾನಿಯನ್ನುಂಟು ಮಾಡಬಾರದೆಂಬ ನೀತಿಯ ಪಾಠವನ್ನು ಶೇಕ್ಸ್‌ಪಿಯರ್ ನಮಗೆ ಹೇಳಿದ್ದಾನೆ.

೭. ಶೇಕ್ಸ್‌ಪಿಯರನ ಕೊನೆಯ ನಾಟಕಗಳು

ಶಿಲ್ಪ ದೃಷ್ಟಿಯಿಂದ ಶೇಕ್ಸ್‌ಪಿಯರನ ಕೊನೆಯ ನಾಟಕಗಳು ಅವನ ಆಳವಾದ ವಿಚಾರಗಳಿಗೆ ಹಿಡಿಯುವ ಕನ್ನಡಿಗಳಾಗಿವೆ. ಮಾನವನ ಸಹಜ ಗುಣಗಳಾದ ಪ್ರಾಯಶ್ಚಿತ್ತ, ಕ್ಷಮಾದಾನಗಳ ಮಹತ್ವವನ್ನು ಅವನು ವಿವರಿಸಿ ಹೇಳಿದ್ದಾನೆ. ಪುನರ್ಮಿಲನ, ಅನುಸಂಧಾನ, ದಯೆ ಈ ಮಾನವೀಯ ಮೌಲ್ಯಗಳನ್ನು ಅವನು ತನ್ನ ಕೊನೆಯ ನಾಟಕಗಳಲ್ಲಿ ಪ್ರತಿಪಾದಿಸಿದ್ದಾನೆ. "ಸಿಂಬೆಲಿನ್" "ದಿ ವಿಂಟರ್ಸ ಟೇಲ್" "ದಿ ಟೆಂಪೆಸ್ಟ್" ಹಾಗೂ "ಪೆರಿಕ್ಲಸ್" ಈ ನಾಟಕಗಳು ಅವನು ಬರೆದ ಕೊನೆಯ ನಾಟಕಗಳಾಗಿರುತ್ತವೆ. ಅವನು ಮೊದಲು ಬರೆದ ನಾಟಕಗಳಿಗಿಂತಲೂ ಈ ನಾಟಕಗಳು ಬಹಳವಾಗಿ ಭಿನ್ನವಾದವುಗಳಾಗಿವೆ. ಈ ಪ್ರತಿಯೊಂದು ನಾಟಕದ ಕೊನೆ

ಅನುಸಂಧಾನ ಇಲ್ಲವೆ ಕ್ಷಮಾದಾನಗಳಿಂದ ಮುಕ್ತಾಯ ವಾಗುತ್ತವೆ. ಈ ಕೊನೆಯ ನಾಟಕಗಳು ಉಷ್ಣತೆ ರೌದ್ರತೆಗಳ ಮುಕ್ತತಳಿಗಳಾಗಿವೆ. ತಾರುಣ್ಯದ ದುಡುಕು ಸಾಹಸಗಳು ತೀರಿಹೋಗಿ ಮಾನವ ಮಧ್ಯಮ ವಯಸ್ಸಿಗೆ ಬಂದಾಗ ಜವಾಬ್ದಾರಿ ಜೀವನದ ಬಂಧನಗಳಿಂದ ಬಾಗಿ ವಿನಮ್ರ ನಾಗುತ್ತಾನೆ. ಯೌವನದ ದರ್ಪ, ಆವೇಶ ವ್ಯಾಮೋಹಗಳು ಮಾಯವಾಗುತ್ತವೆ. ಮನುಷ್ಯ ಜೀವನದಲ್ಲಿ ಪ್ರಶಾಂತಿ, ಏಕತೆ, ಸಾಮರಸ್ಯತೆಗಳನ್ನು ಬಯಸುತ್ತಾನೆ. ಇದು ಮಾನವ ಸಹಜ ಪ್ರಕೃತಿಯ ಗುಣಧರ್ಮ. ಶೇಕ್ಸ್‌ಪಿಯರನ ಕೊನೆಯ ನಾಟಕಗಳೂ ಕೂಡ ಇದಕ್ಕೆ ದೃಷ್ಟಾಂತವಾಗಿವೆ. ಕಲಹ ದ್ವೇಷದ ಜೀವನದ ಪ್ರಶಮನ, ಮಾನವ ಬಂಧುರ ಮೈತ್ರೀಕರಣಗಳೇ ಈ ಕೊನೆಯ ನಾಟಕಗಳ ಮುಖ್ಯ ಸಂದೇಶ ಹಾಗೂ ಸೂತ್ರಗಳಾಗಿವೆ ಎನ್ನಬಹುದು. ಅಷ್ಟೇ ಅಲ್ಲ; ಕ್ರೈಸ್ತಮತದ ಕೆಲವು ಮುಖ್ಯವಾದ ಸಂದೇಶಗಳನ್ನು ಈ ನಾಟಕಗಳು ನಮಗೆ ನಿವೇದಿಸುತ್ತವೆಯೆಂಬ ಕೆಲವು ವಿಮರ್ಶಕರ ಅಭಿಪ್ರಾಯವನ್ನು ನಾವು ಅಂಗೀಕರಿಸುವುದಾದರೂ ಆ ಸಂದೇಶಗಳು ಯಾವುದೇ ಧರ್ಮಕ್ಕೆ ಸಂಬಂಧಿಸಿದ್ದಲ್ಲ ಅವು ಮಾನವ ಧರ್ಮಕ್ಕೆ ಸಂಬಂಧಿಸಿದ್ದಾಗಿವೆ. 'Seven Ages of Man' ಎಂದರೆ ಮನುಷ್ಯನ ಏಳು ಜೀವಮಾನಗಳು ಈ ಅವಸ್ಥೆಗಳನ್ನು ಶಾಸ್ತ್ರೀಯವಾಗಿ ಬರೆದ ಶೇಕ್ಸ್‌ಪಿಯರ್ ತನ್ನ ನಾಟಕಗಳಲ್ಲಿ ಅವುಗಳನ್ನು ಪ್ರಯೋಗದಲ್ಲಿ ಉಪಯೋಗಿಸಿ ಸಿದ್ಧಮಾಡಿ ತೋರಿಸಿದ್ದಾನೆ. ಈ ನೈತಿಕ ಹಾಗೂ ಆಧ್ಯಾ

ಪುನರುತ್ಥಾನವನ್ನು ನಾವು ಈ ಕೊನೆಯ ನಾಟಕಗಳಲ್ಲಿ ಕಾಣಬಹುದಾಗಿದೆ. ಶೇಕ್ಸ್‌ಪೀಯರನ ಈ ಕೊನೆಯ ನಾಟಕಗಳು ಸಾಂಕೇತಿಕ ಅರ್ಥವನ್ನು ಕೊಡುತ್ತವೆ. ಪ್ರಕೃತಿಯ ಸಹಜ ಬೆಳವಣಿಗೆ, ಸಮೃದ್ಧಿಯನ್ನು, ಹಾಗೂ ಮಾನವ ಸಹಜ ಪ್ರೇಮ, ಪರಸ್ಪರ ವಿಶ್ವಾಸಗಳು ಮಾನವ ಜೀವನಕ್ಕೆ ಹೇಗೆ ಸಹಾಯಕಾರಿಯಾಗಬಲ್ಲವೆಂದು ನಾಟಕಕಾರ ವಿವರಿಸಿ ಹೇಳಿದ್ದಾನೆ.

ಮಾನವ ವೃದ್ಧ ವಯಸ್ಸಿಗೆ ಬಂದಾಗ ಗಂಭೀರತೆಯುಂಟಾಗಲು ಕಾರಣವಾದ ಸಾತ್ತ್ವಿಕ ಗುಣಗಳಿಂದ ಕೂಡಿದನಾಗಿ ವರ್ತಿಸುತ್ತಾನೆ ಎಂಬುದನ್ನು ಅವನ ಈ ಕೊನೆಯ ನಾಟಕಗಳು ಸಿದ್ಧ ಮಾಡಿ ತೋರಿಸುತ್ತವೆ. ಜೀವನದ ಅನುಭವಾಮೃತದ ಅತಿ ಮಹತ್ತ್ವಗಳನ್ನು ನಾಟಕಕಾರ ರಮ್ಯವಾಗಿ ಮನೋವೇಧಕವಾಗಿ ಪಾತ್ರಗಳ ಮುಖಾಂತರ ವಿವರಿಸಿದ್ದಾನೆ. ಅಭಾವ ವೈರಾಗ್ಯದ ಭಾವನೆಯನ್ನಾಗಲಿ ಪಶ್ಚಾತ್ತಾಪವನ್ನಾಗಲಿ ಈ ನಾಟಕಗಳು ಸೂಚಿಸಲಾರವು. ಪ್ರಣಯ ಸ್ವೈರವೃತ್ತಿ, ಮಾನವೀಯ ಅನುಕಂಪ ಈ ವಿವಿಧರ ಜೀವನ ಮೌಲ್ಯಗಳನ್ನು ನಾಟಕಕಾರ ಈ ನಾಟಕಗಳಲ್ಲಿ ಪ್ರತಿಪಾದಿಸಿದ್ದಾನೆ ಹಾಗೂ ಅವುಗಳ ಮಹತ್ವವನ್ನು ಸಾರಿದ್ದಾನೆ. "ಟೆಂಪೆಸ್ಟ್" ನಾಟಕವು ಮೇಲೆ ಹೇಳಿದ ತತ್ತ್ವಗಳಿಗೆ ಹಿಡಿದ ಕನ್ನಡಿಯಾಗಿದೆ. ಮುಗ್ಧತ್ವ, ಪ್ರಾಜ್ಞತೆ, ಪ್ರಸನ್ನ ಚಿತ್ತತೆ, ಪ್ರಶಾಂತ ವಾತಾವರಣದಲ್ಲಿ

ಮಾತ್ರ ಮಾನವನ ಜೀವನ ಪೂರ್ಣ ಅಭಿವೃದ್ಧಿ ಹೊಂದುವುದೆಂದು ಶೇಕ್ಸ್‌ಪಿಯರನ ಕೊನೆಯ ನಾಟಕಗಳು ಸ್ಪಷ್ಟ ಪಡಿಸುತ್ತವೆ. ಈ ನಾಟಕಗಳು ಜೀವನದಲ್ಲಿ ಗಂಭೀರತೆ ಜವಾಬ್ದಾರಿಗಳ ಮಹತ್ವವನ್ನು ಹೇಳುತ್ತವಲ್ಲದೇ ಹೊರತು ಜೀವನದ ನಿರಾಶೆಯನ್ನಲ್ಲ.

"ದಿ ವಿಂಟರ್ಸ್ ಟೇಲ್" ನಾಟಕವು ಇಂಗ್ಲೆಂಡಿನ ಹಳ್ಳಿಗಾಡಿನ ಬಗ್ಗೆ ನಾಟಕಕಾರನಿಗಿದ್ದ ಪರಿಜ್ಞಾನವನ್ನು ತಿಳಿಹೇಳುತ್ತದೆ. ಕುರಿಕಾಯುವವರ, ಹಳ್ಳಿಯ ಹೈದರ ಮುಗ್ಧ ಜೀವನ, ಸುಸ್ವಭಾವ, ಹೃದಯ ವೈಶಾಲ್ಯತೆ, ಅವರ ರಮ್ಯ ಪರಿಸರಗಳ ಬಗ್ಗೆ ನಾಟಕಕಾರ ತನ್ನ ಮೆಚ್ಚುಕೆಯನ್ನು ಸೂಚಿಸಿದ್ದಾನೆ. ಹಾಗೂ ಅವುಗಳಿಗೆ ಶರಣು ಹೋಗಿದ್ದಾನೆ ಎಂಬುದನ್ನು ನಾವು ಈ ನಾಟಕದ ಮುಖಾಂತರ ತಿಳಿಯುತ್ತೇವೆ. ಅವರ ಜೀವನವೇ ನಿಜವಾದ ಮಾನವ ಸಮಾಜ ಜೀವನ, ಪ್ರಕೃತಿ ದತ್ತವಾದದ್ದು; ಆಧುನಿಕ ಯುಗವು, ಥಳಕಿನ ಕ್ಷಣಿಕ ಅನೈಸರ್ಗಿಕ ಜೀವನದ ಸೋಂಕಿನಿಂದ ದೂರ ವಾದದ್ದು; ಹಾಗೂ ವಿಕೃತಿ, ವಿರೂಪವಾಗಿರದ್ದು ಎಂದು ಶೇಕ್ಸ್‌ಪಿಯರ್ ನಮಗೆ ಮಾರ್ಮಿಕವಾಗಿ ಹೇಳಿದ್ದಾನೆ. ತನ್ನ ಕಾಲದಲ್ಲಿ ಅವ್ಯಾಹತವಾಗಿ ನಡೆಯುತ್ತಿದ್ದ ಸಮುದ್ರ ಯಾನಗಳು, ಹೊಸ ವಸಾಹತುಗಳ ಸ್ಥಾಪನೆ, ನಡುಗಡ್ಡೆಗಳ ಶೋಧನೆ ಹಾಗೂ ನಾವಿಕರ ಘೋರ ಸಾಹಸ ಪ್ರದರ್ಶನಗಳು ಅವನ ಮನಸ್ಸಿನ ಮೇಲೆ ಪರಿಣಾಮವನ್ನುಂಟು ಮಾಡಿದ್ದವು.

ಹಾಗೂ ಅಪ್ಪನ ಬಂಡಾಯ ಅವರಿಗಿತ್ತು – ಏನಿತ್ತು ವಾ –
“..ಮಿತ್ರ” ನಾಟಕದ ಮುಖಾಂತರ ನಮಗೆ ತಿಳಿಯು
ಬರುತ್ತದೆ. ಈ ಜೀವನದಲ್ಲಿ ಬೇಕಾದುದಕ್ಕಿಂತಲೂ ಅವರ
ನಂಬಿಕೆ, ದೃಷ್ಟಿಗಳು ಹಾಗೂ ದೇಶದಲ್ಲಿ ಅವನ ಭಕ್ತಿ,
ಸಂಪತ್ತುಗಳು ಈ ನಾಟಕದ ಮುಖಾಂತರ ಹೊರಹೊಮ್ಮುತ್ತದೆ.

೮. ಶೇಕ್ಸಪೀಯರನ ನಾಟಕಗಳಲ್ಲಿ ಪ್ರಣಯ ಜೀವನ ದರ್ಶನ.

ಶೇಕ್ಸ್‌ಪೀಯರನು ತನ್ನ ನಾಟಕಗಳಲ್ಲಿ ಚಿತ್ರಿಸಿದ ಪ್ರಣಯ ಜೀವನದರ್ಶನವು ರಮ್ಯವಾಗಿದೆ. ಪ್ರಣಯದ ವಿಷಯವಾಗಿ ಅವನ ಮನೋವೃತ್ತಿ (ರೆಸ್ಟೋರೇಶನ್ ಯುಗದ ೧೮ನೇ ಶತಮಾನದ ನಾಟಕಕಾರರಾದ ಡಪೆಲ್, ಕಾನಗ್ರೀವ್ ಎಥರಿಜ್‌ಗಿಂತಲೂ ತೀರ ವಿರುದ್ಧ ಹಾಗೂ ಭಿನ್ನವಾಗಿದೆ. ರಮ್ಯಭಾವ, ರಸಿಕತೆ, ಉಲ್ಲಾಸ, ಭಾವೋನ್ಮಾದ, ಪ್ರಣಯ ದುರಂತ, ಗಾಂಧರ್ವ ಪ್ರಣಯ, ಪುನರ್ಮಿಲನ ಹೀಗೆ ನಾನಾ ವಿಧದ ಪ್ರಣಯ ದರ್ಶನವನ್ನು ಶೇಕ್ಸ್‌ಪೀಯರ್ ನಮಗೆ ಮಾಡಿಕೊಟ್ಟಿದ್ದಾನೆ. ಯೌವನದ ಹುಚ್ಚು ಹೊಳೆ, ಹುಚ್ಚು

ಬದಲಾಗುವ ಪ್ರಣಯದ ರೀತಿ ಹಾಗೂ ಮಾಗಿದ, ಪರಿಪಕ್ವವಾದ ವಿವೇಕಶೀಲತೆಯಿಂದ ಕೂಡಿದ ಪ್ರಣಯಗಳ ಪುನರ್ಮಿಲನ ಹೀಗೆ ವಿವಿಧ ಹಂತಗಳನ್ನು ನಾವು ಅವನ ನಾಟಕಗಳಲ್ಲಿ ಕಂಡುಕೊಳ್ಳುತ್ತೇವೆ.

ಪ್ರಣಯದ ವಿಚಾರದಲ್ಲಿ ಅವನು ಮಧ್ಯಕಾಲೀನ ಯುಗದ ಹಳೆಯ ಜಾಡನ್ನೇ ಹಿಡಿದು ಅದನ್ನೇನೂ ಪ್ರತಿಪಾದಿಸಿಲ್ಲ. ಹೆಣ್ಣು ಗಂಡುಗಳ ಸಂಬಂಧದ ವಿಷಯದಲ್ಲಿ ಅತನು ಹಳೆಯ ಮಧ್ಯ ಕಾಲೀನ ಯುಗದ ಸಂಪ್ರದಾಯಗಳ ಪುನರ್ ಪರಿಶೀಲನೆ, ಪುನರ್ ಮೌಲೀಕರಣ ಅಗತ್ಯವೆಂದು ತನ್ನ ನಾಟಕಗಳ ಮೂಲಕ ದೃಢ ಪಡಿಸಿದ್ದಾನೆ. ಎರಡು ಆತ್ಮಗಳ ಪರಸ್ಪರ ಸಮ್ಮಿಲನ ಹಾಗೂ ಗಾಢವಾದ ಪರಸ್ಪರ ಪ್ರೇಮಾನುರಾಗದ ವ್ಯಕ್ತಿಗಳು ಗಾಂಧರ್ವ ವಿವಾಹದ ಪದ್ಧತಿಯಲ್ಲಿ ಫಲಪ್ರದವಾಗುವವು ಎಂದು ಶೇಕ್ಸ್‌ಪಿಯರ್ ತನ್ನ ಗೇಯ ನಾಟಕಗಳ ಮುಖಾಂತರ ನಮಗೆ ಹೇಳಿದ್ದಾನೆ. ಕೇವಲ ಲೈಂಗಿಕ ಪ್ರೇಮ ನಿಜವಾದ ಪ್ರೇಮವಲ್ಲವೆಂದೂ ಅತನು ಹೇಳಿದ್ದಾನೆ.

ಮಧ್ಯಕಾಲೀನ ಯುಗದಲ್ಲಿ ಕಂಡು ಬರುವ ಪರನಾರೀ ಸಮ್ಮೋಹಕತೆ, ಸ್ತ್ರೀ ದಾಕ್ಷಿಣ್ಯತೆ, ಅವರ ಕಷ್ಟ ಕಾಲದಲ್ಲೂ ಅವರ ರಕ್ಷಣೆಗಾಗಿ ಕಂಕಣತೊಟ್ಟು ಅವರನ್ನು ಪಾರುಮಾಡಿ ಅವರ ಮನಸ್ಸನ್ನು ಗೆದ್ದುಕೊಂಡು ವಿವಾಹದಲ್ಲಿ ಅವರ

ಸಂಬಂಧ ಪರ್ಯವಸಾನ ಹೊಂದುವುದು ಇವೇ ಮೊದಲಾದವು
ಗಳಿಗೂ ಶೇಕ್ಸ್‌ಪಿಯರನ ನಾಟಕಗಳಲ್ಲಿ ಸ್ಥಾನವಿದೆ.

ನಾಟಕದಲ್ಲಿ ಟಾಮೋರಳ ಮಕ್ಕಳಾದ ಕೈರನ್,
ಡಿಮೀಟ್ರಿಯಸ್‌ರು ಸಾಧ್ವೀಮಣಿ ಲವಿನಿಯಾಳ ಹಟ
ಸಂಭೋಗ ಮಾನಭಂಗ ಮಾಡಿದ ಅನಾಗರಿಕ ದೃಶ್ಯ
ನಮ್ಮೆದುರಿಗೆ ಒಂದೆಡೆ ನಿಂತರೆ ಮತ್ತೊಂದೆಡೆ ಅಂತಹದೇ
ಅನಾಗರಿಕತೆಯ ಕೃತ್ಯವನ್ನು ಸಿಂಬೆಲಿನ್‌ದಲ್ಲಿಯ ಇಮೋಜಿನ
ಳನ್ನು ಕೆಡಿಸಲು ತಂತ್ರ ನಡೆಸುವ ದುರಾಚಾರಿ
ಇಯಾಕಿಮೋನ ಪಾತ್ರದಲ್ಲಿ ಕಂಡುಕೊಳ್ಳುತ್ತೇವೆ.
ಇದೇ ಸಿಂಬೆಲಿನ್ ನಾಟಕದಲ್ಲಿ ಇದಕ್ಕೆ ತದ್ವಿರುದ್ಧವಾಗಿ ಆಪ್ತ
ಸೇವಕ ಸುಗುಣಿಯಾದ ಪಿಸಾನಿಯೋ ತನ್ನ ಯಜಮಾನಿ
ಇಮೋಜಿನಳ ಗಂಡ ಪಾಸ್ತುಮಸ್ ತನ್ನ ಸೇವಕನಿಗೆ ಅವಳನ್ನು
ಕೊಲ್ಲಲು ಆಜ್ಞೆ ಮಾಡಿದ್ದರೂ ಪಿಸಾನಿಯೋನಲ್ಲಿ ಪರನಾರೀ
ಸಹೋದರತೆ, ಸ್ತ್ರೀ ದಾಕ್ಷಿಣ್ಯತೆ ಉಕ್ಕಿ ಹರಿಯುತ್ತದೆ. ಅವ-
ನೊಬ್ಬ ಮಧ್ಯಕಾಲೀನ ಯುಗದ ಸ್ತ್ರೀ ದಾಕ್ಷಿಣ್ಯತೆಯ ಸ್ವಭಾವದ
ಸರದಾರನಂತೆ ತನ್ನ ಸುಸ್ವಭಾವವನ್ನು ಎತ್ತಿ ತೋರಿಸಿದ್ದಾನೆ.

ಉಚ್ಚ ಕುಲದ ಸ್ತ್ರೀಯರು ತಮಗಿಂತ ಕಡಿಮೆ
ಕುಲದವರನ್ನು ಮದುವೆಯಾಗಿರುವುದನ್ನು ಶೇಕ್ಸ್‌ಪಿಯರನ
ನಾಟಕಗಳಲ್ಲಿ ನಾವು ಕಾಣುತ್ತೇವೆ. ಅವನ ಕಾಲದ
ಸಮಾಜದಲ್ಲಿ ಈ ರೀತಿಯ ಘಟನೆಗಳು ನಡೆದಿದ್ದವೋ ಇಲ್ಲವೋ
ಎಂಬ ವಿಷಯ ನಮಗೆ ಮುಖ್ಯವಾದುದಲ್ಲ. ಪ್ರೇಮಕ್ಕೆ

ಕುಲ ಯಾವುದು? ಪಂಥ ಯಾವುದು? ಪ್ರೇಮ ಕುರುಡು ಎರಡು ಹೃದಯಗಳು ಮಿಲನವಾದರೆ ಸರಿ. ಮೇಲು ಕೀಳುಗಳೆಂಬ ಭಾವನೆ ಪ್ರಣಯದ ಹಾದಿಯಲ್ಲಿ ಸುಳಿಯಲಾರವು ಸಿಂಬೆಲಿನ್ ದೊರೆಯ ಮಗಳಾದ ಇಮೋಜಿನಳು ಪಾಸ್ತುಮಸ್ ಎಂಬ ಸಾಮಾನ್ಯನನ್ನು ಮದುವೆಯಾಗುತ್ತಾಳೆ. ಆದರೆ ಪ್ರಣಯದ ಹಾದಿ ಸುಲಭವಾದುದಲ್ಲ. ಅನೇಕ ಎಡರು ತೊಡರುಗಳು, ತಪ್ಪು ತಿಳುವಳಿಕೆಗಳು ಅವರಿಬ್ಬರಲ್ಲೂ ಬಂದು ಕೊನೆಗೆ ಮುಸುಕು ಹರಿದು ಕತ್ತಲೆ ಹೋಗಿ ಪುನರ್ಮಿಲನ ವಾಗುತ್ತದೆ. ಪ್ರಣಯದ ವಿಚಾರದಲ್ಲಿ ಶೇಕ್ಸ್‌ಪಿಯರ್ ಮಾನವೀಯತೆ, ಜೀವನದ ಮೌಲ್ಯಗಳ ಪವಿತ್ರತೆ, ಸತ್ಯತೆಗಳಿಗೆ ಮಹತ್ವ ಕೊಟ್ಟಿದ್ದಾನೆ.

ಪ್ರಣಯ ದುರಂತದ ಸನ್ನಿವೇಶ ಚಿತ್ರ ನಮ್ಮ ಮನಸ್ಸಿನ ಮೇಲೆ ಅಗಾಧ ಪರಿಣಾಮವನ್ನುಂಟು ಮಾಡುತ್ತದೆ. ಅದುವೇ ರೋಮಿಯೋ ಜೂಲಿಯೆಟ್‌ರ ಪ್ರಣಯ ದುರಂತ. ಉದಾತ್ತ ದಿವ್ಯ ಪ್ರೇಮದ ಮಧುರ ಸ್ವೀಕಾರದ ಈ ಪ್ರೇಮಿಗಳ ಚಿತ್ರಣವಿದೆ. ಪ್ರೇಮಕ್ಕಾಗಿ ತಮ್ಮ ದೇಹತ್ಯಾಗ ವನ್ನೇ ಮಾಡಿದ ಅವರ ಪ್ರೇಮವನ್ನು ಸಾವಿನಲ್ಲಿ ಕಾಣುತ್ತೇವೆ.

ಪ್ರಣಯದಲ್ಲಿ ಅಸೂಯೆ, ಅನಾಗರಿಕತೆ, ಅತಿಕಾಮುಕತೆ, ದುಷ್ಟಾಚಾರಗಳನ್ನು ನಾವು ಟೈಟಸ್ ಅಂದ್ರೋನಿಕಸ್‌ದಲ್ಲಿ ಕಾಣುತ್ತೇವೆ. [illegible] ಕಥೆ ನಿಲ್ಲ. ಅದರಂತೆ [illegible] ಪತ್ನಿ, ಕ್ಲಿಯೋಪಾತ್ರ, ಸ್ವಭಾವತಃ

ಅವಳಿಗೂ ಬಹಳ ಸಾಮ್ಯ. ಪ್ರಣಯದ ಮುಖಾಂತರ ಸೇಡು ತೀರಿಸಿಕೊಳ್ಳುವ ಕಾಮುಕ ಸ್ವೇಚ್ಛಾಚಾರಿ ಅವಳಾಗಿದ್ದಾಳೆ.

ಇದೇ ಮಾದರಿಯ ಇನ್ನೊಂದು ಚಿತ್ರವನ್ನು (ಪ್ರಣಯ ದುರಂತ) ನಾವು ಆಂಟೋನಿ ಮತ್ತು ಕ್ಲಿಯೋಪಾತ್ರಳಲ್ಲಿ ಕಂಡು ಕೊಳ್ಳುತ್ತೇವೆ. ಒಬ್ಬ ಉದಾತ್ತ ರೋಮನ್ ಸೇನಾನಿ ಆಂಟೋನಿ ಸ್ತ್ರೀವ್ಯಾಮೋಹಕ್ಕೆ ಬಿದ್ದು ಅದರಿಂದಾಗಿ ತನ್ನ ನೈತಿಕ, ವ್ಯಕ್ತಿತ್ವ ಪತನವನ್ನು ಅನುಭವಿಸುತ್ತಾನೆ. ಕ್ಲಿಯೋಪಾತ್ರಾ ರಾಜಧೈರ್ಯ, ಅನುಕೂಲ ಸಂಧು, ಚತುರೆ, ಚಲುವೆ. ರೋಮಿನ ಚಕ್ರಾಧಿಪತಿಗಳಾದ ಸೀಝರ್, ಪಾಂಪೆ ಮೊದಲಾದವರನ್ನೇ ತನ್ನ ಕೈವಶ ಮಾಡಿಕೊಂಡ ಧೂರ್ತರಾಜ ವೇಶ್ಯೆ. ಇದು ಪ್ರಣಯದ ಮತ್ತೊಂದು ಚಿತ್ರ.

ಹೆಣ್ಣಿನ ಹುಚ್ಚು ಹಿಡಿದು ಹೊಲ ಮನೆ ಮಾರುಗಳನ್ನು ಮಾರಿಕೊಂಡ ಭಗ್ನ ಹೃದಯಿ ರೊಡರಿಗೋ, "ಅಥೆಲ್ಲೋ" ನಾಟಕದಲ್ಲಿ ಪ್ರಣಯದ ಮತ್ತೊಂದು ದೃಶ್ಯವನ್ನು ತೋರಿಸುತ್ತಾನೆ. ಡೆಸ್ಡಿಮೋನಳಿಗೋ ಇವನನ್ನು ಕಂಡರೆ ಆಗದು. ಆದರೆ ಅವಳ ಬಗ್ಗೆ ಹುಚ್ಚು ವ್ಯಾಮೋಹದಿಂದ ಅತ ತನ್ನ ವಿಫಲ ಯತ್ನ ನಡೆಸುತ್ತಾನೆ. ಅದೇ ನಾಟಕದಲ್ಲಿ ಡೆಸ್ಡಿಮೋನಳ ಕುರೂಪಿ ಮೂರ್ ಜಾತಿಯ ಅಥೆಲೋನ ಮೇಲಿನ ಪ್ರೇಮವು ಅದಕ್ಕೆದುರಾಗಿ ಅದನ್ನು ಕೆಡಿಸಲು ಇಯಾಗೋನಂಥ ಕ್ರೂರಿ, ತಂತ್ರಗಾರರ ಚಿತ್ರಗಳು ಪ್ರಣಯದ ಹಾದಿಯಲ್ಲಿ ಬರುತ್ತವೆ. ಒಟ್ಟಾರೆ ಹೇಳುವದಾದರೆ

ಶೇಕ್ಸ್‌ಪಿಯರ್ ಪ್ರೇಮದ ಎಲ್ಲೆಗಳೆಲ್ಲವನ್ನೂ ಬಲ್ಲ. ಒಂದೊಂದು ಒಂದೊಂದು ರೀತಿ, ವಿಧ. ಪ್ರಣಯದ ವಿಕಾರವಾದ ಅಸಹಜವಾದ, ರೂಪಗಳನ್ನು ಆತ ತನ್ನ ಗೇಯ ನಾಟಕಗಳಲ್ಲಿ ಗೇಲಿ ಮಾಡಿದ್ದಾನೆ. ಸತ್ಯವಾದ ಸೌಜನ್ಯವಾದ, ರಮ್ಯವಾದ ಪ್ರೇಮವು ಮನುಷ್ಯನನ್ನು ದೈವತ್ವಕ್ಕೆ ಏರಿಸುತ್ತದೆ ಎಂಬುವನ್ನು, ಪ್ರೇಮದ ಹುಚ್ಚು ಹೊಳೆ ಮನುಷ್ಯನನ್ನು ವಿವೇಕಹೀನತೆ, ನೈತಿಕ ಅಧಃಪತನ, ದುರಂತಕ್ಕೆ ಈಡು ಮಾಡುವದೆಂಬುದನ್ನೂ ಶೇಕ್ಸ್‌ಪಿಯರ್ ತನ್ನ ನಾಟಕಗಳಲ್ಲಿ ತೋರಿಸಿದ್ದಾನೆ.

"ಪೆರಿಕ್ಲಸ್"ದಲ್ಲಿ ಕೂಡ ಕಾಮುಕತೆ, ಅಸಹಜ ಪ್ರೇಮವನ್ನು ಅಂಟಿಯೋಕಸ್‌ನ ಪಾತ್ರದಲ್ಲಿ ಕಾಣುತ್ತೇವೆ. ಅಂಟಿಯೋಕಸ್ ತನ್ನ ಮಗಳಲ್ಲಿಯೇ ಅನೈತಿಕ ಅಸ್ವಾಭಾವಿಕವಾದ ಲೈಂಗಿಕ ಸಂಬಂಧವನ್ನು ಬೆಳೆಸಲು ಆತುರನಾಗಿದ್ದಾನೆ.

ಸ್ವಯಂವರ ಪದ್ಧತಿಯ ಕೆಲವು ದೃಶ್ಯಗಳೂ ಪೆರಿಕ್ಲಸ್‌ನಲ್ಲಿ ಕಾಣಸಿಗುತ್ತವೆ. ಪೆರಿಕ್ಲಸ್ ಯುದ್ಧ ಮಾಡಿ ತನ್ನ ಶೌರ್ಯದಿಂದ ಸೈಮನೈಡ್ಸನ ಮಗಳು ಥೈಸಳ ಮನಸ್ಸು ಗೆದ್ದು ಮದುವೆಯಾಗುತ್ತಾನೆ. ‘‘ದಿ ವಿಂಟರ್ಸ ಟೇಲ್“ ದಲ್ಲಿ ಕೂಡ ಮೊದಲ ನೋಟಕ್ಕೇ ಪ್ರೇಮಾಂಕುರವಾಗುವದನ್ನು ನಾವು ಪರ್ಡಿಟಾ — ಫ್ಲಾರಿಜೆಲ್‌ರ ಪಾತ್ರಗಳಲ್ಲಿ ಕಾಣುತ್ತೇವೆ. ಮುದಿಯಾದ ಪಾಲಕ್ಸಿನೀಸ್ ಅವರಿಬ್ಬರ ನಡುವೆ ಅಡ್ಡ ಬಂದು

ತನ್ನ ಮಗ ರಾಜಮನೆತನವನ್ನು ಕೀಳು ಮಾಡಿ ಕುರುಬತಿಯೊಬ್ಬಳನ್ನು ಮದುವೆಯಾದುದಕ್ಕೆ ಸಿಟ್ಟಾಗುತ್ತಾನೆ. ಆದರೆ ಅವರ ಪ್ರೇಮಕ್ಕೆ ಇದರಿಂದ ಚ್ಯುತಿಯಿಲ್ಲ. ಟೆಂಪೆಸ್ಟ್ ಕೂಡ ಇದಕ್ಕೆ ಹೊರತಾಗಿಲ್ಲ - ಮಿರಾಂಡ ಹಾಗೂ ಫರ್ಡಿನೆಂಡ್ ಒಬ್ಬರನ್ನೊಬ್ಬರು ಕಂಡೊಡನೆಯೇ ಪ್ರೀತಿಸುತ್ತಾರೆ.

ಗಂಡ - ಹೆಂಡಿರ ಸಂಬಂಧದ ವಿಷಯದಲ್ಲಿ ಶೇಕ್ಸ್‌ಪಿಯರನ ದೃಷ್ಟಿ ಕಾಲ್ಪನಿಕವಿಲ್ಲ, ಆದರೆ ವಾಸ್ತವ ವಾದದ್ದು. ನಿಜ ಜೀವನದಲ್ಲಿ ಗಂಡ - ಹೆಂಡಿರ ನಡುವೆ ಯಾವ ರೀತಿಯಲ್ಲಿ ನಾನಾ ವಿರಸ, ಭಿನ್ನಾಭಿಪ್ರಾಯ, ಮನಸ್ತಾಪಗಳ ವಿವಿಧ ಪ್ರಸಂಗಗಳನ್ನು ಕಾಣುತ್ತೇವೆಯೋ ಅದೇ ರೀತಿ ಅವನ ನಾಟಕಗಳಲ್ಲಿ ಕೂಡ ಜೀವನದ ವಾಸ್ತವಿಕತೆ ಸ್ಪಷ್ಟವಾಗಿ ಪ್ರತಿಬಿಂಬಿಸಿದೆ. "ದಿ ಕಾಮೆಡಿ ಆಫ್ ಎರರ್ಸ್" ದಲ್ಲಿ ಎಫಿಸಸ್‌ನ ಆಂಟಿಫೋಲಸ್‌ನದು ವಿರಸದ ದಾಂಪತ್ಯ. ಅವನ ಹೆಂಡತಿ ಸಂಶಯ ಪಿಶಾಚಿ. ಅವನೂ ಕೂಡ ಚಂಚಲ ಚಿತ್ತನೇ. ಅದೇ ರೀತಿ ಒಥೆಲೋ ಕೂಡ ಸಂಶಯಗ್ರಸ್ತ. ತನ್ನ ಹೆಂಡತಿಯ ಬಗೆಗೇ ಅವನಿಗೆ ಸಂಶಯ. ಸಾಧ್ವೀಮಣಿ ಡೆಸ್ಡಿಮೋನಳನ್ನು ಕೊಲ್ಲಲು ಹವಣಿಸುತ್ತಾನೆ. ಸಿಂಬೆಲಿನ್‌ನಲ್ಲಿ ಬರುವ ಕಥೆಯೂ ಹೀಗೆಯೇ ಇದೆ. ಪಾಸ್ತ್ಯುಮಸ್ ಹೆಂಡತಿ ಇಮೋಜನ್‌ಳ ಮೇಲೆಯೇ ಸಂಶಯ ತಾಳುತ್ತಾನೆ. ಗಂಡ ಹೆಂಡಿರ ಸಂಬಂಧ ಹೇಗೆ ಇರಬೇಕು ಎಂಬ ಬಗ್ಗೆ "ಟೇಮಿಂಗ್ ಆಫ್ ದಿ ಶ್ರೂ" ನಾಟಕದಲ್ಲಿಯು ಕ್ಯಾಥರೀನಳು

ಪತಿಭಕ್ತಿಯ ಬಗ್ಗೆ ಕೊಡುವ ಉಪದೇಶ ಬಹಳ ಮಾರ್ಮಿಕ ವಾಗಿವೆ. ಆ ನಾಟಕದಲ್ಲಿ ಬರುವ ಎರಡು ಪಾತ್ರಗಳು ರಂಜನೀಯವಾಗಿವೆ. ಗಯ್ಯಾಳಿ ಹೆಣ್ಣು ಪಳಗಿಸುವ ಛಲ ತೊಟ್ಟ 'ಗಂಡು ಈ ವಿರೋಧ ಭಾವನೆಗಳ ಗಂಡ ಹೆಂಡಿರ ಪಾತ್ರಗಳು ಬಹಳ ಮನೋರಂಜನೀಯವಾಗಿವೆ. ಕ್ಯಾಥರಿನ್ - ಪೆಟ್ರೂಶಿಯೋ ಆ ವಿಚಿತ್ರ ಗಂಡ-ಹೆಂಡಿರು ಗಳು. ಇಂಥ ಜೋಡಿಗಾರರು ಸಮಾಜದಲ್ಲಿ ಸಿಗುವದೇನೂ ಅಪರೂಪವೇನಲ್ಲ. "ಹ್ಯಾಮ್ಲೆಟ್" ನಾಟಕದಲ್ಲಿ ಕಂಡು ಬರುವ ಪ್ರಸಂಗವೇ ಬೇರೆ. ಹ್ಯಾಮ್ಲೆಟ್‌ನು ವಿವಾಹದ ವಿಷಯವಾಗಿ ಒಫೀಲಿಯಾಳಿಗೆ ಹೇಳುವ ಮಾತುಗಳು ಬಹಳೇ ಮಾರ್ಮಿಕವಾಗಿವೆ. "ಮದುವೆ ನೀನಾಗು ಪೊಡೆ ಸಲಿ ಪೆಸಿಡೋ ಬಳಾಪಳಯ, ನಿನ್ನ ರುಚಿ ಪಾವಿತ್ರ್ಯ ಬೆಳ್ಮಂಜಿ ನಂತಿರಲಿ ಲೋಕಾಪವಾದವದು ನಿನ್ನ ಬಿಡದಿಹದು." "ಮುನ್ನಾರಿಗೂ ಬೇಡ, ದಾಂಪತ್ಯವದು ಹೊಲ್ಲ ಮದುವೆ ಯಾದವರಲ್ಲಿ ಬದುಕಿಗೊಬ್ಬನು ಸಲ್ಲ."

"ಸಿಂಬೆಲಿನ್"ದಲ್ಲಿ ದೊರೆ ಸಿಂಬೆಲಿನ್ ತನ್ನ ಎರಡನೆಯ ಹೆಂಡತಿ ಹೇಳಿದಂತೆ ಕುಣಿಯುತ್ತಿದ್ದಾನೆ; ಅವಳ ಕೈ ಗೊಂಬೆಯಾಗಿದ್ದಾನೆ. ಅದೇ ರೀತಿ ಮ್ಯಾಕಬೆಥ್, ಅಂಟೋನಿಯೋರೂ ಕೂಡ ಹೆಣ್ಣಿನ ಕೈಗೊಂಬೆಗಳಾಗಿ ತಮ್ಮ ವಿವೇಕವನ್ನು ಕಳೆದು ಕೊಂಡಿದ್ದಾರೆ.

ಗಂಡ ಹೆಂಡಿರಲ್ಲಿ ಪರಸ್ಪರ ವಿರೋಧಾಭಾಸ ಅಳಿದು ವಿಶ್ವಾಸ, ಪ್ರೇಮಗಳು ಹುಟ್ಟದಾಗದೇ ಸಂಸಾರ ಸುಗಮ

ವಾಗಿ ನಡೆಯುತ್ತಿದ್ದವು ಎಂದು ಶೇಕ್ಸ್‌ಪಿಯರ್ ತನ್ನ ನಾಟಕದಲ್ಲಿ ತೋರಿಸಿದ್ದಾನೆ. ಇದಕ್ಕೆ ಹೊರತಾದರೆ ಸಂಸಾರ ದುರಂತದೆಡೆಗೆ ಸಾಗುತ್ತದೆ ಎಂಬುದನ್ನು ಅವನು ತನ್ನ ನಾಟಕಗಳ ಮುಖಾಂತರ ತೋರಿಸಿದ್ದಾನೆ. ಪ್ರೇಮದ ಪವಿತ್ರತೆಯೇ ಗಂಡ ಹೆಂಡಿರನ್ನು ಕಾಪಾಡುತ್ತದೆ. ಪ್ರೇಮಿಗಳಿಬ್ಬರ ಪ್ರಣಯ ಸುಸಂಬದ್ಧವಾದ ಮದುವೆಯಲ್ಲಿ ಪರ್ಯಾವಸಾನ ಹೊಂದಿದ್ದರೆ ಆ ಪ್ರೇಮ ಪ್ರಣಯಿಗಳಿಗೆ ಒಂದು ಪೂರ್ಣ ಮಾಧುರ್ಯ ಸ್ವರೂಪ ಬರುತ್ತದೆ ಎಂಬ ಮಾತನ್ನು ಶೇಕ್ಸ್‌ಪಿಯರ್ ಹ್ಯಾಮ್ಲೆಟ್, ಟೆಂಪೆಸ್ಟ್ ನಾಟಕಗಳ ಮೂಲಕ ನಮಗೆ ತಿಳಿಸಿದ್ದಾನೆ.

"ಸಿಂಬ್ಲಿನ್" ನಾಟಕದಲ್ಲಿಯೂ ಸಿಂಬ್ಲಿನ್‌ನ ಮಗಳು ಇಮೋಜನ್ ತಾನು ಎಂತಹ ಪ್ರಸಂಗದಲ್ಲಿಯೂ ಸತ್ಯಶೀಲ, ಪಾತಿವ್ರತ್ಯಶೀಲೆಯೇ ಎಂದು ತೋರಿಸಿದ್ದಾಳೆ. ಶೇಕ್ಸ್‌ಪಿಯರರಿಗೆ ಮಾನವನ ನೈತಿಕ ಸೌಂದರ್ಯಗಳ ಅರಿವು ಇದ್ದುದನ್ನು ಇವರಿಗೆ ಈ ಪಾತ್ರಸೃಷ್ಟಿಯು ವಿಶಿಷ್ಟವಾಗಿ ಸಾಕಾರ, ಬಗೆಯಾಗಿ ಪರಿಣಮಿಸಿದೆ. ಕ್ಲಿಯೋಪಾತ್ರ, ಡೆಸ್ಡಿಮೋನರಂಥವರು ಎಷ್ಟೊಂದು ಅನೀತಿವಂತರೋ ಅಷ್ಟೇ ಮರೀನಾ ಸದ್ಗುಣಿ, ನಿಷ್ಕಳಂಕಿನಿ. ಸೂಳೆ ಮನೆಯ ದೃಶ್ಯಗಳು ವಾಸ್ತವಿಕತೆಯ ದೃಷ್ಟಿಯಿಂದ ಗಮನಾರ್ಹವಾಗಿವೆ. ತಾನು ಸೂಳೆಯ ಮನೆ ಸೇರಿದರೂ, ಆ ವೃತ್ತಿಯನ್ನು ಅವಲಂಬಿಸದೆ, ಸುತ್ತಮುತ್ತಲಿನವರಿಗೇ ನೀತಿಬೋಧೆ ಮಾಡಿ,

ಹುಚರಾಗಿ ಬಂದವರನ್ನು ಗೃಹಸ್ಥರನ್ನಾಗಿ ಪರಿವರ್ತಿಸಿ ಕಳಿಸುತ್ತಾಳೆ. ಎಷ್ಟಾದರೂ ಹಂಸ ಹಾಸವಲ್ಲವೇ?

ಶೇಕ್ಸ್‌ಪಿಯರನ ಧರ್ಮದ ವಿಷಯವಾಗಿ ಸಾಕಷ್ಟು ಚರ್ಚೆ, ವಿವಾದಗಳು ಪ್ರಚಾರವಲ್ಲಿವೆ. ಅವೆಲ್ಲವುಗಳೂ ಬಲ್ಲವರನ್ನು ವಿವೇಚನಾಶೂನ್ಯರನ್ನಾಗಿ ಮಾಡುವವರಲ್ಲಿ ಸಂದೇಹವಿಲ್ಲ. ಕ್ಯಾಥೋಲಿಕ್ ಸಂಪ್ರದಾಯಕ್ಕೆ ಸೇರಿದ ಕ್ರೈಸ್ತ ಮತದ ಪ್ರಾಣಿಗಳು ಅವನು ತಮ್ಮ ಮತಕ್ಕೆ ಸೇರಿದವನೆಂದೂ, ಕ್ಯಾಥೋಲಿಕ್ ಪಂಥವನ್ನು ತನ್ನ ನಾಟಕಗಳಲ್ಲಿ ಪ್ರತಿಪಾದಿಸಿದ್ದಾನೆಂದೂ ಹೇಳಿಕೊಳ್ಳುತ್ತಿದ್ದಾರೆ. ಅದರಂತೆಯೇ ಪ್ರೊಟೆಸ್ಟಂಟ ಪಂಥದ ಅನುಭಾವಿಗಳು ಅವನು ತಮ್ಮ ಮತದವನೆಂದೂ ತಮ್ಮ ಮತವನ್ನೇ ಆತನು ತನ್ನ ನಾಟಕಗಳಲ್ಲಿ ಪ್ರತಿಪಾದಿಸಿದ್ದಾನೆಂದೂ ಅವರ ವಾದ. ಈ ಇತ್ತಂಡಗಳ ವಾದವನ್ನು ಕೇಳಿ ನಮಗೆ ನಿರಾಶೆ ಆಗುವದಲ್ಲದೇ ಬೇರೆ ಯಾವ ಬಗೆಯ ಭಾವನೆಗಳೂ ಅನುಕೂಲಕರವಾದ ಭಾವನೆಗಳು ಬರಲಾರವು. ಅವನ ಕಾಲದಲ್ಲಿದ್ದ ಕೆಥೋಲಿಕ್ ಪ್ರೊಟೆಸ್ಟಂಟರ ಕಲಹ, ದ್ವೇಷಗಳನ್ನು ಸೂಕ್ಷ್ಮವಾಗಿ ಶೇಕ್ಸ್‌ಪಿಯರ್ ತನ್ನ ನಾಟಕಗಳಲ್ಲಿ ತಿಳಿಸಿಲ್ಲ. ಅದರ ವಿಷಯವಾಗಿ ಅವನು ಅಷ್ಟೊಂದು ಗಮನವನ್ನು ವಹಿಸಿಲ್ಲ. ಆದರೆ " ಮ್ಯಾಕಬೆಥ್ " ನಾಟಕದಲ್ಲಿಯ ಪೋರ್ಟರ್ ಬಾಗಿಲು ಕಾಯುವ ಪೇದೆಯ ಮಾತುಗಳು ಕ್ಯಾಥೋಲಿಕ್ ಜನರ ಅವಹೇಳನವನ್ನು ಮಾಡುವಂಥವುಗಳಾಗಿವೆ. ಆ ಪಂಥದವರು ಪ್ರವರ್ತಿಸಿದ ಎರಡು

ಹೂಡಿದ ಒಳಸಂಚಿನಿಂದ ಇಂಗ್ಲಂಡಿನ ಸಾಮಾನ್ಯ ಪ್ರಜೆಗಳು ಸ್ವಾಭಾವಿಕವಾಗಿ ಅವರ ವಿರುದ್ಧ ದಂಗೆ ಎದ್ದರು. ನಾಟಕಕಾರ ಈ ಜನರ ಭಾವನೆಗಳನ್ನು ಮಾರ್ಮಿಕವಾಗಿ ತನ್ನ ನಾಟಕಗಳಲ್ಲಿ ವ್ಯಕ್ತ ಪಡಿಸಿದ್ದಾನೆ. ಚಕ್ರವರ್ತಿನಿ ಈ ಕಾಲದಲ್ಲಿ ಪರಧರ್ಮ ಸಹಿಷ್ಣುತಾ ಮನೋಭಾವವನ್ನು ತಳೆದಿದ್ದರಿಂದಲೇ ಹೆಚ್ಚಿನ ವಿಷಮ ಪರಿಸ್ಥಿತಿ ಉದ್ಭೂತವಾಗಲಿಲ್ಲ. ಇದೇ ವೇಳೆಗೆ ಇಂಗ್ಲಂಡದಲ್ಲಿ ತಲೆ ಎತ್ತಿದ ಪ್ಯೂರಿಟನ್ ಸಂಪ್ರದಾಯವಾದಿಗಳ ಪಾರಮಾರ್ಥಿಕವಾದವು ಇಂಗ್ಲಂಡಿನ ಜನರಿಗೆ ಸರಿ ಕಾಣಲಿಲ್ಲ. ಅವರ ಕೃತ್ರಿಮ, ಅತಿರೇಕದ ವರ್ತನೆಯನ್ನು ಮಾತ್ರ ನಾಟಕಕಾರ "ಹನ್ನೆರಡು ರಾತ್ರಿಗಳು" ಈ ಕೃತಿಯಲ್ಲಿ ಖಂಡಿಸಿದ್ದಾನೆ. ಯಾವದೇ ಪಂಥವನ್ನು ಆತನು ಹೀಯಾಳಿಸಲಿಲ್ಲ. ಆದರೆ ಪ್ರತಿಯೊಂದು ಪಂಥದ ಅವಗುಣಗಳನ್ನು ಮಾತ್ರ ಅವನು ತನ್ನ ನಾಟಕಗಳ ಮುಖಾಂತರ ಟೀಕೆಗೆ ಗುರಿಪಡಿಸಿದ್ದಾನೆ. ಇಲ್ಲಿಯೂ ಕೂಡ ಅವನ ಹಂಸಕ್ಷೀರ ನ್ಯಾಯತೆ ವ್ಯಕ್ತವಾಗುತ್ತದೆ. ಕೊನೆಯದಾಗಿ ಹೇಳುವದಾದರೆ ಶೇಕ್ಸ್‌ಪೀಯರ್ ಸಮತಾವಾದಿ ಹಾಗೂ ಪರಧರ್ಮ ಸಹಿಷ್ಣು. ಆಗಿನ ಕಾಲದ ಯಾವದೇ ಪಂಥದ ಗಾಳಕ್ಕೂ ಸಿಲುಕಲಾರದ ಮೇಧಾವಿ ಅವನಾಗಿದ್ದನು. ಅವನು ಪ್ರತಿಪಾದಿಸಿದ ಧರ್ಮ ಮಾನವ ಧರ್ಮ-ಪ್ರಕೃತಿ ಧರ್ಮ.

೯. ಉಪಸಂಹಾರ

ಶೇಕ್ಸ್‌ಪೀಯರ್ ಮಹಾಶಯನ ನಾಟಕಗಳನ್ನು ಜೀರ್ಣಿಸಿಕೊಂಡ ನಂತರ ನಮಗೆ ಕಂಡು ಬರುವ ಮುಖ್ಯ ಅಂಶವೆಂದರೆ ಈ ಜಗತ್ತಿನ ಜೀವನದ ಬಗ್ಗೆ ಅವನಿಗಿದ್ದ ಅಪಾರ ಶ್ರದ್ಧೆ ಹಾಗೂ ಆಳವಾದ ಜ್ಞಾನ. ಹಾಗಾದರೆ ಶೇಕ್ಸ್‌ಪೀಯರ್ ತನ್ನ ನಾಟಕಗಳ ಮೂಲಕ ಇಂದಿನ ಪ್ರಚಲಿತ ಜನಾಂಗಕ್ಕೆ ನೀಡಿರುವ ಸಂದೇಶವಾವುದು? ಎಂಬ ಪ್ರಶ್ನೆ ಉದ್ಭೂತವಾಗುತ್ತದೆ. ಅದಕ್ಕೆ ಉತ್ತರವೂ ಕೂಡ ಅಷ್ಟೊಂದು ಜಟಿಲವಾಗಿಲ್ಲ. ಅವನ ನಾಟಕಗಳ ಕೂಲಂಕಷ ಅಧ್ಯಯನ ಮಾಡಿದವರಿಗೆ ಏನೇನೂ ಒಡೆಯಲಾರದ

ಒಗಟೇನೂ ಅಲ್ಲ. ಶೇಕ್ಸ್‌ಪಿಯರ್ ತಾನು ಹೇಳಬೇಕಾದ್ದನ್ನು ಪ್ರತ್ಯಕ್ಷ ಬಹಿರಂಗವಾಗಿ ತನ್ನ ಯಾವ ಕೃತಿಗಳಲ್ಲೂ ಹೇಳಿಲ್ಲ. ಅವನ ನಾಟಕಗಳಲ್ಲಿರುವ ವಿವಿಧ ಪಾತ್ರಗಳ ಪರಿಚಯ ಅವರ ಮಾತುಗಳಿಂದಲೇ ನಾವು ಅವನ ಸಂದೇಶ, ಅಭಿಪ್ರಾಯಗಳನ್ನು ತಿಳಿಯಬೇಕೇ ಹೊರತು ಪ್ರತ್ಯಕ್ಷವಾಗಿ ಅವನು ಏನು ಹೇಳಿದ್ದಾನೆಂಬುದನ್ನು ತಿಳಿಯುವುದು ಸಾಧ್ಯವಿಲ್ಲ. ತನ್ನ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ವ್ಯಕ್ತಪಡಿಸುವ ಅವಕಾಶ ಅವನ ಕಾಲದಲ್ಲಿ ಇರಲಿಲ್ಲ. ಪ್ರಜಾ ಪ್ರಭುತ್ವದಲ್ಲಿ ಕಂಡು ಬರುವ ವಾಕ್‌ಸ್ವಾತಂತ್ರ್ಯ, ಪತ್ರಿಕಾಸ್ವಾತಂತ್ರ್ಯಗಳೇನೂ ಇರಲಿಲ್ಲ. ಶೇಕ್ಸ್‌ಪಿಯರ್ ತನ್ನ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಘೋಷಿಸಲು ಬರುವಂತೇನೂ ಇರಲಿಲ್ಲ. ಆದರೆ ಅದೇ ವೇಳೆಗೆ ಮಾನವ ಸಹಜವಾದ ಭಾವನೆ. ಅಭಿಪ್ರಾಯಗಳನ್ನು ತನ್ನ ಹೃದಯದಲ್ಲಿ ಅದುಮಿ ಕೊಳ್ಳಲು ಸಾಧ್ಯವಾಗಲಿಲ್ಲ. ಏಕೆಂದರೆ ಅವನ ವಿಶಾಲವಾದ ದೃಷ್ಟಿಕೋನ ಸಮಾಜದ ನಿರಂತರವಾದ ಲೋಪದೋಷಗಳನ್ನೂ ರೀತಿ ನಡತೆಗಳನ್ನೂ ಕಂಡು ಕೊಂಡಿತ್ತು. ಆತನ ದೃಷ್ಟಿಕೋನದ ತೀಕ್ಷ್ಣ ಕಿರಣಗಳಿಂದ ಸಮಾಜದ ಯಾವದೇ ಭಾಗವು ಪಾರಾಗುವಂತಿರಲಿಲ್ಲ. ಅಂಥ ಸಂದರ್ಭದಲ್ಲಿ ಶೇಕ್ಸ್‌ಪಿಯರ್ ತನ್ನ ಭಾವನೆಗಳನ್ನು ಪ್ರಕಟಗೊಳಿಸದಿದ್ದರೆ ತನ್ನ ಕರ್ತವ್ಯಕ್ಕೆ ವಿಮುಖನಾದಂತಾಗುವದೆಂದು ಅವನಿಗೆ ಭಾವನೆ ಉಂಟಾಗಿರಬಹುದು. ಅದಕ್ಕೆಂದೇ ಅನೇಕ ಪಾತ್ರಗಳನ್ನು ಸೃಷ್ಟಿಸಿ ಪಾತ್ರಗಳ ಸಹಜತೆಗನುಗುಣವಾಗಿ ಸಂಭಾಷಣೆ ಹೆಣೆದು

ಬಹು ಕಲಾಕೌಶಲ್ಯದಿಂದ ತಾನು ಆಗಿನ ಸಮಾಜದ ವಿರೋಧವನ್ನು ತಡೆಗಟ್ಟಲು ಪ್ರಯತ್ನ ಪಟ್ಟಿದ್ದಾನೆ. ಅವನ ಈ ಕಲಾಪ್ರೌಢಿಮೆ ಸಾಕಷ್ಟು ಯಶಸ್ವಿಯಾಗಿದೆ. ಮಾನವ ಸಹಜವಾದ ಲೋಪದೋಷಗಳನ್ನೂ ಪಾತ್ರಗಳ ಮುಖಾಂತರ ನಿದರ್ಶಿಸಿ ಜನತೆಯು ಯಾವುದು ತಪ್ಪು ಯಾವುದು ಒಪ್ಪು ಮುಂತಾದವುಗಳನ್ನು ನಿರ್ಧರಿಸಲಿ ಎಂಬುವನ್ನು ಶೇಕ್ಸ್‌ಪಿಯರ್ ತನ್ನ ನಾಟಕಗಳಲ್ಲಿ ತೋರಿಸಿ ಕೊಟ್ಟಿದ್ದಾನೆ. ಆತನ ಸಮಕಾಲೀನನಾದ ಬೆನ್ ಜಾನ್ಸನ್‌ನ ನಾಟಕಗಳಲ್ಲಿ ಕಂಡು ಬರುವ ಸಮಾಜದ ಕಟು ಟೀಕೆ ಶೇಕ್ಸಪಿಯರನ ನಾಟಕಗಳಲ್ಲಿ ಕಂಡು ಬರಲಾರದು. ಶೇಕ್ಸ್ಪಿಯರ ಸಮಾಜದ ಕಟು ಟೀಕೆ ಮಾಡುವದಕ್ಕೆ ತನ್ನ ನಾಟಕಗಳನ್ನು ಮೀಸಲಾಗಿಡಲಿಲ್ಲ. ಒಂದು ವೇಳೆ ಹಾಗೇ ಇದ್ದರೆ ಅವನ ನಾಟಕಗಳು ಇಂದಿಗೆ ಜನಪ್ರಿಯವಾಗುತ್ತಿರಲಿಲ್ಲ. ಬೆನ್ ಜಾನ್ಸನ್‌ನ ನಾಟಕಗಳಂತೆ ಅವನ ನಾಟಕಗಳೂ ಎಂದೋ ನಿರ್ಲಕ್ಷಿಸಲ್ಪಡುತ್ತಿದ್ದವು. ಸಮಾಜದ ಕಟು ಟೀಕೆ ಶೇಕ್ಸ್ಪಿಯರನ ನಾಟಕದಲ್ಲಿ ವಿನೋದ, ರಮ್ಯ ನಾಟಕಗಳಾಗಿ ಪರಿವರ್ತಿಸಲ್ಪಟ್ಟಿವೆ. ಬೆನ್ ಜಾನ್ಸನ್‌ನ ನಾಟಕದಲ್ಲಿ ಕಂಡು ಬರುವ ಮಾತುಗಳ ಆಡಂಬರ ಕೃತ್ರಿಮತೆ ಶೇಕ್ಸ್ಪಿಯರನಲ್ಲಿ ಕಂಡು ಬರಲಾರದು. ಶೇಕ್ಸ್ಪಿಯರನಿಗೆ ಆಗಿನ ಕಾಲದ ಪ್ರಚಲಿತ ನಾಟಕ ಸಾಹಿತ್ಯದ ಅರಿವು ಚೆನ್ನಾಗಿಯೇ ಇತ್ತು. ಅವುಗಳಲ್ಲಿ ಕಂಡು ಬರುವ ಸಮಾಜದ ಕಟು ಟೀಕೆ, ಕಟು ಹಾಸ್ಯಗಳೂ ಅವನ ಮನಸ್ಸಿನ ಮೇಲೆ ಸಾಕಷ್ಟು ಪ್ರಭಾವ ಬೀರಿರಲಿಕ್ಕೆ ಸಾಕು

ಅಂತೆಯೇ ಅವನ ನಾಟಕಗಳಲ್ಲಿ ಹಾಸ್ಯ ಟೀಕೆ, ವಿನೋದ, ರಮ್ಯತೆ ಮಾನವ ಸಹಜವಾದ ಹಾಸ್ಯವಾಗಿ ಮಾರ್ಪಡಿಸಲ್ಪಟ್ಟಿದೆ.

ಇಂದಿನ ಈ ಸಮಾಜ ಅನೇಕ ಸಮಸ್ಯೆ, ಲೋಪ ದೋಷಗಳಿಂದ ಜರ್ಜರಿತವಾಗಿದೆ. ನಾಗರಿಕತೆಯ ಸೋಗಿನಲ್ಲಿ ಅನಾಗರಿಕತೆ ಮಾತ್ರ ಪ್ರವೇಶಿಸಿದೆ. ಇದೊಂದು ಮಹಾ ಪರ್ವಕಾಲ. ಯುದ್ಧದ ಬೆದರಿಕೆ ಒಂದು ಕಡೆ, ಬಡತನದ ಕೂಗು ಮತ್ತೊಂದು ಕಡೆ, ಶ್ರೀಮಂತಿಕೆಯ ಲಾಸ್ಯ, ಹುಚ್ಚುಹೊಳೆ ಮಗದೊಂದು ಕಡೆ ಹೀಗೆ ಅನೇಕ ವಿಪ್ಲವಗಳಿಂದ ಬಳಲುತ್ತಿರುವ ಇಂದಿನ ಜಗತ್ತಿಗೆ ಶೇಕ್ಸ್‌ಪೀಯರ್ ತನ್ನ ಸಂದೇಶವನ್ನು ನೀಡಿದ್ದಾನೆ. ಆ ಸಂದೇಶವೆಂದರೆ ಮಾನವೀಯತೆಯನ್ನೇ ಕಳೆದುಕೊಂಡ ಕಂಗೆಟ್ಟ ಆಧುನಿಕ ಜಗತ್ತಿಗೆ ಮಾನವೀಯತೆಯ ಸಂದೇಶವನ್ನು ನೀಡಿದ್ದಾನೆ. ಮಾನವ ತನ್ನ ಬಂಧುಗಳೊಡನೆ ವಿಶ್ವಾಸ, ಪರಸ್ಪರ ಪ್ರೇಮದಿಂದ ಇದ್ದರೆ ಮಾತ್ರ ಅವಕ್ಕೆ ಪರಿಪೂರ್ಣತೆ ಬರುತ್ತದೆ, ಹಾಗೂ ಸುಖ ಶಾಂತಿಯು ಲಭ್ಯವಾಗುತ್ತದೆ. ಇಲ್ಲದಿದ್ದರೆ ಅಶಾಂತಿ, ಅತೃಪ್ತಿ ತಲೆದೋರುತ್ತದೆ, ಎಂದು ಶೇಕ್ಸ್‌ಪೀಯರ್ ತನ್ನ ನಾಟಕಗಳ ಮೂಲಕ ಜನರಿಗೆ ವಿದಿತ ಪಡಿಸಿದ್ದಾನೆ. ಮಾನವ ತಾನು ಯಾರು ಎಂಬುದನ್ನು ಎಲ್ಲಿಯ ವರೆಗೆ ಅರಿತು ನಡೆಯುವದಿಲ್ಲವೋ ಅಲ್ಲಿಯ ವರೆಗೆ ಸಮಾಜದಲ್ಲಿ ಮಾನವೀ

ಯಂತೆ ಕಂಡು ಬರಲಾರದು ಎಂದು ಆತನ ನಾಟಕಗಳು ಸ್ಪಷ್ಟ ಪಡಿಸಿವೆ. ಮಾನವ ಸಮಾಜದ ಮೂಲತತ್ವಗಳ ಪ್ರತಿಪಾದನೆ ಅವನ ನಾಟಕಗಳಿಂದ ಕಂಡು ಬರುತ್ತದೆ. ಪ್ರತಿಯೊಬ್ಬ ಮನುಷ್ಯನಿಗೆ ತನ್ನದೇ ಆದ ಸ್ಥಾನ ಸಮಾಜದಲ್ಲಿದೆ. ಆತನು ಸಮಾಜದ ಏಳ್ಗೆಗೆ ಯಥಾಸಾಧ್ಯ ಪ್ರಯತ್ನಿಸಲು ಸಿದ್ಧನಿರುತ್ತಾನೆ. ಮಾನವ ಸಮಾಜದಲ್ಲಿ ಪರಸ್ಪರ ಐಕ್ಯ ತಿಳುವಳಿಕೆ ಬಂಧುರತೆಗಳು ತಾವಾಗಿಯೇ ಮೂಡಿರಬೇಕು. ಸಮಾಜದಲ್ಲಿ ಉಚ್ಚ, ನೀಚ ವರ್ಗಗಳಿಗೆ ಸ್ಥಾನವಿಲ್ಲ. ಇವೇ ಮೊದಲಾದ ಸಂದೇಶಗಳು ಶೇಕ್ಸ್‌ಪಿಯರನ ನಾಟಕಗಳಲ್ಲಿ ನಮಗೆ ಕಾಣ ಸಿಗುತ್ತವೆ. ಅವನ ಕೃತಿಗಳು ವಿಶ್ವ ಸಾಹಿತ್ಯದ ಮೈಲುಗಲ್ಲುಗಳಾಗಿವೆ. ಅವು ಇಂಗ್ಲಂಡ ದೇಶಕ್ಕಷ್ಟೇ ಸೀಮಿತವಾಗಿಲ್ಲ. ಅಥವಾ ಅವನು ತನ್ನ ಜನರಿಗೋಸ್ಕರವಾಗಿ ಮಾತ್ರ ಬರೆದಿಲ್ಲವೆಂಬುದೂ ತಪ್ಪು ಭಾವನೆ.

ಕೆಲ ವಿಮರ್ಶಕರ ಅಭಿಪ್ರಾಯವೇನೆಂದರೆ ಶೇಕ್ಸ್‌ಪಿಯರ್ ಸಾಮಾನ್ಯ ಮಾನವನನ್ನು ತನ್ನ ಕೃತಿಗಳಲ್ಲಿ ಅಲಕ್ಷಿಸಿದ್ದಾನೆ ಹಾಗೂ ಹೀಯಾಳಿಸಿದ್ದಾನೆ. ಆದರೆ ಈ ಅಭಿಪ್ರಾಯ ಸತ್ಯಕ್ಕೆ ದೂರವಾದದ್ದು. ಆಗಿನ ಕಾಲದಲ್ಲಿ ಸಾಮಾನ್ಯ ಮಾನವನಿಗೆ ಯಾವದೇ ಗೌರವ ಸಿಕ್ಕುತ್ತಿರಲಿಲ್ಲವೆಂಬುದು ನಿಜ. ಏಕೆಂದರೆ ಅದು ರಾಜಪ್ರಭುತ್ವದ ಕಾಲ. ಸಮಾಜದ ಉಚ್ಚ ವರ್ಗದವರಿಗೆ ಮಾತ್ರ ಪ್ರಾಶಸ್ತ್ಯ, ಗೌರವಗಳಿದ್ದವು. ಸಾಮಾನ್ಯ ಮಾನವನನ್ನು ರಾಜಪ್ರಭುತ್ವದವರು ಕಡೆಗಣಿಸಿದ್ದರು. ಹೀಗಾದ ಮಾತ್ರಕ್ಕೆ

ಶೇಕ್ಸ್‌ಪಿಯರ್ ಸಾಮಾನ್ಯ ಜನರನ್ನು ದೂಷಿಸುತ್ತಿದ್ದನು ಎನ್ನುವ ಮಾತು ತಪ್ಪು. ತನ್ನ ಕಾಲದಲ್ಲಿದ್ದ ಸಾಮಾಜಿಕ ವಾತಾವರಣವನ್ನು ನಮ್ಮೆದುರಿಗೆ ಇಡಲು ಪ್ರಯತ್ನಿಸಿದ್ದಾನೆಯೇ ಹೊರತು ಶೇಕ್ಸ್‌ಪಿಯರ್ ಸಾಮಾನ್ಯ ಜನರನ್ನು ದೂಷಿಸಿಲ್ಲ. ಅವನ ನಾಟಕಗಳಲ್ಲಿಯ ಅನೇಕ ಪಾತ್ರಗಳು ಸಮಾಜದ ಕೆಳವರ್ಗಕ್ಕೇ ಸಂಬಂಧಿಸಿದವುಗಳು. ಅಂಥ ಪಾತ್ರಗಳೇ ನಮ್ಮಲ್ಲಿ ಕುತೂಹಲ, ವಿನೋದ, ಬಂಧುರ ಭಾವನೆಗಳನ್ನು ಕೆರಳಿಸಲು ಸಹಾಯಕಾರಿಯಾಗಿವೆ. ಅಂದ ಬಳಿಕ ಶೇಕ್ಸ್‌ಪಿಯರ್ ಸಾಮಾನ್ಯ ಜನರನ್ನು ದೂಷಿಸುತ್ತಿದ್ದನು ಎನ್ನುವ ವಿಮರ್ಶಕರ ಭಾವನೆ ಸತ್ಯಕ್ಕೆ ದೂರವಾದುದು. ಮಾನವೀಯತೆಯಲ್ಲಿ ಅಪಾರ ಶ್ರದ್ಧೆಯುಳ್ಳವನು, ಸಾಮಾನ್ಯ ಜನರನ್ನು ದೂಷಿಸುತ್ತಿದ್ದನೆಂಬುದು ನಂಬಲಾರದ ಮಾತು.

ಶೇಕ್ಸ್‌ಪಿಯರನಿಗೆ ತನ್ನ ನಾಟಕಗಳಲ್ಲಿ ಸಾಮಾಜಿಕ ಸಮಸ್ಯೆಯ ವಿವಿಧ ರೂಪಗಳನ್ನು ಪ್ರೇಕ್ಷಕರ, ಓದುಗರ ಮುಂದೆ ಇಟ್ಟು ಅವರಿಂದಲೇ ವಿವಿಧ ಸಮಸ್ಯೆಗಳಿಗೆ ತಮ್ಮ ಅಭಿಪ್ರಾಯಗಳನ್ನು ಪಡೆದುಕೊಳ್ಳುವ ಒಂದು ಕಾತರತೆ ಇತ್ತು. ಹೀಗಾಗಿ ಅವನ ಸಾಮಾಜಿಕ ಪ್ರಜ್ಞೆಯಲ್ಲಿ ಮುಖ್ಯವಾಗಿ ತಿಳಿದುಕೊಳ್ಳಬೇಕಾದ ವಿಷಯವೇನೆಂದರೆ ಅದು ಒಂದು ಜಾಗೃತ ಪ್ರಯಾಣವಲ್ಲ. ನಮ್ಮಲ್ಲಿ ಕೂಡ ಸಾಮಾಜಿಕ ಸಮಸ್ಯೆಗಳ ಅರಿವು ಚೆನ್ನಾಗಿ ಇರಬೇಕಾದದ್ದು ಅವಶ್ಯ. ಇಂಗ್ಲೆಂಡಿನಲ್ಲಿ ದುಃಖ, ಚಿಕಿತ ಅವನು ಇಂಗ್ಲೆಂಡದ ಜನರ ದೃಷ್ಟಿಕೋನದಿಂದ ತನ್ನ ನಾಟಕಗಳನ್ನು ಬರೆದಿದ್ದಾನೆ.

ಅವನ ಸಾಮಾಜಿಕ ಪ್ರಜ್ಞೆಯೆಂವರೆ ಅವನ ದೃಷ್ಟಿ ಕೋನ. ಬೇಕನ್, ಬೆನ್ ಜಾನ್ಸನ್, ಸ್ಪೆನ್ಸರ್, ಮಾರ್ಲೋ, ಗ್ರೀನ್, ಲಿಲೀಗಳಂಥ ಮಹಾ ಮುತ್ಸದ್ದಿಗಳನ್ನು ಪಡೆದ ಆಗಿನ ಕಾಲದ ಇಂಗ್ಲಂಡ ಸಾಹಿತ್ಯ, ಕಲೆ, ಸಂಸ್ಕೃತಿಗಳಲ್ಲಿ ಮುಂದುವರಿದ ಜನಾಂಗವಾಗಿತ್ತು. ಮೇಲೆ ಹೇಳಿದ ಮಹನೀಯರ ಜೀವನ, ನಾಟಕಗಳು ಜನತೆಯ ಮೇಲೆ ಪರಿಣಾಮವನ್ನುಂಟು ಮಾಡಿದ್ದವು. ಆಗಿನ ಕಾಲದ ಜನರಿಗೆ ಇರಬೇಕಾದ ಸಾಮಾನ್ಯ ಪರಿಜ್ಞಾನದ ಜೊತೆಗೆ ಮಾನವನ ಮನಸ್ಸಿನ ಕಾರ್ಯಕ್ಷೇತ್ರ, ಅದು ಕೆಲಸ ಮಾಡುವ ಬಗೆಗಳ ಬಗ್ಗೆ ಶೇಕ್ಸಪೀಯರನಿಗೆ ಸಾಕಷ್ಟು ಪರಿಜ್ಞಾನವಿತ್ತು. ಈ ವಿಷಯವನ್ನು ಅವನ ನಾಟಕಗಳೇ ನಮಗೆ ಸಿದ್ಧ ಮಾಡಿ ತೋರಿಸುತ್ತವೆ. ಇಂಗ್ಲಂಡ ದೇಶದ ಜನರ ದೃಷ್ಟಿಕೋನ ಹಾಗೂ ವಿಶ್ವಮಾನವತೆಯ ದೃಷ್ಟಿಕೋನಗಳು ಅವನ ಸಾಮಾಜಿಕ ಪ್ರಜ್ಞೆಯ ಎರಡು ಮುಖಗಳು. ಅವು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಈ ಎರಡು ಮುಖಗಳು ಅಥವಾ ದೃಷ್ಟಿಕೋನಗಳು ವಿಕಾರವಾಗಿಲ್ಲ, ಅಥವಾ ಕಲುಷಿತವಾಗಿಲ್ಲ. ಮಾನವನ ಜೀವನ ಹಾಗೂ ನಿಸರ್ಗಗಳೆಷ್ಟು ಸಹಜವಾಗಿವೆಯೋ ಅಷ್ಟೇ ಸಹಜವಾಗಿದೆ ಅವನ ದೃಷ್ಟಿಕೋನ.

'ನಾವು ಪ್ರೇಕ್ಷಕರಾಗಲಿ ಅಥವಾ ಓದುಗರಾಗಲಿ ಶೇಕ್ಸಪೀಯರನ ನಾಟಕಗಳನ್ನು ವೀಕ್ಷಿಸಿ ಓದಿದ ಮೇಲೆ ಅವನ ನಾಟಕಗಳು ನಮ್ಮ ಅನುಭವಗಳಿಗೆ ಕನ್ನಡಿ ಹಿಡಿದಿವೆ

ಎಂಬುದನ್ನು ನಾವು ತುಲನಾತ್ಮಕವಾಗಿ ವಿವೇಚನೆ ಮಾಡಿದರೆ ಗೊತ್ತಾಗದಿರದು. ನಮ್ಮ ನಿತ್ಯ ಜೀವನದ ಅನುಭವಗಳನ್ನು ಅವನ ನಾಟಕಗಳಲ್ಲಿ ಕಂಡು ನಾವು ಆಶ್ಚರ್ಯ ಪಡಬೇಕಾದ ಅಗತ್ಯವಿಲ್ಲ. ಅದರ ಬದಲು ನಾವು ಪ್ರಭಾವಿತರಾಗುತ್ತೇವೆ. ಶೇಕ್ಸಪೀಯರ್ ನಮ್ಮ ಭಾವನೆ, ಅನುಭವಗಳನ್ನು ಅರ್ಥ ಮಾಡಿಕೊಂಡಿದ್ದನೆಂಬುದಕ್ಕೆ ಇದಕ್ಕಿಂತ ಹೆಚ್ಚಿನ ಸಾಕ್ಷಿ ಪುರಾವೆಗಳೇತಕ್ಕೆ? ಈ ಜೀವನದ ಅನುಭವಗಳು, ಭಾವನೆಗಳ ಮೂರ್ತ ಸ್ವರೂಪಗಳೇ ನಮಗೆ "ಸಾಮಾಜಿಕ ಪ್ರಜ್ಞೆಯು" ಸೋಪಾನಗಳಾಗಿ, ನಮ್ಮ "ಸಾಮಾಜಿಕ ಪ್ರಜ್ಞೆಯು" ಅಂಗಗಳಾಗುತ್ತವೆಯೋ ಹೊರತು ಅದೊಂದು ಜೀವನದ ಅನುಭವಗಳಿಗಿಂತ, ಭಾವನೆಗಳಿಗಿಂತ ಭಿನ್ನವಾದುದಲ್ಲ. ಶೇಕ್ಸಪೀಯರನ ನಾಟಕಗಳಲ್ಲಿ ನಾವು ಕಾಣುವದು ಜೀವನದ ಪ್ರತಿಬಿಂಬವಲ್ಲ. ನಮ್ಮ ಜೀವನವನ್ನೇ. "ಸಾಮಾಜಿಕ ಪ್ರಜ್ಞೆಯ ಅಸ್ಪಷ್ಟವಾದ ವಿಚಾರಗಳಿಗೆ ಶೇಕ್ಸಪೀಯರನ ನಾಟಕಗಳಲ್ಲಿ ಅಭಿವ್ಯಕ್ತಿ ಇದೆ" ಮಾನವನ ಬಾಹ್ಯ ಜಗತ್ತಿಗೆ ಸೇರಿದ ಅನೇಕ ರೀತಿ-ನೀತಿಗಳು ಬದಲಾಗುತ್ತಲೇ ಇರುತ್ತವೆ. ಬದಲಾವಣೆ ಬಾಹ್ಯ ಜೀವನದ ಧರ್ಮ. ಆದರೆ ಮನುಷ್ಯನ ಅಂತರಂಗದಲ್ಲಿ ಹುದುಗಿದ ಭಾವನೆಗಳೆಂದಾದರೂ ಬದಲಾವಣೆ ಉಂಟೆ? ಎಂದಿಗೂ ಇಲ್ಲ. ಮಾನವನ ಬಾಹ್ಯ ಜಗತ್ತಿಗೆ ಸೇರಿದ ವಿಷಯಗಳನ್ನು ಚಿತ್ರಿಸುವಾಗ ಶೇಕ್ಸಪೀಯರ್ ತನ್ನ ದೇಶ ಕಾಲಗಳನ್ನು ಕೆಲ ಸಂದರ್ಭಗಳಲ್ಲಿ ಲಕ್ಷ್ಯದಲ್ಲಿಟ್ಟು ಕೃತಿಗಳನ್ನು ರಚಿಸಿದ್ದಾನೆ. ಆದರೆ ಮಾನವನ

ಅಂತರಂಗವನ್ನು ತನ್ನ ಕೃತಿಗಳಲ್ಲಿ ಅಳವಡಿಸಿದಾಗ ವಿಶ್ವ ಮಾನ್ಯವಾದ ದೇಶ ಕಾಲಗಳ ಪರಿಮಿತಿಯನ್ನೂ ಮೀರಿದ ಮಾನವೀಯ ಮೌಲ್ಯಗಳಿಗೆ ಪ್ರಾಧಾನ್ಯತೆ ಕೊಟ್ಟಿದ್ದಾನೆಂದೇ ಅವನ ಕೃತಿಗಳು ಇಂದಿಗೂ ವಿಶ್ವಮಾನ್ಯವಾಗಿವೆ. ಮಾನವನ ದ್ವಂದ್ವ ಭಾವಗಳನ್ನು ಕುರಿತು ಅವನ ಅಭಿಮತ ಯಾವದಾಗಿತ್ತೆಂಬುದನ್ನು ನಾವು ಅಷ್ಟು ಸ್ಪಷ್ಟವಾಗಿ ಅರಿಯುವದು ಸಾಧ್ಯ. ಇದೇ ಅವನ ಕಡೆಯ ತೀರ್ಪೆಂದು ಹೇಳುವದು ದುಷ್ಕರವಾದ ಮಾತಾದರೂ ನಮ್ಮ ಅನುಭವದ ಜೊತೆಗೆ ಅವನ ನಾಟಕಗಳಲ್ಲಿರುವ ಅನುಭವಗಳನ್ನು ವಿವೇಚನೆಯಿಂದ ಕೂಲಂಕಷವಾಗಿ ಪರಿಶೀಲಿಸಿದರೆ ಮುಖ್ಯವಾಗಿ ಸಾಮ್ಯವು ಈ ಕೆಳಗಿನ ವಿಷಯದಲ್ಲಿ ಕಂಡು ಬರುತ್ತದೆ. ಯಾವುದು ನ್ಯಾಯ ಯಾವುದು ಅನ್ಯಾಯ ಎಂಬುದನ್ನು ನಾವು ನಮ್ಮ ಜೀವನದ ಅನುಭವಗಳಿಂದ ಅರಿಯುತ್ತೇವೆಯೋ, ನಮ್ಮ ಅನುಭವಗಳು ನಮಗೆ ಹೇಗೆ ಸಹಾಯಕಾರಿಯಾಗಬಲ್ಲವೋ ಅದರಂತೆ ನಮ್ಮ ಅನುಭವಗಳನ್ನು ಯಥಾವತ್ತಾಗಿ ತನ್ನ ಕೃತಿಗಳಲ್ಲಿ ಅಳವಡಿಸಿಕೊಂಡ ಶೇಕ್ಸಪೀಯರನಿಗೆ ನ್ಯಾಯಾನ್ಯಾಯಗಳ ಪ್ರಜ್ಞೆ ಇರಲಿಲ್ಲವೆನ್ನುವದು ವಿಚಾರಹೀನರ ಮಾತೇ ಸರಿ. ಅವನ ಕೃತಿಗಳಲ್ಲಿಯ ಕಥಾ ನಿರೂಪಣೆ, ಪಾತ್ರ ಪೋಷಣೆ, ಮುಕ್ತಾಯಗಳೇ ಅವನ ನ್ಯಾಯಾನ್ಯಾಯಗಳ ಪ್ರಜ್ಞೆಗೆ ಕನ್ನಡಿ ಹಿಡಿಯುವ ವಸ್ತುಗಳು. "ಈಸಬೇಕು ಇದ್ದು ಜಯಿಸಬೇಕು" ಎಂಬ ಉಕ್ತಿಯನ್ನು ಶೇಕ್ಸಪೀಯರ್ ನಮಗೆ ನೆನಪು ಮಾಡಿ

ಕೊಡುತ್ತಾನೆ. "ಈ ಜಗವೆಲ್ಲ ನಾಟಕ, ನಾವೆಲ್ಲ ಪಾತ್ರಧಾರಿಗಳು" ಎಂಬುದನ್ನು ಹೇಳಿದ್ದಾನೆ. ಇಂಥ ಅಣಿ ಮುತ್ತುಗಳಿಗೆ ಶೇಕ್ಸ್ಪಿಯರನಲ್ಲಿ ಕೊರತೆಯೇ ಇಲ್ಲ. ನಮ್ಮ ಕನ್ನಡ ಸಾಹಿತ್ಯದಲ್ಲಿ ಪುರಂದರದಾಸ, ಸರ್ವಜ್ಞರುಗಳು ಶೇಕ್ಸ್ಪಿಯರನು ಹೇಳಿದ ಕೆಲವು ಮಾತುಗಳನ್ನೇ ಪುನರುಚ್ಚರಿಸಿದ್ದಾರೆ. ಹೀಗಾಗಿ ಶೇಕ್ಸ್ಪಿಯರನ ಕೃತಿಗಳಾಗಲಿ ಅವನ ನಾಟಕಗಳಲ್ಲಿಯ ಮಾತುಗಳ ಸರಣಿಯಾಗಲಿ ನಮಗೇನೂ ಹೊಚ್ಚ ಹೊಸದೇನಾಗುವದಿಲ್ಲ. ಶೇಕ್ಸ್ಪಿಯರ್ ನಮಗೆ ತೀರಾ ಹತ್ತಿರದ ಬಂಧುವಿನಂತೆ, ನಮ್ಮವರೊಳಗಿನ ಒಬ್ಬ ಅನುಭವಿ, ವಿಚಾರಶೀಲ ಗೃಹಸ್ಥನಂತೆ ತೋರುತ್ತಾನೆ. ಸತ್ಯಗ್ರಹಿಕೆಯ ಜೊತೆಗೆ ಸಹನೆಯೂ ಪರಿಹಾಸದ ಜೊತೆಗೆ ಹೃದಯ ವೈಶಾಲ್ಯವೂ ಶೇಕ್ಸ್ಪಿಯರನ ವ್ಯಕ್ತಿತ್ವಕ್ಕೆ, ಅವನ ಸಾಮಾಜಿಕ ಪ್ರಜ್ಞೆಗೆ ಹಿಡಿಯುವ ಕನ್ನಡಿಗಳಾಗಿವೆ. ಶೇಕ್ಸ್ಪಿಯರ್ ಕವಿಯಾಗಿ ಊಹೆಯ ರೆಕ್ಕೆಯನ್ನು ಕಟ್ಟಿಕೊಂಡು ಹಾರಾಡಿದವನೇನೋ ನಿಜ. ಆದರೆ ವೇದಾಂತಿಯಾಗಿ ರಸಜೀವನದ ಹೊರಗೆ ನಿಂತು "ಸ್ಥಿತಪ್ರಜ್ಞನಂತೆ" ಬಾಳು ಮತ್ತು ಅದರ ಸಮಸ್ಯೆಗಳನ್ನು ಬಗೆದು ನೋಡಿದವನೆಂದು ಹೇಳಲು ಸಾಧ್ಯವಿಲ್ಲ. ಸಾಮಾನ್ಯರಂತೆ ಜೀವನವನ್ನು ಅನುಭವಿಸಿ ನಮ್ಮ ಸುಖದುಃಖಗಳಲ್ಲಿ ಪಾಲುಗಾರನಾಗಿ ನಮ್ಮವರೊಳಗೆ ಒಬ್ಬನಂತೆ ಈ ಜೀವನದ ರಸಾಸ್ವಾದನೆಯನ್ನು ಮಾಡಿದವನೆಂದೇ ನಾವು ತಿಳಿಯಬೇಕು. ಅನುಭವಕ್ಕೆ ಮಿಗಿಲಾದದ್ದು ಇಲ್ಲವೆಂಬ ಶರಣರ ಮಾತನ್ನು ನಾವು

ಒಪ್ಪುವದಾದರೆ ಅವರ ಸಾಕ್ಷಾತ್ಕಾರದ ಪ್ರತ್ಯುಪರ್ವಕ ಪ್ರಯತ್ನವನ್ನು ನಾವು ಶೇಕ್ಸ್‌ಪಿಯರನ ನಾಟಕಗಳಲ್ಲಿ ಕಾಣಬಹುದು.

ನಾಟಕವು ಚಿತ್ರಗೋಚರವಾದ ಬಾಹ್ಯ ವಸ್ತುಗಳ ವಿಷಯಕ್ಕೆ ಸಂಬಂಧಿಸಿದ ದೃಷ್ಟಿಯಿಂದ ಕೂಡಿದೆಯೆನೋ ನಿಜ. ಹಾಗೆಂದಾಕ್ಷಣ ನಾಟಕಕಾರನಿಗೆ ಸ್ವಾತಂತ್ರ್ಯವಿಲ್ಲವೆನ್ನುವದು ಮಹಾ ಪ್ರಮಾದದ ಸಂಗತಿ. ನಾಟಕದಲ್ಲಿ ಕಂಡು ಬರುವ ಪಾತ್ರಗಳು ತಮ್ಮಷ್ಟಕ್ಕೆ ತಾವೇ ಹುಟ್ಟಿ ಬರುತ್ತವೆಯೋ ಹೇಗೆ? ಅಥವಾ ಅವುಗಳು ತಮ್ಮಷ್ಟಕ್ಕೆ ತಾವೇ ಅಭಿವೃದ್ಧಿಗೊಂಡು, ಸರ್ವತಂತ್ರ ಸ್ವತಂತ್ರವಾದ ರೀತಿಯಲ್ಲಿ ಮಾತನಾಡುತ್ತವೆಯೋ ಹೇಗೆ? ಇವೆಲ್ಲವುಗಳಿಗೆ ಉತ್ತರ ಒಂದೇ--ಅದು ನಾಟಕಕಾರನ ಕರ್ತೃತ್ವ ಶಕ್ತಿ, ಕಲ್ಪನಾ ಶಕ್ತಿಗಳ ಬಲದಿಂದಲೇ, ಪಾತ್ರಗಳು, ಸಂಭಾಷಣೆ ಕಥಾವಸ್ತುಗಳು ರೂಪುಗೊಂಡಿರುತ್ತವೆ. ಶೇಕ್ಸ್‌ಪಿಯರನ ನಾಟಕಗಳನ್ನು ಕೆಲವು ವಿಭಾಗ ಮಾಡಿ ಅವುಗಳನ್ನೇ ತುಲನಾತ್ಮಕವಾಗಿ ನಾವು ಅಭ್ಯಸಿಸಬೇಕು. ಈ ತುಲನಾತ್ಮಕ ಅಭ್ಯಾಸವೇ ನಮಗೆ ಅವನ ಸಾಮಾಜಿಕ ಪ್ರಜ್ಞೆಯನ್ನು ತೂಗಿ ನೋಡುವ ಅಳತೆಗೋಲು. ಇಂದಿಗೂ ವಿಶ್ವಮಾನ್ಯವಾದ ರುದ್ರ ನಾಟಕಗಳನ್ನು ಬರೆದು ಮನುಷ್ಯನ ಆಂತರಿಕ ಪ್ರಪಂಚದ ಆಗುಹೋಗುಗಳನ್ನೆಲ್ಲ ಬಗೆದು ಜಗತ್ತಿಗೆ ತೋರಿಸಿದ ಶೇಕ್ಸ್‌ಪಿಯರನಿಗೆ ಈ ಜೀವನದ ವ್ಯಾಪಾರದ ಬಗೆಗೆ ಅವನಿಗೆ ತನ್ನದೇ ಸ್ವತಂತ್ರ ವಿಚಾರಧಾರೆ ಇಲ್ಲವೆನ್ನುವದು ತಪ್ಪಾಗುತ್ತದೆ.

ಸಾಮಾಜಿಕ ಪ್ರಜ್ಞೆಗೇ ಕನ್ನಡಿ ಹಿಡಿಯುವ ಅವನ ಕೃತಿಗಳು, ಅವನ ಸಾಮಾಜಿಕ ಪ್ರಜ್ಞೆಗೇ ಹಿಡಿಯುವ ಕನ್ನಡಿಗಳಾಗಿವೆ. ಅವನ ಕಾಲ, ದೇಶಗಳನ್ನು ಅಭ್ಯಸಿಸಿದಾಗ ನಮಗೆ ವೇದ್ಯವಾಗುವ ಅಂಶವೇನೆಂದರೆ ತನ್ನ ಅಭಿಪ್ರಾಯಗಳನ್ನು ಢಂಗುರಘೋಷವಾಗಿ ಸಾರಿ ಹೇಳುವ ವಾತಾವರಣ ಅವನ ಕಾಲದಲ್ಲಿರಲಿಲ್ಲ. ಅದು ರಾಜಪ್ರಭುತ್ವದ ಕಾಲ. ಪ್ರತಿಯೊಬ್ಬನೂ ಅಂಜಿಕೊಂಡೇ ನಡೆಯಬೇಕಾಗಿತ್ತು. ಶೇಕ್ಸ್ಪೀಯರ್ ಕೂಡ ಇದಕ್ಕೆ ಹೊರತಾಗಿರಲಿಲ್ಲ. ಜಗತ್ತಿನ ದ್ವಂದ್ವಗಳ ವ್ಯವಹಾರವನ್ನೇ ಬಗೆದು ಅಳೆದು ನೋಡಿದವರಿಗೆ ಸ್ವತಂತ್ರವಾದ ವಿಚಾರಧಾರೆ, ಅಭಿಪ್ರಾಯವಿಲ್ಲವೆನ್ನುವದು ಹಾಸ್ಯಾಸ್ಪದದ ಮಾತೇ ಸರಿ. ಅವುಗಳನ್ನು ಗುಪ್ತಗಾಮಿನಿಯಂತೆ ಪಾತ್ರಗಳ ಘೋಷಣೆಗಳ ಮುಖಾಂತರ ಪ್ರವಹಿಸುವದು ಅವನಿಗೆ ಬಂದ ಜಾಯಮಾನ - ಏಕೆಂದರೆ ಅವನು ವಿಮರ್ಶಕನಾಗಿ ನಾಟಕ ಬರೆದವನಲ್ಲ. ಹಾಗಾಗಿದ್ದರೆ ಅವುಗಳ ಸ್ವರೂಪವೇ ಬದಲಾಗುತ್ತಿತ್ತು. ವಿಮರ್ಶಕರಾದ ನಾವು, ಅವನ ನಾಟಕಗಳಲ್ಲಿಯ ಒಗಟನ್ನು ಬಿಡಿಸಿ ಹೇಳಬೇಕಾಗಿದೆ.

೧೦. ಗ್ರಂಥಋಣ — **Bibliography**

1. Shakespeare's England — D. Wilson.
2. English Social History — Trevalyan.
3. English Drama — Nicoll.
4. Encyclopedia of Shakespeare — Cambell.
5. Encyclopedia of Social Sciences.
6. Encyclopedia of Brittanica.
7. Cassel's Encyclopedia.
8. Studies in Shakespeare — Chambers.
9. Shakespeare's Studies — W. Knight.
10. Elizabethan England — Clare Byrne.
11. Studies in Shakespeare — E. Dowden.
12. Shakespeare's Tragedy — Bradley.
13. The women in Shakespeare's Plays.
    — A. M. Mackenzee.
14. Shakespeare's Roman Plays. — Mac Callum.
15. Shakespeare's Problem Plays — Till yard.
16. Shakespeare's History plays — Till yard.
17. The Study of Shakespeare — Stephenson.

18. Pelican Guide to English literature
    — Boas. vol. II
19. English Literary History
    — Crompton & Rickett.
20. Short History of English Literature.
    — I for Evans
21. The Philosophy of Shakespeare.
    — K. J. Spalding
22. Shakespeare His World and his work—Rease.
23. Shakespeare's Comedies. — Sen Gupta.
24. Shakespeare. — Murray.
25. Shakespeare's Survey -VII volu — A. Nicoll.
26. Prefaces to Shakespeare part I & II
    — Granville - Barker.
27. Shakespear's England — Different Authors.
28. Life in Shakespeare's England.
    — J. P. Wilson.
29. Shakespeare's Humour — Different Authors
30. Shakespeare's Last plays. — Till yard.

ಉಪನ್ಯಾಸ ಗ್ರಂಥಮಾಲೆಯ ಇತ್ತೀಚಿನ ಪ್ರಕಟನೆಗಳು

ಬೆಲೆ : ಪ್ರತಿ ಒಂದಕ್ಕೆ ೨೫ ಪೈಸೆ

೧. ಹರಿಹರನ ಮೂರು ರಗಳೆಗಳು — ಎಂ. ಎಸ್. ಲಠ್ಠೆ
೨. ಪ್ರಾಚ್ಯವಸ್ತು ಸಂಶೋಧನೆ — ಅ. ಸುಂದರ
೩. ನವೋದಿತ ಬಂಗ್ಲಾ ದೇಶ — ಎ. ಎಂ. ರಾಜಶೇಖರಯ್ಯ
೪. ಕನ್ನಡದಲ್ಲಿ ಶತಕ ಸಾಹಿತ್ಯ — ಬಿ. ವ್ಹಿ. ಗುಂಜೆಟ್ಟಿ
೫. ಕನ್ನಡದಲ್ಲಿ ಲಲಿತ ಪ್ರಬಂಧಗಳು — ವಿ. ಎಸ್. ಸಿಂಪಿ
೬. ಇಕ್ಕೇರಿ ಅರಸರು — ಕೆ. ಗುಂಡಾ ಜೋಯಿಸ
೭. ಭೂಕಂಪಗಳು ಹಾಗೂ ಜ್ವಾಲಾಮುಖಿಗಳು — ಎಂ. ಎಫ್. ಕರೆಣ್ಣವರ
೮. ಟೀಕಾಚಾರ್ಯರು — ಪಿ. ಎಂ. ಗಲಗಲಿ
೯. ಭಾರತದಲ್ಲಿ ಭೂ ಅಭಿವೃದ್ಧಿ ಬ್ಯಾಂಕುಗಳು — ಟಿ. ಎಂ. ಪಂಡಿತ
೧೦. ರವೀಂದ್ರರ ಶೈಕ್ಷಣಿಕ ತತ್ವಜ್ಞಾನ – ಅನಂತ ಕುಲಕರ್ಣಿ

ವ್ಯಾಸಂಗ ವಿಸ್ತರಣ – ಪ್ರಕಟನ ವಿಭಾಗ

ಕರ್ನಾಟಕ ವಿಶ್ವವಿದ್ಯಾಲಯ : : ಧಾರವಾಡ–೩